ಸೋಮವಾರ, ಫೆಬ್ರುವರಿ 20, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 51 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಶಿಕ್ಷಣ
ಪಿಯು ಪ್ರವೇಶಕ್ಕೂ ಮುನ್ನ ವಿಷಯ ಸಂಯೋಜನೆ ಆಯ್ಕೆಯಲ್ಲಿ ಎದುರಾಗುವ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ...

ಆಳ-ಅಗಲ
ಡಬ್ಲ್ಯುಎಚ್‌ಒ ಕಳವಳ ಆಹಾರದಲ್ಲಿ ಕೀಟನಾಶಕ

'ಒಳ ಮೀಸಲು ಜಾರಿಗೆ ಸರ್ಕಾರದ ಸಹಮತ' 5
'ಬಿಜೆಪಿಗೆ ಸೋಲಿನ ಭೀತಿ' 5

2022ರ ಡಿಸೆಂಬರ್ ತ್ರೈಮಾಸಿಕ ಅವಧಿ
ಬ್ಯಾಂಕ್‌ಗಳ ಬಡ್ಡಿ ವರಮಾನ ಹೆಚ್ಚಳ 8

ಏಕನಾಥ ಶಿಂದೆ ಬಣದ ಮೇಲೆ ಗಂಭೀರ ಆರೋಪ ಮಾಡಿದ ಸಂಜಯ ರಾವುತ್

'ಶಿವಸೇನಾ'ಗಾಗಿ ₹2,000 ಕೋಟಿ

ಪ್ರಜಾವಾಣಿ ವಾರ್ತೆ

ಮುಂಬೈ: ಶಿವಸೇನಾ ಎಂಬ ಹೆಸರು ಮತ್ತು ಆ ಪಕ್ಷದ ಚಿಹ್ನೆಯಾದ ಬಿಲ್ಲು ಮತ್ತು ಬಾಣವು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣಕ್ಕೆ ದೊರೆಯುವಲ್ಲಿ ₹2,000 ಕೋಟಿ ಕೈಬದಲಾಗಿದೆ ಎಂಬ ಗಂಭೀರ ಆರೋಪವನ್ನು ಶಿವಸೇನಾದ ಉದ್ಧವ್ ಠಾಕ್ರೆ ಬಣದ ಮುಖ್ಯ ವಕ್ತಾರ ಸಂಜಯ ರಾವುತ್ ಅವರು ಭಾನುವಾರ ಮಾಡಿದ್ದಾರೆ. ಹೆಸರು ಮತ್ತು ಚಿಹ್ನೆಯನ್ನು ಚುನಾವಣಾ ಆಯೋಗವು ಶಿಂದೆ ಬಣಕ್ಕೆ ಶುಕ್ರವಾರ ನೀಡಿದೆ.


ಸಂಜಯ ರಾವುತ್

ಶಿಂದೆ ಬಣ ಮತ್ತು ಬಿಜೆಪಿ ಈ ಆರೋಪವನ್ನು ಅಲ್ಲಗಳೆದಿವೆ. ರಾವುತ್ ಅವರ ಮೇಲೆ ಹರಿಹಾಯ್ದಿವೆ.

'ಛತ್ರಪತಿ ಶಿವಾಜಿ ಮಹಾರಾಜರ ಆಶೀರ್ವಾದ ಇರುವುದರಿಂದಲೇ ಬಿಲ್ಲು-ಬಾಣ ಚಿಹ್ನೆಯು ನಮಗೆ ಸಿಕ್ಕಿದೆ' ಎಂದು ಏಕನಾಥ ಶಿಂದೆ ಅವರು ಪುಣೆಯಲ್ಲಿ ನಡೆದ ಶಿವ ಜಯಂತಿ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೂ ಆ ವೇದಿಕೆಯಲ್ಲಿ ಇದ್ದರು.

ರಾಜ್ಯಸಭಾ ಸದಸ್ಯರೂ ಆಗಿರುವ ರಾವುತ್ ಅವರು ಭಾನುವಾರ ಎರಡು ಟ್ವೀಟ್‌ಗಳಲ್ಲಿ ಲಂಚದ ಆರೋಪ ಮಾಡಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದಾಗ ಅದೇ ಆರೋಪವನ್ನು ಪುನರುಚ್ಚರಿಸಿದ್ದಾರೆ. ಪ್ರಧಾನಿಯವರ ಕಚೇರಿ ಮತ್ತು ಚುನಾವಣಾ ಆಯೋಗವನ್ನು ಟ್ವೀಟ್‌ಗಳಿಗೆ ಅವರು ಟ್ಯಾಗ್ ಮಾಡಿದ್ದಾರೆ.

'ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ಪಡೆದುಕೊಳ್ಳುವ ವಿಚಾರದಲ್ಲಿ ₹2,000 ಕೋಟಿ ಕೈಬದಲಾಗಿದೆ ಎಂಬುದು ಖಚಿತ. ಇದು ನೂರು ಶೇಕಡ ಸತ್ಯ. ಇದು ಆರಂಭದ ಮಾಹಿತಿ, ಇನ್ನಷ್ಟು ವಿವರಗಳು ಮುಂದೆ ಬಹಿರಂಗ ಆಗಲಿವೆ. ಇಂತಹದ್ದು ದೇಶದಲ್ಲಿ ಈವರೆಗೆ ಆಗಿಯೇ ಇಲ್ಲ' ಎಂದು ರಾವುತ್ ಟ್ವೀಟ್‌ನಲ್ಲಿ ಹೇಳಿದ್ದಾರೆ.

'ಪೂರ್ಣ ಜವಾಬ್ದಾರಿಯೊಂದಿಗೆ ನಾನು ಇದನ್ನು ಹೇಳುತ್ತಿದ್ದೇನೆ. ನನ್ನಲ್ಲಿ ಮಾಹಿತಿ ಇದೆ. ಕಾರ್ಪೊರೇಟರ್‌ಗಳಿಗೆ ತಲಾ ₹50 ಲಕ್ಷ, ಶಾಸಕರಿಗೆ ತಲಾ ₹50 ಕೋಟಿ ಮತ್ತು ಸಂಸದರಿಗೆ ತಲಾ ₹100 ಕೋಟಿ ನೀಡಲಾಗಿದೆ' ಎಂದು ರಾವುತ್ ಆರೋಪಿಸಿದ್ದಾರೆ.

'ಅವರಿಗೆ (ಶಿಂದೆ ಬಣದವರಿಗೆ) ಆಪ್ತರಾಗಿರುವ ಬಿಲ್ಡರ್ ಒಬ್ಬರಿಂದ ಈ ಮಾಹಿತಿ ದೊರೆಯಿತು. ಅವರಲ್ಲಿ ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ಇವೆ. ಶೀಘ್ರವೇ ಅವರು ಇದನ್ನು ಬಹಿರಂಗ ಪಡಿಸಲಿದ್ದಾರೆ. ದಿಲ್ಲಿಯಿಂದ ಗಲ್ಲಿಯವರೆಗೆ ಈ ಕುರಿತು ಚರ್ಚೆ ನಡೆಯುತ್ತಿದೆ' ಎಂದು ರಾವುತ್ ಹೇಳಿದ್ದಾರೆ.

ಶಿಂದೆ ಬಣದ ತಿರುಗೇಟು

ರಾವುತ್ ಅವರನ್ನು ಶಿಂದೆ ಬಣದ ಮುಖಂಡರು ಟೀಕಿಸಿದ್ದಾರೆ. 'ರಾವುತ್ ಅವರು ಕ್ಯಾಷಿಯರ್ ಆಗಿದ್ದಾರೆಯೇ' ಎಂದು ಶಿಂದೆ ಬಣದ ಶಾಸಕ ಸದಾ ಸರ್ವಣಕರ್ ಪ್ರಶ್ನಿಸಿದ್ದಾರೆ.

'ರಾವುತ್ ಹೇಳಿದ್ದನ್ನು ಉದ್ಧವ್ ಅವರು ಒಪ್ಪಿಕೊಳ್ಳುತ್ತಾರೆಯೇ... ಈ ಹೇಳಿಕೆಯಿಂದಾಗಿ ಮಹಾರಾಷ್ಟ್ರ ರಾಜ್ಯವೇ ನಗುತ್ತಿದೆ. ಈ ವ್ಯಕ್ತಿಯನ್ನು ಉದ್ಧವ್ ಹೇಗೆ ಸಹಿಸಿಕೊಳ್ಳುತ್ತಿದ್ದಾರೆ. ರಾವುತ್ ಅವರು ₹50 ಕೋಟಿಯಿಂದ ಆರಂಭಿಸಿದರು. ಈಗ ಅದು ₹2,000 ಕೋಟಿಗೆ ತಲುಪಿದೆ' ಎಂದು ಶಿಂದೆ ಬಣದ ಶಾಸಕ ಸಂಜಯ್ ಶಿರ್ಸಾಟ್ ಹೇಳಿದ್ದಾರೆ.

'ಈ ರೀತಿಯ ಆರೋಪಗಳನ್ನು ಮಾಡುವವರಿಗೆ ಮತಿಭ್ರಮಣೆ ಆಗಿರುತ್ತದೆ' ಎಂದು ಮುಂಬೈ ಬಿಜೆಪಿ ಘಟಕದ ಮುಖ್ಯಸ್ಥ ಆಶೀಶ್ ಶೇಲಾರ್ ಅವರು ಹೇಳಿದ್ದಾರೆ.


ಹಿಂದುತ್ವ ಬಿಟ್ಟಿಲ್ಲ: ಉದ್ಧವ್

'ನೀವು ಬಿಲ್ಲು ಬಾಣವನ್ನು ಕದಿಯಬಹುದು. ಆದರೆ, ನಮ್ಮ ಜನರ ಹೃದಯದಲ್ಲಿ ಇರುವ ಶ್ರೀರಾಮನನ್ನು ಕದ್ದೊಯ್ಯಲಾಗದು. ಇಂದು ನನ್ನಲ್ಲಿ ಏನೂ ಇಲ್ಲ. ಮೈಕ್ ಮಾತ್ರ ಇದೆ. ನಾನು ಮನದ ಮಾತು ಅಲ್ಲ, ಹೃದಯದ ಮಾತು ಆಡಲಿದ್ದೇನೆ. ನಾನು ಬಿಜೆಪಿಯನ್ನು ಬಿಟ್ಟಿದ್ದೇನೆ, ಆದರೆ ಹಿಂದುತ್ವವನ್ನು ಅಲ್ಲ' ಎಂದು ಶಿವಸೇನಾ ಉದ್ಧವ್ ಬಣದ ಮುಖ್ಯಸ್ಥ ಉದ್ಧವ್ ಠಾಕ್ರೆ ಹೇಳಿದ್ದಾರೆ.

'ಸುಳ್ಳಿನ ಬಲದಲ್ಲಿ ಗರ್ಜಿಸುತ್ತಿದ್ದವರಿಗೆ ಸತ್ಯ ಯಾರ ಕಡೆಗೆ ಇದೆ ಎಂಬುದು ಈಗ ಅರಿವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆಗೆ ಉದ್ಧವ್ ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ.

ಶಿವಸೇನಾದ ಏಕನಾಥ ಶಿಂದೆ ಬಣಕ್ಕೆ ಚುನಾವಣಾ ಆಯೋಗವು ಹೆಸರು ಮತ್ತು ಚಿಹ್ನೆ ನೀಡಿದ್ದಕ್ಕೆ ಸಂಬಂಧಿಸಿದ ವಿವಾದದ ಭಾಗವಾಗಲು ನಾನು ಬಯಸುವುದಿಲ್ಲ
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ಆರೋಪ ಆಧಾರರಹಿತ. ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಗಳು. ಈ ಸಂಸ್ಥೆಗಳನ್ನು ರಾವುತ್ ಅವರು ಅಪಮಾನಿಸಿದ್ದಾರೆ
ಸುಧೀರ್ ಮುಂಗಟಿವಾರ್
ಮಹಾರಾಷ್ಟ್ರದ ಸಚಿವ


ರಥೋತ್ಸವ ಹುಬ್ಬಳ್ಳಿಯ ಸಿದ್ಧಾರೂಢರ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಭಕ್ತ ಸಾಗರದ ನಡುವೆ ರಥೋತ್ಸವ ಅದ್ಧೂರಿಯಾಗಿ ಜರುಗಿತು
–ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ರಸ್ತೆ ಅಗೆಯುವ ಮುನ್ನ ಅನುಮತಿ ಕಡ್ಡಾಯ: ಕೇಂದ್ರ

ದೂರಸಂಪರ್ಕ ವಲಯಕ್ಕೆ ₹3 ಸಾವಿರ ಕೋಟಿ ನಷ್ಟ

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು
- ಇಲಾಖೆಗಳ ಸಮನ್ವಯ ಕೊರತೆಯಿಂದ ಸಮಸ್ಯೆ
- ಕಾಲ್ ಬಿಫೋರ್ ಯು ಡಿಗ್ ಆ್ಯಪ್ ಅಭಿವೃದ್ಧಿಪಡಿಸಿರುವ ಸಚಿವಾಲಯ
- ದೇಶದಾದ್ಯಂತ ಮಾರ್ಚ್‌ನಲ್ಲಿ ಆ್ಯಪ್ ಬಿಡುಗಡೆ

ನವದೆಹಲಿ: ಕರ್ನಾಟಕ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಮನಸ್ಸಿಗೆ ಬಂದಂತೆ ರಸ್ತೆ ಅಗೆಯುವುದರಿಂದ ದೂರಸಂಪರ್ಕ ವಲಯಕ್ಕೆ ವಾರ್ಷಿಕ ₹3 ಸಾವಿರ ಕೋಟಿ ನಷ್ಟ ಉಂಟಾಗುತ್ತಿದೆ. ಇನ್ನು ಮುಂದೆ ರಸ್ತೆ ಅಗೆಯುವ ಮುನ್ನ ಸಂಬಂಧಿಸಿದ ಇಲಾಖೆಗಳು ಅನುಮತಿ ಪಡೆಯುವುದು ಕಡ್ಡಾಯ ಎಂದು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ.

ಈ ಸಂಬಂಧ ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಕೇಂದ್ರ ದೂರಸಂಪರ್ಕ ಸಚಿವಾಲಯದ ಕಾರ್ಯದರ್ಶಿ ಕೆ.ರಾಜಾರಾಮನ್, 'ದೇಶದಲ್ಲಿ ಮೂಲಸೌಕರ್ಯ ಒದಗಿಸಲು ಸಾರ್ವಜನಿಕ ಸ್ಥಳಗಳು ಹಾಗೂ ರಸ್ತೆಗಳನ್ನು ಹಲವು ಇಲಾಖೆಗಳು ಅಗೆಯುತ್ತಿವೆ. ಇದರಿಂದಾಗಿ, ಈಗಾಗಲೇ ಇರುವ ಮೂಲಸೌಕರ್ಯಗಳಿಗೆ ಹಾನಿ ಆಗುತ್ತಿದೆ. ಜತೆಗೆ, ದೊಡ್ಡ ಪ್ರಮಾಣದ ವಾಣಿಜ್ಯ ಹಾಗೂ ಆರ್ಥಿಕ ನಷ್ಟ ಉಂಟಾಗುತ್ತಿದೆ. ಸಾರ್ವಜನಿಕರು ಪಡಿಪಾಟಲು ಅನುಭವಿಸುತ್ತಿದ್ದಾರೆ. ಇದಕ್ಕೆ ಈಗಿರುವ ಮೂಲಸೌಕರ್ಯ ವ್ಯವಸ್ಥೆಗಳ ಮಾಹಿತಿ ಕೊರತೆ ಹಾಗೂ ಸಾಮಾನ್ಯ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಇಲ್ಲದಿರುವುದು ಕಾರಣ' ಎಂದು ತಿಳಿಸಿದ್ದಾರೆ.

ರಸ್ತೆ ಅಗೆಯುವುದರಿಂದ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ), ನೀರಿನ ಪೈಪ್‌ಲೈನ್, ವಿದ್ಯುತ್ ಕೇಬಲ್ ಹಾಗೂ ಅನಿಲ ಪೈಪ್‌ಲೈನ್‌ಗೆ ಹಾನಿ ಆಗುತ್ತಿದೆ. ದೂರಸಂಪರ್ಕ ವಲಯದಲ್ಲೇ ವರ್ಷಕ್ಕೆ 10 ಲಕ್ಷ ಆಪ್ಟಿಕಲ್ ಫೈಬರ್ ಕೇಬಲ್‌ಗಳು ತುಂಡಾಗುತ್ತಿವೆ. ಅದೇ ರೀತಿ, ನೀರಿನ ಪೈಪ್‌ಲೈನ್, ವಿದ್ಯುತ್ ಹಾಗೂ ಒಳಚರಂಡಿ ಪೈಪ್‌ಲೈನ್‌ಗೆ ತೊಂದರೆ ಆಗುತ್ತಿದೆ. ಇದಕ್ಕೆ ಇಲಾಖೆಗಳ ಸಮನ್ವಯದ ಕೊರತೆ ಸಹ ಕಾರಣ ಎಂದು ಬೊಟ್ಟು ಮಾಡಿದ್ದಾರೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ದೂರಸಂಪರ್ಕ ಸಚಿವಾಲಯವು 'ಕಾಲ್ ಬಿಫೋರ್ ಯು ಡಿಗ್' ಆ್ಯಪ್ ಅಭಿವೃದ್ಧಿಪಡಿಸುತ್ತಿದೆ. ಗುಜರಾತ್ ರಾಜ್ಯ, ದಾದ್ರಾ ಮತ್ತು ನಗರ್ ಹವೇಲಿ ಕೇಂದ್ರಾಡಳಿತ ಪ್ರದೇಶದಲ್ಲಿ ಈ ಆ್ಯಪ್ ಈಗಾಗಲೇ ಪ್ರಾಯೋಗಿಕವಾಗಿ ಕಾರ್ಯಾಚರಣೆ ನಡೆಸುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲ ರಾಜ್ಯಗಳಿಗೆ ಇದನ್ನು ವಿಸ್ತರಿಸಲಾಗುತ್ತದೆ. ಮಾರ್ಚ್ 22ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಆ್ಯಪ್ ಬಿಡುಗಡೆ ಮಾಡಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ರಸ್ತೆ ಅಗೆಯುವ ಇಲಾಖೆ ಹಾಗೂ ಆಸ್ತಿಯ ಮಾಲೀಕತ್ವ ಹೊಂದಿರುವ ಇಲಾಖೆ (ವಿದ್ಯುತ್, ದೂರಸಂಪರ್ಕ ಇತ್ಯಾದಿ) ನಡುವೆ ಸಮನ್ವಯ ಸಾಧಿಸಲು ಈ ಆ್ಯಪ್ ನೆರವಾಗಲಿದೆ. ಈ ಆ್ಯಪ್ ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತೆ ನೆರವಾಗಲು ರಾಜ್ಯ ಸರ್ಕಾರಗಳು ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಹಾಗೂ ಸ್ಟೇಟ್ ಅಡ್ಮಿನ್ ಅಕೌಂಟ್ ಮಾಡಿಕೊಳ್ಳಬೇಕು. ಎಲ್ಲ ಇಲಾಖೆಗಳು ತಮ್ಮ ಮೂಲಸೌಕರ್ಯ ಜಾಲಗಳ ಕುರಿತು ಮಾಹಿತಿ ಒದಗಿಸಬೇಕು. ಮುಂದಿನ ದಿನಗಳಲ್ಲಿ ಎಲ್ಲ ಇಲಾಖೆಗಳು ಈ ಆ್ಯಪ್‌ನಲ್ಲಿ ಮಾಹಿತಿ ನೀಡಿ ರಸ್ತೆ ಅಗೆಯಬೇಕು. ಈ ಬಗ್ಗೆ ಎಲ್ಲ ಇಲಾಖೆಗಳಿಗೆ ನಿರ್ದೇಶನ ನೀಡಬೇಕು. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅವರು ಸೂಚಿಸಿದ್ದಾರೆ.

ರೂಪಾ- ರೋಹಿಣಿ ಬಹಿರಂಗ ಜಟಾಪಟಿ

ಐಪಿಎಸ್ ಅಧಿಕಾರಿ ಡಿ. ರೂಪಾ ಮತ್ತು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಬಹಿರಂಗ ಸಂಘರ್ಷಕ್ಕೆ ಇಳಿದಿದ್ದಾರೆ. ಇಬ್ಬರೂ ಆರೋಪ- ಪ್ರತ್ಯಾರೋಪಗಳಲ್ಲಿ ನಿರತರಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕರಣ ಜೋರು ಚರ್ಚೆಯಾಗುತ್ತಿದೆ. ಶಾಸಕ ಸಾ.ರಾ. ಮಹೇಶ್ ಜತೆ ಸಿಂಧೂರಿ ಸಂಧಾನಕ್ಕೆ ಯತ್ನಿಸಿದ್ದಾರೆ ಎಂಬ ಸುದ್ದಿಯನ್ನು ಪ್ರಸ್ತಾಪಿಸಿ ರೂಪಾ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಸಿಂಧೂರಿ ಕಾನೂನು ಕ್ರಮದ ಎಚ್ಚರಿಕೆ ನೀಡಿದ್ದಾರೆ

ರೋಹಿಣಿ ಸಿಂಧೂರಿ ಭ್ರಷ್ಟಾಚಾರಕ್ಕೆ ಸರ್ಕಾರದ ರಕ್ಷಣೆ: ರೂಪಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಕಾನೂನು ಕ್ರಮ ಜರುಗಿಸಬೇಕಾದ ರಾಜ್ಯ ಸರ್ಕಾರವೇ ಅವರಿಗೆ ರಕ್ಷಣೆ ನೀಡುತ್ತಿದೆ' ಎಂದು ಐಪಿಎಸ್ ಅಧಿಕಾರಿ ಡಿ.ರೂಪಾ ಆರೋಪಿಸಿದ್ದಾರೆ.



ತಮ್ಮ ವಿರುದ್ಧ ಆರೋಪ ಮಾಡಿದ್ದ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಅವರನ್ನು ಭೇಟಿ ಮಾಡಿದ್ದ ಸಿಂಧೂರಿ ಸಂಧಾನಕ್ಕೆ ಯತ್ನಿಸಿದ್ದರು ಎಂಬ ಮಾಧ್ಯಮ ವರದಿಯ ತುಣುಕೊಂದನ್ನು ಫೇಸ್‌ಬುಕ್, ಟ್ವಿಟರ್ ಮತ್ತಿತರ ಸಾಮಾಜಿಕ ಮಾಧ್ಯಮಗಳ ತಮ್ಮ ಖಾತೆಯಲ್ಲಿ ಹಂಚಿಕೊಂಡಿರುವ ರೂಪಾ, ನೇರವಾಗಿ ಹಲವು ಆರೋಪಗಳನ್ನು ಮಾಡಿದ್ದಾರೆ.

'ಸಿಂಧೂರಿ ಮಂಡ್ಯದಲ್ಲಿದ್ದಾಗ ಶೌಚಾಲಯ ನಿರ್ಮಾಣದ ವಿಚಾರದಲ್ಲಿ ಸುಳ್ಳು ಅಂಕಿ- ಅಂಶ ನೀಡಿ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ಪಡೆದುಕೊಂಡಿದ್ದರು. ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿಂದ 24 ಜನರು ಮೃತಪಟ್ಟಾಗ ಇವರ ಮೇಲೆ ನೇರ ಆರೋಪ ಬಂದರೂ ಪಾರಾದರು. ಅಗ್ಗದ ಬೆಲೆಯ ಚೀಲಗಳನ್ನು ದುಬಾರಿ ದರಕ್ಕೆ ಮಾರಾಟ ಮಾಡಿದ ಪ್ರಕರಣದಲ್ಲಿ ಲೋಕಾಯುಕ್ತರು ತನಿಖೆಗೆ ಶಿಫಾರಸು ಮಾಡಿದರೂ ಸರ್ಕಾರ ಅದನ್ನು ತಿರಸ್ಕರಿಸಿತು. ಇಂತಹ ರಕ್ಷಣೆ ಕನ್ನಡಿಗ ಅಧಿಕಾರಿಗಳಿಗೆ ಸಿಗಲು ಸಾಧ್ಯವೇ' ಎಂದು ಪ್ರಶ್ನಿಸಿದ್ದಾರೆ.

8ನೇ ಪುಟ ನೋಡಿ

ರೂಪಾ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ: ರೋಹಿಣಿ

ಬೆಂಗಳೂರು: 'ಜವಾಬ್ದಾರಿಯುತ ಸ್ಥಾನದಲ್ಲಿರುವ ಐಪಿಎಸ್ ಅಧಿಕಾರಿ ರೂಪಾ ಅವರು ನನ್ನ ಮೇಲೆ ವೈಯಕ್ತಿಕ ಹಗೆ ಸಾಧಿಸುವುದಕ್ಕಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡವರಂತೆ ವರ್ತಿಸುತ್ತಿದ್ದಾರೆ' ಎಂದು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹೇಳಿದ್ದಾರೆ.



ತಮ್ಮ ವಿರುದ್ಧ ರೂಪಾ ಮಾಡಿರುವ ಆರೋಪ ಕುರಿತು ಪತ್ರಿಕಾ ಹೇಳಿಕೆಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ಮಾನಸಿಕ ಅಸ್ವಸ್ಥತೆ ಬಹುದೊಡ್ಡ ಸಮಸ್ಯೆ. ಸೂಕ್ತ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಮೂಲಕ ಅದನ್ನು ಗುಣಪಡಿಸಬೇಕು. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮಾನಸಿಕ ಅಸ್ವಸ್ಥತೆಗೆ ಒಳಗಾದರೆ ಅದು ಸಮಾಜಕ್ಕೆ ಬಹುದೊಡ್ಡ ಅಪಾಯಕಾರಿ ಬೆಳವಣಿಗೆ' ಎಂದಿದ್ದಾರೆ.

'ಪ್ರಚಾರಕ್ಕಾಗಿ ಇತರರ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುವುದು ರೂಪಾ ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ದ್ವೇಷಿಸುವ ವ್ಯಕ್ತಿಗಳ ಮೇಲೆ ವೈಯಕ್ತಿಕ ಹಗೆತನ ಸಾಧಿಸಲು ಕೀಳುಮಟ್ಟದ ಪ್ರವೃತ್ತಿ ಪ್ರದರ್ಶಿಸುತ್ತಾರೆ. ಸುದ್ದಿಯ ಕೇಂದ್ರವಾಗುವುದಕ್ಕಾಗಿ ಇನ್ನೊಬ್ಬರನ್ನು ತೇಜೋವಧೆ ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ' ಎಂದು ದೂರಿದ್ದಾರೆ.

8ನೇ ಪುಟ ನೋಡಿ

ನೌಕರಿ ಕಡಿತದ ಆಲೋಚನೆ ಇಲ್ಲ: ಟಿಸಿಎಸ್

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ನೌಕರರನ್ನು ಕೆಲಸದಿಂದ ತೆಗೆಯುವ ಪ್ರಸ್ತಾವ ತನ್ನ ಮುಂದಿಲ್ಲ ಎಂದು ಹೇಳಿದೆ.

'ಕೆಲಸ ಕಳೆದುಕೊಂಡಿರುವ, ನವೋದ್ಯಮಗಳ ನೌಕರರನ್ನು ನೇಮಕ ಮಾಡಿಕೊಳ್ಳುವ ಆಲೋಚನೆ ನಮಗಿದೆ' ಎಂದು ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಮಿಲಿಂದ್ ಲಕ್ಕಡ್ ಹೇಳಿದ್ದಾರೆ. ಜಗತ್ತಿನ ಹಲವೆಡೆ ತಂತ್ರಜ್ಞಾನ ವಲಯದ ಕಂಪನಿಗಳು ನೌಕರರನ್ನು ಕೆಲಸದಿಂದ ತೆಗೆಯುತ್ತಿರುವ ಹೊತ್ತಿನಲ್ಲಿ ಟಿಸಿಎಸ್ ಹೇಳಿಕೆ ಮಹತ್ವ ಪಡೆದಿದೆ.

ನೌಕರರನ್ನು ಕೆಲಸದಿಂದ ತೆಗೆಯಲಾಗುತ್ತದೆಯೇ ಎಂಬ ಪ್ರಶ್ನೆಗೆ, 'ನಾವು ಕೆಲಸದಿಂದ ತೆಗೆಯುವುದಿಲ್ಲ. ನಮಗೆ ಪ್ರತಿಭೆಗಳನ್ನು ನಮ್ಮಲ್ಲಿಯೇ ಬೆಳೆಸುವುದರಲ್ಲಿ ನಂಬಿಕೆ ಇದೆ' ಎಂದು ಲಕ್ಕಡ್ ಅವರು ಹೇಳಿದ್ದಾರೆ.

ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡ ಕಂಪನಿಗಳು ಈಗ ನೌಕರರನ್ನು ಕೆಲಸದಿಂದ ತೆಗೆಯುತ್ತಿವೆ. ಆದರೆ 'ಎಚ್ಚರಿಕೆಯಿಂದ ನೇಮಕ ಮಾಡಿಕೊಳ್ಳುವ ಟಿಸಿಎಸ್, ನೌಕರರನ್ನು ಹೆಚ್ಚು ಉತ್ಪಾದಕವಾಗಿ ಇರುವಂತೆ ನೋಡಿಕೊಳ್ಳುವುದು ತನ್ನ ಹೊಣೆ ಎಂದು ಭಾವಿಸುತ್ತದೆ' ಎಂದು ಅವರು ವಿವರಿಸಿದ್ದಾರೆ.

'ಅಮೆರಿಕದಲ್ಲಿ ಕೆಲಸ ಕಳೆದುಕೊಂಡಿರುವ ಭಾರತ ಮೂಲದವರನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಕಂಪನಿ ಮುಕ್ತವಾಗಿದೆ' ಎಂದು ಅವರು ತಿಳಿಸಿದ್ದಾರೆ.


ರವೀಂದ್ರ 'ಜಾಲ'ದಲ್ಲಿ ಬಿದ್ದ ಆಸ್ಟ್ರೇಲಿಯಾ

ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಬಾರ್ಡರ್-ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿಯ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನವೇ ಜಯಭೇರಿ ಬಾರಿಸಿತು. ಈ ಪಂದ್ಯದ ಎರಡೂ ಇನಿಂಗ್ಸ್‌ಗಳು ಸೇರಿ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಒಟ್ಟು ಹತ್ತು ವಿಕೆಟ್ ಗಳಿಸಿದರು.

ಮೊದಲ ಇನಿಂಗ್ಸ್
ಆಸ್ಟ್ರೇಲಿಯಾ: **263** (78.4 ಓವರ್‌ಗಳಲ್ಲಿ)
ಭಾರತ: **262** (83.3 ಓವರ್‌ಗಳಲ್ಲಿ)

ಎರಡನೇ ಇನಿಂಗ್ಸ್
ಆಸ್ಟ್ರೇಲಿಯಾ: **113** (31.1 ಓವರ್‌ಗಳಲ್ಲಿ)
ಭಾರತ: **4ಕ್ಕೆ 118** (26.4 ಓವರ್‌ಗಳಲ್ಲಿ)

ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ. ಸರಣಿಯಲ್ಲಿ 2-0 ಮುನ್ನಡೆ.



ದಾಖಲೆಗಳು

12.1 ರವೀಂದ್ರ ಜಡೇಜ ಏಳು ವಿಕೆಟ್‌ಗಳಿಸಲು ಬೌಲಿಂಗ್ ಮಾಡಿದ ಓವರ್‌ಗಳು. ಕಡಿಮೆ ಓವರ್‌ಗಳಲ್ಲಿ ಏಳಕ್ಕಿಂತ ಹೆಚ್ಚು ವಿಕೆಟ್ ಪಡೆದ ಭಾರತದ ಬೌಲರ್‌ಗಳಲ್ಲಿ ಇವರು ಮೊದಲ ಸ್ಥಾನದಲ್ಲಿದ್ದಾರೆ.

13 ಪಂದ್ಯದ ಮೂರನೇ ದಿನವಾದ ಭಾನುವಾರ ಪತನವಾದ ಒಟ್ಟು ವಿಕೆಟ್‌ಗಳು. ಇವೆಲ್ಲವೂ ಸ್ಪಿನ್ ಬೌಲರ್‌ಗಳ ಪಾಲಾದವು

ರವೀಂದ್ರ ಜಡೇಜ
ಓವರ್ 12.1
ಮೇಡನ್ 1
ರನ್ 42
ವಿಕೆಟ್ 7

ವಿವರ ಪುಟ-10

ಒಳ ಪುಟ
ಯುಪಿಎ ಅವಧಿಯಲ್ಲಿ ಭಾರಿ ಭ್ರಷ್ಟಾಚಾರ: ಅಮಿತ್ ಶಾ 9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಲೋಹ, ರಬ್ಬರ್ ಶೀಟ್, ಮೋಟಾರು ಬಳಸಿ ತಯಾರಿ

ಕೇರಳದ ದೇಗುಲಕ್ಕೆ ಬಂತು ಇ–ಆನೆ!

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಧಾರ್ಮಿಕ ಆಚರಣೆಗಳಿಗೆ ಆನೆಗಳನ್ನು ಬಾಡಿಗೆಗೆ ಪಡೆಯುವುದು ದುಬಾರಿಯಾಗಿರುವುದರಿಂದ ಮತ್ತು ಉತ್ಸವದ ವೇಳೆ ಅವುಗಳು ಮದವೇರಿ ಜನರ ಮೇಲೆ ದಾಳಿ ನಡೆಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ತ್ರಿಶ್ಶೂರು ಜಿಲ್ಲೆಯ ಇರಿಂಜಾಲಕುಡದ ಇರಿಂಜಾಡಪಿಳ್ಳಿ ಶ್ರೀಕೃಷ್ಣ ದೇವಾಲಯವು ಇ-ಆನೆಯ (ಎಲೆಕ್ಟ್ರಾನಿಕ್ ಆನೆ) ಮೊರೆ ಹೋಗಿದೆ.


ಇ–ಆನೆ

11 ಅಡಿ ಎತ್ತರದ ಇ-ಆನೆಯನ್ನು ಲೋಹ, ರಬ್ಬರ್ ಶೀಟ್ ಮತ್ತು ಮೋಟಾರು ಬಳಸಿ ತಯಾರಿಸಲಾಗಿದೆ. ಆನೆಯ ತಲೆ, ಕಿವಿಗಳು ಮತ್ತು ಬಾಲವು ಚಲಿಸಲು ಮೋಟಾರು ಅಳವಡಿಸಲಾಗಿದೆ. ಈ ಕೃತಕ ಆನೆಯು ಸೊಂಡಿಲಿನಿಂದ ನೀರನ್ನು ಸಿಂಪಡಿಸುವ ಸಾಮರ್ಥ್ಯವನ್ನೂ ಹೊಂದಿದೆ. ಇದರ ಚಲನೆಗಾಗಿ ಕಾಲುಗಳಿಗೆ ಚಕ್ರಗಳನ್ನು ಅಳವಡಿಸಲಾಗಿದ್ದು, ಆನೆ ಮೇಲೆ ನಾಲ್ವರು ಕುಳಿತುಕೊಳ್ಳಬಹುದಾಗಿದೆ ಎಂದು ದೇಗುಲದ ಮೂಲಗಳು ತಿಳಿಸಿವೆ.

ಇ- ಆನೆಗೆ ಇರಿಂಜಾಡಪಿಳ್ಳಿ ರಾಮನ್ ಎಂದು ಹೆಸರಿಡಲಾಗಿದೆ. ಇದು ಕೇರಳದ ಜನಪ್ರಿಯ ಸಾಕಾನೆ ತೆಚಿಕೊಟ್ಟುಕಾವು ರಾಮಚಂದ್ರನ್ ಅನ್ನು ಹೋಲುತ್ತಿದ್ದು, ಜನರ ಗಮನ ಸೆಳೆಯುತ್ತಿದೆ ಎಂದಿವೆ.

ಇರಿಂಜಾಡಪಿಳ್ಳಿ ಶ್ರೀಕೃಷ್ಣ ದೇವಾಲಯವು ರಾಜ್‌ಕುಮಾರ್ ನಂಬೂದಿರಿ ಎಂಬುವವರ ಕುಟುಂಬಕ್ಕೆ ಸೇರಿದ್ದು, ರಾಜ್‌ಕುಮಾರ್ ಅವರು ಇ-ಆನೆಯ ಮಾಲೀಕರಾಗಿದ್ದಾರೆ.

ದೇವಸ್ಥಾನಗಳಲ್ಲಿ ನಡೆಯುವ ಆಚರಣೆಗಳಿಗೆ ಆನೆಯನ್ನು ಬಳಸಬೇಕೆಂದು ಯಾವುದೇ ತಾಂತ್ರಿಕ ಪುಸ್ತಕಗಳಲ್ಲಿ ಉಲ್ಲೇಖಿಸಿಲ್ಲ. ಇ-ಆನೆಯನ್ನು ದೇವಾಲಯದ ಆಚರಣೆಗಳಿಗೆ ಬಳಸಿಕೊಳ್ಳುತ್ತಿರುವುದು ಇದೇ ಮೊದಲು ಎಂದು ರಾಜ್‌ಕುಮಾರ್ ಹೇಳಿದ್ದಾರೆ.

ಭವಿಷ್ಯದಲ್ಲಿ ಈ ಆನೆಯನ್ನು ಸ್ವಯಂ ಚಾಲಿತಗೊಳಿಸುವ ಅಥವಾ ರಿಮೋಟ್ ಮೂಲಕ ನಿಯಂತ್ರಿಸುವ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದಿದ್ದಾರೆ.

₹5 ಲಕ್ಷಕ್ಕೆ ಇ-ಆನೆಯನ್ನು ಖರೀದಿಸಲಾಗಿದ್ದು, ಭಕ್ತರು ಇದಕ್ಕಾಗಿ ದೇಣಿಗೆ ನೀಡಿದ್ದಾರೆ. ಫೆಬ್ರುವರಿ 26ರಂದು ನಡೆಯುವ ಕಾರ್ಯಕ್ರಮದಲ್ಲಿ ಆನೆಯನ್ನು ಔಪಚಾರಿಕವಾಗಿ ದೇವಾಲಯಕ್ಕೆ ಪಡೆಯಲಾಗುವುದು ಎಂದೂ ಹೇಳಿದ್ದಾರೆ. ಸ್ಥಳೀಯ ಕುಶಲಕರ್ಮಿಗಳ ತಂಡವೊಂದು ಈ ಆನೆಯನ್ನು ತಯಾರಿಸಿದೆ.

ಮಯೂರ ಓದಿರಿ



ನಗರದ ಟಾಟಾ ಮೋಟಾರ್ಸ್ ಕಂಪನಿಯು 'ಪ್ರಜಾವಾಣಿ' ಸಹಭಾಗಿತ್ವದಲ್ಲಿ ಆಯೋಜಿಸಿದ್ದ 'ಜೆಡ್ಬ್ಲ್ಯುಇ' ಬ್ಯಾಡ್ಮಿಂಟನ್ ಲೀಗ್‌ನ ಅಂತಿಮ ಪಂದ್ಯದಲ್ಲಿ ಅಲ್ಟ್ರಾಜ್ ತಂಡವನ್ನು ಮಣಿಸಿ ಸಫಾರಿ ತಂಡವು ಚಾಂಪಿಯನ್ ಟ್ರೋಫಿ ಪಡೆಯಿತು. ತಂಡದ ನಾಯಕರಾದ ಶೀತಲ್ ಅವರು ಟ್ರೋಫಿ ಸ್ವೀಕರಿಸಿದರು

ಸೂಫಿಸಂತರ ಸಮಾವೇಶದತ್ತ ಬಿಜೆಪಿ ಚಿತ್ತ

ನವದೆಹಲಿ: ಬಿಜೆಪಿ ದೇಶದಾದ್ಯಂತ ಸೂಫಿಸಂತರ ಸಮಾವೇಶ ನಡೆಸಲು ಯೋಜಿಸುತ್ತಿದೆ. ಸಮಾವೇಶದಲ್ಲಿ ಹಜರತ್ ನಿಜಾಮುದ್ದೀನ್, ಅಜ್ಮೀರ್ ಷರೀಫ್, ಬರೇಲಿ ಷರೀಫ್ ದರ್ಗಾದಂತಹ ಧಾರ್ಮಿಕ ಕೇಂದ್ರಗಳ ಸೂಫಿ ನಾಯಕರು ಇರುವ ಸಾಧ್ಯತೆಯಿದೆ.

ಪಕ್ಷದ ಅಲ್ಪಸಂಖ್ಯಾತ ವಿಭಾಗವು ಮಾರ್ಚ್‌ನಲ್ಲಿ 'ಸೂಫಿ ಸಂತರ ಸಂವಾದ' ಹೆಸರಿನಲ್ಲಿ ಸಮಾವೇಶವನ್ನು ನಡೆಸಲಿದೆ ಎಂದು ಈ ಪ್ರಕ್ರಿಯೆಯಲ್ಲಿ ತೊಡಗಿರುವ ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ.

'ಮೋದಿ ಅವರ ಅಭಿವೃದ್ಧಿ ಕಾರ್ಯಸೂಚಿ ಮತ್ತು ಬಿಜೆಪಿ ಎಲ್ಲ ಧರ್ಮಗಳನ್ನು ಹೇಗೆ ಒಳಗೊಳ್ಳುತ್ತದೆ ಎಂಬುದನ್ನು ಅರಿಯಲು ಈ ಸಮಾವೇಶ ಆಯೋಜಿಸಲಾಗುತ್ತಿದೆ. ಶೀಘ್ರದಲ್ಲೇ ಪ್ರಧಾನಿ ಅವರೊಂದಿಗೆ ಸೂಫಿ ಸಂತರ ಸಭೆ ನಡೆಸಲಾಗುವುದು' ಎಂದು ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಚಿಗುರು ಎಲೆಯ ಒಂದು ಕಟ್ಟಿಗೆ ₹ 120

ವೀಳ್ಯದೆಲೆ ಇನ್ನಷ್ಟು ದುಬಾರಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಮಾರುಕಟ್ಟೆಯಲ್ಲಿ 'ವೀಳ್ಯದೆಲೆ' ದರ ಗಗನಮುಖಿ ಆಗಿದೆ. ಒಂದು ಕಟ್ಟು ವೀಳ್ಯದೆಲೆ ಬೆಲೆ ನೂರು ರೂಪಾಯಿ ಗಡಿ ದಾಟಿದ್ದು ಗ್ರಾಹಕರಿಗೆ ದರ ಏರಿಕೆ ಬಿಸಿ ತಟ್ಟಿದೆ.

ಕಪ್ಪುಬಣ್ಣದ ಎಲೆ ಒಂದು ಕಟ್ಟಿಗೆ ಕನಿಷ್ಠ ₹ 80 ಇದ್ದರೆ, ಬಿಳಿ ಬಣ್ಣದ ಚಿಗುರು ಎಲೆಯ ಒಂದು ಕಟ್ಟು ₹ 120ಕ್ಕೆ ಮಾರಾಟವಾಗುತ್ತಿದೆ.

ಚಳಿಗಾಲದಲ್ಲಿ ವೀಳ್ಯದೆಲೆ ಬಳ್ಳಿಯಲ್ಲಿ (ಅಂಬು) ಹೊಸ ಚಿಗುರು ಬರುವುದಿಲ್ಲ. ಈ ವೇಳೆ ದರ ಕಟ್ಟಿಗೆ ₹ 60ರಿಂದ ₹ 70 ಇರುತ್ತಿತ್ತು. ಈ ವರ್ಷ ನೂರು ರೂಪಾಯಿ ಗಡಿ ದಾಟಿದೆ ಎಂದು ವ್ಯಾಪಾರಸ್ಥರು ಹೇಳಿದರು.



ದರ ಕಡಿಮೆಯಿದ್ದಾಗ ಕಟ್ಟಿಗೆ ಕನಿಷ್ಠ 100ರಿಂದ 120 ಎಲೆ ಜೋಡಿಸುತ್ತಿದ್ದರು. ಎಲೆ ಗುಣಮಟ್ಟವೂ ಉತ್ತಮವಾಗಿಯೇ ಇರುತ್ತಿತ್ತು. ಆದರೆ, ದರ ಏರಿಕೆ ಆಗಿರುವುದರಿಂದ ಕಟ್ಟಿನಲ್ಲಿ ಎಲೆ ಕಡಿಮೆ ಯಾಗಿದೆ. ಜತೆಗೆ, ಕಟ್ಟಿನ ಮಧ್ಯೆ ಸಣ್ಣ ಹಾಗೂ ಹರಿದ ಎಲೆಗಳನ್ನು ಜೋಡಿಸುತ್ತಿದ್ದಾರೆ ಎಂದು ಗ್ರಾಹಕರು ಆರೋಪಿಸುತ್ತಾರೆ.

> **30 ವರ್ಷಗಳಿಂದ ಎಲೆ ಬಳಸುತ್ತಿದ್ದೇನೆ. ಇಷ್ಟೊಂದು ದರ ಎಂದೂ ಆಗಿರಲಿಲ್ಲ. ₹ 5ಕ್ಕೆ ವೀಳ್ಯದೆಲೆ ಕೊಂಡರೆ ಒಂದು ಸುತ್ತಿಗೂ ಬರುತ್ತಿಲ್ಲ.**
> **ಸಿದ್ದಪ್ಪ,** ಗ್ರಾಹಕ

ದರ ಹೆಚ್ಚಲು ವಿಪರೀತ ಮಳೆಯೂ ಕಾರಣ. ವೀಳ್ಯದೆಲೆ ತೋಟಗಳಲ್ಲಿ ನೀರು ನಿಂತು ಬಳ್ಳಿಗಳು ಕೊಳೆತು ಹೋಗಿವೆ. ಈ ಸಮಯದಲ್ಲಿ ಮದುವೆ, ಗೃಹಪ್ರವೇಶ, ಜಾತ್ರೆಯಂತಹ ಸಮಾರಂಭಗಳು ಹೆಚ್ಚಾಗಿ ನಡೆಯುವುದರಿಂದ ವೀಳ್ಯದೆಲೆಯ ದರ ಹೆಚ್ಚಾಗಿದೆ ಎಂದು ಮಾರಾಟಗಾರ ಮಂಜುನಾಥ್ ಅವರು ಹೇಳಿದರು.

ನವೆಂಬರ್‌ನಲ್ಲಿ ಕಟ್ಟಿಗೆ ₹ 50ರಿಂದ ₹70 ಆಸುಪಾಸಿನಲ್ಲಿದ್ದ ದರವು ಜನವರಿ ವೇಳೆಗೆ ಹೆಚ್ಚಾಗಿತ್ತು. ಈಚೆಗೆ ನಿತ್ಯವೂ ದರ ಏರಿಕೆ ಆಗುತ್ತಲೇ ಇದೆ. ಕೆಲವೊಮ್ಮೆ ನೂರು ರೂಪಾಯಿ ಕೊಟ್ಟರೂ ಎಲೆ ಸಿಗುತ್ತಿಲ್ಲ. ಎಲೆ ಮಾರಾಟ ಮಾಡುವುದು ಕಷ್ಟವಾಗುತ್ತಿದೆ. ಮುಂಗಾರು ಪೂರ್ವಮಳೆ ಆರಂಭವಾಗಿ ಅಂಬುಗಳನ್ನು ಇಳಿಸಿ ಕಟ್ಟಿದ ಮೇಲೆ, ಹೊಸ ಚಿಗುರು ಬಂದ ನಂತರವಷ್ಟೆ ದರ ಇಳಿಕೆ ಆಗಲಿದೆ ಎಂದು ಹೇಳುತ್ತಾರೆ ಅವರು.

25ರಂದು 'ಸುವರ್ಣ ಮಹೋತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ ಸುವರ್ಣ ಮಹೋತ್ಸವದ ಸಂಭ್ರಮವನ್ನು ಫೆ.25ರಂದು ಆಯೋಜಿಸಲಾಗಿದೆ.

1972ರಲ್ಲಿ ಆರಂಭವಾದ ಕಾಲೇಜು 50 ವರ್ಷಗಳ ಮೆಲುಕು ಹಾಕುವ ಮಹೋತ್ಸವ ಕಾಲೇಜಿನ 'ಎಂಲ್ಯಾಕ್' ಅಂಗಳದಲ್ಲಿ ನಡೆಯಲಿದೆ. ರಾಜಮಾತೆ ಪ್ರಮೋದಾದೇವಿ ಒಡೆಯರ್ ಹಾಗೂ ಸುಧಾಮೂರ್ತಿ ಅವರು ಭಾಗವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ. ಎನ್.ನಾಗಲಕ್ಷ್ಮಿ ತಿಳಿಸಿದ್ದಾರೆ.

'ಎಂಲ್ಯಾಕ್' ಅಧ್ಯಕ್ಷ ಎಸ್.ಎಸ್. ನಾಗಾನಂದ್, ವ್ಯವಸ್ಥಾಪಕ ಟ್ರಸ್ಟಿ ಕೆ. ಜೈರಾಜ್ ಸುವರ್ಣ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ನಗರದಲ್ಲಿ ಇಂದು

'ರಕ್ತದಾನ ಶಿಬಿರ': ಉದ್ಘಾಟನೆ: ನಾರಾಯಣ್ ರಾವ್ ಆರ್. ಮಾನ್ಯ, ಆಯೋಜನೆ ಮತ್ತು ಸ್ಥಳ: ಬಿ.ಎನ್. ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9ರಿಂದ

'74 ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳ' ಕನ್ನಡ ಆವೃತ್ತಿ ಪುಸ್ತಕ ಬಿಡುಗಡೆ: ಜೆ.ಸಿ.ಮಾಧುಸ್ವಾಮಿ, ಉಪಸ್ಥಿತಿ: ಜಿ.ಶ್ರೀಧರ್, ಎಂ.ವೆಂಕಟೇಶ, ಆಯೋಜನೆ: ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ರಾಜಭಾಷಾ (ವಿಧಾಯೀ) ಆಯೋಗ ಹಾಗೂ ಭಾಷಾಂತರ ನಿರ್ದೇಶನಾಲಯ, ಸ್ಥಳ: ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 334, ವಿಧಾನಸೌಧ, ಮಧ್ಯಾಹ್ನ 1.30

ಸಿ.ಜಿ.ಕೆ. ರಾಷ್ಟ್ರೀಯ ರಂಗೋತ್ಸವ: ಕಿರು ಚಿತ್ರ: ಘಮ ಘಮ. ನಿರ್ದೇಶನ: ಮಾಲತೇಶ್ ಎಚ್.ವಿ., (ಪುನೀತ್ ರಾಜ್‌ಕುಮಾರ್ ವೇದಿಕೆ), ಬಿಸ್ಮಿಲ್ಲಾ ಖಾನ್, ರಾಜಗುರು ಹೊಸಕೋಟೆ ಅವರಿಗೆ ಅಭಿನಂದನೆ (ಆ.ನ.ರಮೇಶ್ ವೇದಿಕೆ), 'ಆನಂದಭಾವಿನಿ' ಏಕವ್ಯಕ್ತಿ ಪ್ರಸ್ತುತಿ: ಸಿರಿ ವಾನಳ್ಳಿ, ನಿರ್ದೇಶನ: ಶ್ರೀಪಾದ್ ಭಟ್ (ವಿ.ಚನ್ನಪ್ಪ ವೇದಿಕೆ), 'ಹತ್ತಮಾಲಾಚ್ಯ ಪಲ್ಯಾಡ್' ನಾಟಕ ಪ್ರದರ್ಶನ. ರಚನೆ: ಬಾದಲ್ ಸರ್ಕಾರ್, ನಿರ್ದೇಶನ: ಮಹೇಶ್ ಕಾಂಧಾರೆ, ತಂಡ: ಥಿಯೇಟರ್ ಪ್ಲೆಮಿಂಗೋ, ಆಯೋಜನೆ: ರಂಗನಿರಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4ರಿಂದ

ಎಲ್. ಎನ್. ತಲ್ಲೂರು ಅವರ ಜೊತೆ ಜಿ. ಎನ್. ಮೋಹನ್ ಸಂವಾದ ಕಾರ್ಯಕ್ರಮ: ಸ್ಥಳ: ಮ್ಯಾಪ್, ಕಲೆ ಮತ್ತು ಛಾಯಾಚಿತ್ರ ವಸ್ತುಸಂಗ್ರಹಾಲಯ, ಕಸ್ತೂರಬಾ ರಸ್ತೆ, ಸಂಜೆ 6

ಪ್ರವಚನ ವಾಹಿನಿ ಕಾರ್ಯಕ್ರಮ: 'ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ' ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿ ಮಹಾಶಿವರಾತ್ರಿ ಉತ್ಸವ: ವಿಶೇಷ ಅಲಂಕಾರ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ನಿರ್ವಾಣಿ ಭಗವತಿ ಪ್ರಾರ್ಥನಾ ಮಂದಿರ, ಜಯನಗರ, ಸಂಜೆ 6.30

ನಿಧನ ವಾರ್ತೆ

ರಫೇಲ್ ಶಾಂತು

ಬೆಂಗಳೂರು: ಮರಿಯನಿಕೇತನ ಶಾಲೆ, ಶಿವಾಜಿನಗರ ಝೇವಿಯರ್ ಶಾಲೆಯಲ್ಲಿ ಕ್ಲರ್ಕ್ ಆಗಿದ್ದ, ಜೈಭಾರತ್ ನಗರದ ನಿವಾಸಿ ರಫೇಲ್ ಶಾಂತು (70) ಭಾನುವಾರ ನಿಧನರಾದರು. ಇವರಿಗೆ ಪುತ್ರ, ಪುತ್ರಿ ಇದ್ದಾರೆ. ಸೋಮವಾರ ಮಧ್ಯಾಹ್ನ 3 ಗಂಟೆಗೆ ಕಲ್ಲಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ರಫೇಲ್ ಶಾಂತು

ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇಗುಲದಲ್ಲಿ ಆಯೋಜನೆ • ಶಿವರಾತ್ರಿ ಆಚರಣೆಗೆ ಮೆರುಗು

ಬ್ರಹ್ಮ ರಥೋತ್ಸವ, ಭಕ್ತರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಭಾನುವಾರ ಬ್ರಹ್ಮ ರಥೋತ್ಸವ ಸಂಭ್ರಮದಿಂದ ನೆರವೇರಿತು.

ನಗರದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ಹುಲಿವೇಷ, ಚಂಡೆ ವಾದ್ಯ ಸೇರಿ 12ಕ್ಕೂ ಹೆಚ್ಚು ಕಲಾ ತಂಡಗಳು ರಥೋತ್ಸವದ ಮೆರುಗು ಹೆಚ್ಚಿಸಿದ್ದವು.

ರಥೋತ್ಸವ ಆರಂಭ ಆಗುತ್ತಿದ್ದಂತೆ ನೆರೆದಿದ್ದ ಭಕ್ತರು ರಥದ ಮೇಲೆ ಬಾಳೆ ಹಣ್ಣು ತೂರಿ ಭಕ್ತಿಯಿಂದ ನಮಿಸಿದರು. ಭಕ್ತರು ಉತ್ಸಾಹದಿಂದ ರಥ ಎಳೆದರು.

ಮಲ್ಲೇಶ್ವರದ ವಿವಿಧೆಡೆ ರಥೋತ್ಸವವು ಸಂಚರಿಸಿತು. ಭಕ್ತರು ಮನೆಗಳ ಎದುರು ಹಾಗೂ ಪ್ರಮುಖ ಬೀದಿಗಳಲ್ಲಿ ರಂಗೋಲಿ ಹಾಕಿ ರಥವನ್ನು ಸ್ವಾಗತಿಸಿದರು. ಪ್ರದಕ್ಷಿಣೆಯ ಬಳಿಕ ರಥವು ಸ್ವಸ್ಥಾನಕ್ಕೆ ಮರಳಿತು. ಭಕ್ತರಿಗೆ ಅಲ್ಲಲ್ಲಿ ಮಜ್ಜಿಗೆ, ಪಾನಕ ಹಾಗೂ ಪಲಾವ್ ವಿತರಣೆ ಮಾಡಲಾಯಿತು. ರಾತ್ರಿಯಿಡೀ ಶಿವರಾತ್ರಿ ಅಂಗವಾಗಿ ಬಂಟ್ವಾಳದ ಯಕ್ಷರಂಗ ತಂಡದಿಂದ 'ಸಂಪೂರ್ಣ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ ನಡೆಯಿತು.



ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಅಂಗವಾಗಿ ಭಾನುವಾರ ನಡೆದ 'ಕಾಡು ಮಲ್ಲಿಕಾರ್ಜುನ ಸ್ವಾಮಿ' ಬ್ರಹ್ಮರಥೋತ್ಸವದ ಸಂಭ್ರಮದಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಭಕ್ತರು. ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್

ಮುಖ್ಯಮಂತ್ರಿ ಮನಪರಿವರ್ತನೆ ಆಗಲಿ: ಸ್ವಾಮೀಜಿ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2'ಎ' ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನಾ ಸ್ಥಳದಲ್ಲೇ ಶಿವರಾತ್ರಿ ಅಂಗವಾಗಿ ಶನಿವಾರ ಮಧ್ಯರಾತ್ರಿ ತನಕ ಇಷ್ಟಲಿಂಗ ಪೂಜೆ ನೆರವೇರಿತು.

ಬಳಿಕ ಮಾತನಾಡಿದ ಸ್ವಾಮೀಜಿ ಅವರು, 'ಮುಖ್ಯಮಂತ್ರಿ ಬಸವರಾಜ



ಪ್ರತಿಭಟನಾ ಸ್ಥಳದಲ್ಲೇ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಇಷ್ಟಲಿಂಗ ಪೂಜೆ ನೆರವೇರಿಸಿದರು

ಬೊಮ್ಮಾಯಿ ಅವರು ತಾಯಿ ಮೇಲೆ ಆಣೆ ಮಾಡಿ ಸಮಾಜಕ್ಕೆ ಮೋಸ ಮಾಡಿದ್ದಾರೆ. ಇನ್ನಾದರೂ ಅವರ ಮನಸ್ಸು ಪರಿವರ್ತನೆಗೊಂಡು ಮೀಸಲಾತಿ ಕಲ್ಪಿಸುವಂತೆ ಆಗಲಿ' ಎಂದು ಹೇಳಿದರು.

ಚಿತ್ರದುರ್ಗದ ತೋಟಪ್ಪ ಉತ್ತಂಗಿ ವಚನಗಾಯನ ಕಾರ್ಯಕ್ರಮ ನೀಡಿದರು. ಡಾ.ಬಿ.ಎಸ್. ಪಾಟೀಲ ನಾಗಲ್‌ಹುಲಿ, ಶಿವಪುತ್ರಪ್ಪ ಮಲ್ಲೇವಾಡ, ಪುಟ್ಟರಾಜ, ಶಿವಕುಮಾರ್ ಮೇಟಿ, ದೀಪಕ್ ಜುಂಜರವಾಡ, ಕಾಂತೇಶ್, ಶೈಲೇಂದ್ರ ಪಾಟೀಲ್, ಮಲ್ಲನಗೌಡ , ದೇವೇಂದ್ರಪ್ಪ ತೋಟದ ಇದ್ದರು.



ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕಮ್ಮನಹಳ್ಳಿಯ ಸದಾಶಿವ ದೇವಸ್ಥಾನದಲ್ಲಿ ಬಿಜೆಪಿ ಒಬಿಸಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಬಿ.ಗೋವಿಂದರಾಜು ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಗಂಗಾಜಲ, ರುದ್ರಾಕ್ಷಿ, ಭಸ್ಮ ಹಾಗೂ ಪ್ರಸಾದವನ್ನು ಸಂಸದ ಪಿ.ಸಿ.ಮೋಹನ್ ವಿತರಿಸಿದರು. ಸರ್ವಜ್ಞನಗರ ಮಂಡಲ ಅಧ್ಯಕ್ಷ ಮುನಿರಾಜು ಕಾರ್ತಿಕ್, ಯುವ ಮೋರ್ಚಾ ಅಧ್ಯಕ್ಷ ಗಣೇಶ್, ಎಂ.ಎನ್‌.ರೆಡ್ಡಿ, ವಿ.ಶ್ರೀನಿವಾಸ್ ಇದ್ದರು.

'ಶಿವಾಜಿ ಮಹಾರಾಜರ ಹೋರಾಟ ಪ್ರೇರಕಶಕ್ತಿ'



ಸದಾಶಿವನಗರ ಭಾಷ್ಯಂ ವೃತ್ತದಲ್ಲಿ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವದಲ್ಲಿ ಸಚಿವ ಸಿ.ಎನ್‌. ಅಶ್ವತ್ಥ ನಾರಾಯಣ ಪಾಲ್ಗೊಂಡಿದ್ದರು

ಬೆಂಗಳೂರು: 'ನಾಡಿನಸಂಸ್ಕೃತಿ,ಪರಂಪರೆಯ ರಕ್ಷಣೆಗೆ ಶಿವಾಜಿ ಮಹಾರಾಜರು ಹೋರಾಡಿದ ರೀತಿಯು ಎಂದಿಗೂ ಪ್ರೇರಕಶಕ್ತಿ ಆಗಿರುತ್ತದೆ' ಎಂದು ಸಚಿವ ಸಿ.ಎನ್‌.ಅಶ್ವತ್ಥ ನಾರಾಯಣ ಹೇಳಿದರು.

ಸದಾಶಿವನಗರದ ಭಾಷ್ಯಂ ವೃತ್ತದಲ್ಲಿ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿ, 'ಚಿಕ್ಕವಯಸ್ಸಿನಲ್ಲಿಯೇ ತಾಯಿ ಜೀಜಾಬಾಯಿ ಅವರಿಂದ ಸಂಸ್ಕಾರ, ದೇಶಭಕ್ತಿಗಳನ್ನು ಮೈಗೂಡಿಸಿಕೊಂಡಿದ್ದರು. ಹಿಂದೂ ರಾಷ್ಟ್ರದ ರಕ್ಷಣೆಗಾಗಿ ಸಲ್ಲಿಸಿದ ಸೇವೆ ವಿಶೇಷವಾದುದು' ಎಂದರು.

'ಶಿವಾಜಿ ಜಯಂತಿಯನ್ನು ರಾಜ್ಯದೆಲ್ಲೆಡೆ ಆಚರಿಸಲಾಗುತ್ತಿದೆ. ರಾಜ್ಯದಲ್ಲಿರುವ ಮರಾಠ ಜನರ ಹಿತರಕ್ಷಣೆಗಾಗಿ ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸಿದೆ. ಮಹಾರಾಷ್ಟ್ರದ ಹೊರತಾಗಿ ಇಂತಹ ಅಭಿವೃದ್ಧಿ ನಿಗಮ ದೇಶದ ಬೇರೆ ಯಾವ ರಾಜ್ಯದಲ್ಲೂ ಇಲ್ಲ' ಎಂದರು.

ಮಾಜಿ ಸಚಿವ ಪಿ.ಜಿ.ಆರ್‌.ಸಿಂಧ್ಯಾ, ಕರ್ನಾಟಕ ಮರಾಠ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮನೋಜ್, ಬಿಜೆಪಿ ಒಬಿಸಿ ಘಟಕದ ಅಧ್ಯಕ್ಷ ನೆ.ಲ. ನರೇಂದ್ರ ಬಾಬು, ರಕ್ಷಣಾ ವೇದಿಕೆ ಅಧ್ಯಕ್ಷ ಶಿವರಾಮೇಗೌಡ, ಗಾಯಕ್‌ವಾಡ್, ಪಾಲಿಕೆ ಮಾಜಿ ಸದಸ್ಯರಾದ ಸುಮಂಗಲಾ ಕೇಶವ್, ಗಣೇಶ್, ನಟ ಕೇಸರ್ಕರ್ ಗಣೇಶ್ ಇದ್ದರು.

ಮೆಟ್ರೊ ಕಾಮಗಾರಿ ಅವಘಡ: 38 ಸಾವು

ಬೆಂಗಳೂರು: 'ಮೆಟ್ರೊ ನಿರ್ಮಾಣ ಕಾಮಗಾರಿ ವೇಳೆ ಸಂಭವಿಸಿದ ಅವಘಡಗಳಲ್ಲಿ ಇದುವರೆಗೆ 38 ಮಂದಿ ಮೃತಪಟ್ಟಿದ್ದು, 12 ಮಂದಿ ತೀವ್ರ ಗಾಯಗೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎ.ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿ, 'ಮೃತರ ಕುಟುಂಬದವರು ಹಾಗೂ ಗಾಯಗೊಂಡವರಿಗೆ ಈವರೆಗೂ ₹ 3.15 ಕೋಟಿ ಪರಿಹಾರ ವಿತರಿಸಲಾಗಿದೆ' ಎಂದಿದ್ದಾರೆ.

'ದುರಂತಕ್ಕೆ ಸಂಬಂಧಪಟ್ಟಂತೆ ಕರ್ತವ್ಯಲೋಪ ಎಸಗಿದ್ದ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಮೂವರು ಎಂಜಿನಿಯರ್‌ಗಳನ್ನು ಅಮಾನತು ಮಾಡಲಾಗಿದೆ. ಗುತ್ತಿಗೆದಾರರಿಗೆ ₹ 1.77 ಕೋಟಿ ದಂಡ ವಿಧಿಸಲಾಗಿದೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

'ಕಾಮಗಾರಿ ಸ್ಥಳದಲ್ಲಿ ಅವಘಡಗಳು ನಡೆಯದಂತೆ ತಡೆಯಲು ಸುರಕ್ಷತೆ, ಆರೋಗ್ಯ ಹಾಗೂ ಪರಿಸರ ಕೈಪಿಡಿ ರೂಪಿಸಲಾಗಿದೆ. ಪ್ರತಿ ಗುತ್ತಿಗೆದಾರ, ಆ ಪ್ರಕಾರ ಕೆಲಸ ಮಾಡುವುದು ಕಡ್ಡಾಯವಾಗಿದೆ' ಎಂದು ತಿಳಿಸಿದ್ದಾರೆ.



ಸಾಂದರ್ಭಿಕ ಚಿತ್ರ

ಎಸ್ಸೆಸ್ಸೆಲ್ಸಿ ಪಾಸಾದ ಮಕ್ಕಳಿಗೆ ಧುತ್ತನೆ ಎದುರಾಗುವ ಪ್ರಶ್ನೆಯೇ 'ಪಿಯುಸಿನಾ.. ಯಾವ ಕಾಂಬಿನೇಷನ್?'. ಅದರಲ್ಲೂ 'ಸೈನ್ಸ್' ಓದಬೇಕೆನ್ನುವವರಿಗೆ ವಿಷಯ ಸಂಯೋಜನೆ ಆಯ್ಕೆಯಲ್ಲಿ ಹಲವು ಪ್ರಶ್ನೆಗಳು ಉದ್ಭವಿಸಿರುತ್ತವೆ. ಈ ಹಿನ್ನೆಲೆಯಲ್ಲಿ ಅಭಿರುಚಿಗೆ ಅನುಸಾರವಾಗಿ ಹೇಗೆ ವಿಷಯ ಸಂಯೋಜನೆ ಹಾಗೂ ಕಾಲೇಜಿನ ಆಯ್ಕೆ ಮಾಡಬಹುದು ? ಇಲ್ಲಿದೆ ಮಾಹಿತಿ.

ಪಿಯುಸಿನಾ... ಯಾವ ಕಾಂಬಿನೇಷನ್?

ಗುರುರಾಜ್ ಎಸ್. ದಾವಣಗೆರೆ

ಪ್ರೌಢಶಾಲಾ ಶಿಕ್ಷಣದ ನಂತರದ ವಿದ್ಯಾಭ್ಯಾಸಕ್ಕಾಗಿ ಪಿಯುಸಿಗೆ ಸೇರಬಯಸುವ ವಿದ್ಯಾರ್ಥಿಗಳು ಮತ್ತು ಅವರ ಏಳಿಗೆ ಕಾಣಬಯಸುವ ಪೋಷಕರು ತಮ್ಮ ಮಕ್ಕಳು ಸೇರುತ್ತಿರುವ ಕಾಲೇಜುಗಳ ವಿಧ ಮತ್ತು ಸ್ವರೂಪಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳಲೇಬೇಕು. ಹದಿಮೂರು ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಓದುವ ಬಹುತೇಕ ವಿದ್ಯಾರ್ಥಿಗಳು ಒಮ್ಮಿಂದೊಮ್ಮೆಗೆ ಹೊಸ ವಾತಾವರಣ, ಹೊಸ ಶಿಕ್ಷಣ ಕ್ರಮದ ಎರಡು ವರ್ಷಗಳ ಅವಧಿಯ ಪಿಯುಸಿಗೆ ಸೇರುವಾಗ ತಾವು ಓದಬಯಸುವ ಸಂಯೋಜನೆ ಮತ್ತು ಮಾಧ್ಯಮಗಳ ಬಗ್ಗೆ ಮತ್ತು ಆಯ್ಕೆ ಮಾಡಿಕೊಳ್ಳುವ ಕಾಲೇಜುಗಳ ಬಗ್ಗೆ ನಿರ್ದಿಷ್ಟವಾಗಿ ತಿಳಿದುಕೊಳ್ಳಲೇಬೇಕಾಗುತ್ತದೆ.

ಹಲವು ಬಗೆಯ ಕಾಲೇಜುಗಳು

ರಾಜ್ಯದಲ್ಲಿ ಪದವಿ ಪೂರ್ವ ಶಿಕ್ಷಣ ನೀಡುವ ಐದು ವಿವಿಧ ಬಗೆಯ ಕಾಲೇಜುಗಳಿವೆ. ಒಟ್ಟು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ 5606. ಸರ್ಕಾರಿ, ಅನುದಾನಿತ, ಅನುದಾನರಹಿತ, ಮಹಾನಗರ ಪಾಲಿಕೆ ಮತ್ತು ಬೈಫರ್‌ಕೇಟೆಡ್ (ಪದವಿ ಕಾಲೇಜುಗಳಿಂದ ಬೇರ್ಪಟ್ಟ) ಎಂಬ ಐದು ವಿವಿಧ ಬಗೆಯ ಕಾಲೇಜುಗಳಲ್ಲಿ ಪದವಿ ಪೂರ್ವ ಶಿಕ್ಷಣ ಬೋಧಿಸಲಾಗುತ್ತಿದೆ. ರಾಜ್ಯದಲ್ಲಿ 1233 ಸರ್ಕಾರಿ, 824 ಅನುದಾನಿತ, 3374 ಅನುದಾನರಹಿತ, 161 ಬೈಫರ್‌ಕೇಟೆಡ್ (ವಿಭಜಿತ) ಮತ್ತು 14 ಕಾರ್ಪೊರೇಶನ್ ಪಿಯು ಕಾಲೇಜುಗಳಿವೆ. ಪ್ರಥಮ ಹಾಗೂ ದ್ವಿತೀಯ ಪಿಯುಸಿ ಎರಡೂ ಸೇರಿದಂತೆ ಒಟ್ಟು 13 ಲಕ್ಷ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಾರೆ. ಇವರಲ್ಲಿ ಶೇ 25ರಷ್ಟು ನಗರದಲ್ಲಿದ್ದರೆ ಉಳಿದ ಶೇ 75 ವಿದ್ಯಾರ್ಥಿಗಳು ಗ್ರಾಮೀಣ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿದ್ದಾರೆ.

ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್ ಹಾಗೂ ಪದವಿ ಶಿಕ್ಷಣಕ್ಕೆ ಅರ್ಹತೆ ಪಡೆಯುತ್ತಾರೆ. ಸರ್ಕಾರಿ ಕಾಲೇಜುಗಳಲ್ಲಿ ಶುಲ್ಕ ಅತ್ಯಂತ ಕಡಿಮೆ (ಸಾವಿರ ರೂಪಾಯಿ ಒಳಗೆ)ಇರುತ್ತದೆ.. ಅನುದಾನಿತ ಕಾಲೇಜುಗಳಲ್ಲಿ ಸರ್ಕಾರ ನಿಗದಿಪಡಿಸಿರುವ ಶುಲ್ಕ ಪಾವತಿಸಬೇಕು. ಖಾಸಗಿ ಅನುದಾನಿತ, ಬೈಫರ್‌ಕೇಟೆಡ್ ಕಾಲೇಜುಗಳಿಗೆ ಸರ್ಕಾರದ ವೇತನಾನುದಾನ ಸಿಗುತ್ತದೆ. ಪಾಲಿಕೆ ಕಾಲೇಜುಗಳಿಗೆ ಸರ್ಕಾರದ ಅನುದಾನವಿರುತ್ತದೆ.

ಅನುದಾನರಹಿತ ಕಾಲೇಜುಗಳಿಗೆ ಸರ್ಕಾರದಿಂದ ಯಾವುದೇ ರೀತಿಯ ಧನಸಹಾಯವಿರುವುದಿಲ್ಲ. ಎಲ್ಲ ಖರ್ಚನ್ನೂ ಆಡಳಿತ ಮಂಡಳಿಗಳೇ ನೋಡಿಕೊಳ್ಳುತ್ತವೆ. ಅನುದಾನರಹಿತ ಕಾಲೇಜುಗಳು ವಿದ್ಯಾರ್ಥಿಗಳು ಸಂದಾಯ ಮಾಡುವ ವಾರ್ಷಿಕ ಶುಲ್ಕಗಳಿಂದಲೇ ನಡೆಯುತ್ತವೆ. ಆದ್ದರಿಂದ ಅಲ್ಲಿನ ಶೈಕ್ಷಣಿಕ ಗುಣಮಟ್ಟ ಮತ್ತು ಮೂಲಸೌಲಭ್ಯಗಳಿಗೆ ಅನುಗುಣವಾಗಿ ಶುಲ್ಕ ನಿಗದಿಯಾಗಿರುತ್ತದೆ. ಸರ್ಕಾರಿ, ಅನುದಾನಿತ ಮತ್ತು ಇತರೆ ಕಾಲೇಜುಗಳಿಗೆ ಹೋಲಿಸಿದಲ್ಲಿ ಇಲ್ಲಿನ ಶುಲ್ಕ ತುಂಬಾ ಹೆಚ್ಚಿರುತ್ತದೆ.

ಶೈಕ್ಷಣಿಕ ಗುಣಮಟ್ಟ ಮತ್ತು ಸೌಲಭ್ಯ

ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳು ಪ್ರತಿಷ್ಠಿತ ಖಾಸಗಿ ಕಾಲೇಜುಗಳಿಗಿಂತ ಚೆನ್ನಾಗಿಯೇ ಕೆಲಸ ಮಾಡುತ್ತಿವೆ. ಶೈಕ್ಷಣಿಕ ಗುಣಮಟ್ಟ, ಫಲಿತಾಂಶ ಸುಧಾರಣೆಗಳಲ್ಲಿ ಮಾದರಿ ಕೆಲಸ ಮಾಡಿರುವ ಅನೇಕ ಸರ್ಕಾರಿ ಕಾಲೇಜುಗಳು ರಾಜ್ಯದಲ್ಲಿವೆ. ಅಲ್ಲಲ್ಲಿ ಮೂಲಸೌಲಭ್ಯಗಳ ಕೊರತೆ ಇದೆಯಾದರೂ, ನುರಿತ ಹಾಗೂ ತರಬೇತಿ ಇರುವ ಅಧ್ಯಾಪಕರಿಂದಾಗಿ ಸರ್ಕಾರಿ ಕಾಲೇಜುಗಳ ಫಲಿತಾಂಶ ಸುಧಾರಣೆ ಕಾಣುತ್ತಲೇ ಇದೆ. ಆದರೆ ಅತ್ಯಂತ ಕಡಿಮೆ ಹಾಗೂ ಶೂನ್ಯ ಫಲಿತಾಂಶ ಸಂಪಾದಿಸುವ ಕಾಲೇಜುಗಳೂ ಇವೆ! ಆದರೆ ಬೆರಳೆಣಿಕೆಯಷ್ಟು. ಖಾಸಗಿ ಹಾಗೂ ಅನುದಾನಿತ ಕಾಲೇಜುಗಳೂ ಇದಕ್ಕೆ ಹೊರತಲ್ಲ. ಶೇ 100 ರಷ್ಟು ಫಲಿತಾಂಶ ಪಡೆಯುವ ಕಾಲೇಜುಗಳಿರುವಂತೆ ಶೂನ್ಯ ಫಲಿತಾಂಶ ಸಂಪಾದಿಸುವ ಕಾಲೇಜುಗಳೂ ಸಿಗುತ್ತವೆ. ಯಾವುದಕ್ಕೂ ಸಾವಧಾನದಿಂದ ಮುಂದುವರಿಯಿರಿ.

ಫಲಿತಾಂಶವಷ್ಟೇ ಮಾನದಂಡವಲ್ಲ!

ಕಡಿಮೆ ಅಥವಾ ಶೂನ್ಯ ಫಲಿತಾಂಶ ಸಂಪಾದಿಸುವ ಕಾಲೇಜುಗಳ ಬಗ್ಗೆ ತಾತ್ಸಾರ ಭಾವನೆ ಸಾಮಾನ್ಯ. ಹಾಗೆಂದು ಉತ್ತಮ ಫಲಿತಾಂಶ ಪಡೆಯುವ ಕಾಲೇಜುಗಳಲ್ಲಿ ಎಲ್ಲವೂ ಸರಿಯಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಆಟೋಟ - ಸಾಂಸ್ಕೃತಿ ಕಾರ್ಯಕ್ರಮಗಳನ್ನು ಕಡೆಗಣಿಸಿ, ಸಾಮಾಜಿಕ ಬದ್ಧತೆಯ ಚಟುವಟಿಕೆಗಳನ್ನು ದೂರವಿರಿಸಿ ಬರೀ ಪುಸ್ತಕದ ವಿಷಯಗಳನ್ನು ಕಂಠಸ್ಥಗೊಳಿಸುವ, ಉರು ಹೊಡೆವುದನ್ನು ಪ್ರೋತ್ಸಾಹಿಸುವ ಕಾಲೇಜುಗಳೂ ಇವೆ. ಇಲ್ಲಿ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಗೆ ಅವಕಾಶವಿರುವುದಿಲ್ಲ. ಕೇವಲ ಅಂಕಗಳಿಕೆಗಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ಕಾಲೇಜುಗಳು ಹೆಜ್ಜೆಗೊಂದರಂತೆ ಇವೆ. ಆಯ್ಕೆಯ ಸ್ವಾತಂತ್ರ್ಯ ನಿಮ್ಮದು.

ವಿಷಯ ಸಂಯೋಜನೆ

ವಿಜ್ಞಾನ ವಿಭಾಗದಲ್ಲಿ ಒಟ್ಟು ಆರು ಸಂಯೋಜನೆಗಳಿವೆ. ಐದರಲ್ಲಿ ಗಣಿತ ವಿಷಯವಿದೆ:

1. ಪಿ.ಸಿ.ಎಂ.ಬಿ - ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್, ಬಯಾಲಜಿ
2. ಪಿ.ಸಿ.ಎಂ.ಸಿ - ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್, ಕಂಪ್ಯೂಟರ್ ಸೈನ್ಸ್
3. ಪಿ.ಸಿ.ಎಂ.ಇ - ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್, ಎಲೆಕ್ಟ್ರಾನಿಕ್ಸ್
4. ಪಿ.ಸಿ.ಎಂ.ಜಿ - ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್, ಜಿಯಾಲಜಿ (ಭೂಗರ್ಭ ವಿಜ್ಞಾನ)
5. ಪಿ.ಸಿ.ಎಂ. ಎಸ್ - ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಥಮ್ಯಾಟಿಕ್ಸ್, ಸ್ಟ್ಯಾಟಿಸ್ಟಿಕ್ಸ್
6. ಪಿ.ಸಿ.ಬಿ.ಎಚ್ - ಫಿಸಿಕ್ಸ್, ಕೆಮಿಸ್ಟ್ರಿ ಬಯಾಲಜಿ, ಹೋಂಸೈನ್ಸ್ (ಗೃಹ ವಿಜ್ಞಾನ)

ಸಂಯೋಜನೆ: ಗಣಿತವಿರದ ಪಿಯುಸಿ ಓದು

ಪಿಯುಸಿಯಲ್ಲಿ 'ವಿಜ್ಞಾನ'ದ ಕಾಂಬಿನೇಶನ್‌ಗೆ ಸೇರಬೇಕು. ಆದರೆ ಗಣಿತ ಕಷ್ಟ ಎನ್ನುವವರು ಗಣಿತ ವಿಷಯವನ್ನು ಓದದೇ ಪಿಯುಸಿ ವಿಜ್ಞಾನ ಓದಬಹುದು. ಅದಕ್ಕೆಂದೇ ಒಂದು ಸಂಯೋಜನೆಯಿದೆ. ಅದರಲ್ಲಿ ಗಣಿತದ ಬದಲಾಗಿ ಗೃಹ ವಿಜ್ಞಾನವಿದೆ.

ಮೇಲಿನ ಬಾಕ್ಸ್‌ನಲ್ಲಿ ಸಂಯೋಜನೆಯ ಮಾಹಿತಿ ಇದೆ. ಆ ಪ್ರಕಾರ ಮೊದಲ ನಾಲ್ಕು ಸಂಯೋಜನೆಗಳಲ್ಲಿ ಗಣಿತ ಹೊರತುಪಡಿಸಿ ಮೂರು ವಿಷಯಗಳಿಗೆ ಪ್ರಾಯೋಗಿಕ ತರಗತಿ ಮತ್ತು ಪ್ರಾಯೋಗಿಕ ಪರೀಕ್ಷೆಗಳಿರುತ್ತವೆ. ಐದನೆಯ ಸಂಯೋಜನೆಯಲ್ಲಿ ಸ್ಟ್ಯಾಟಿಸ್ಟಿಕ್ ವಿಷಯಕ್ಕೆ ಪ್ರಾಯೋಗಿಕ ತರಗತಿಯಾಗಲೀ, ಪರೀಕ್ಷೆಯಾಗಲೀ ಇರುವುದಿಲ್ಲ. ಆದರೆ ಕೊನೆಯ ಸಂಯೋಜನೆಯ ನಾಲ್ಕೂ ವಿಷಯಗಳಿಗೆ ಪ್ರಾಯೋಗಿಕ ತರಗತಿ ಮತ್ತು ಪರೀಕ್ಷೆ ಎರಡೂ ಇರುತ್ತವೆ. ಗಣಿತದ ಭಯ ಇರುವವರು ಈ ಸಂಯೋಜನೆಯನ್ನು ಆಯ್ದುಕೊಳ್ಳಬಹುದು. ಈ ಸಂಯೋಜನೆಯ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಸೇರಲು ಅವಕಾಶವಿರುವುದಿಲ್ಲ. ವೈದ್ಯಕೀಯ ಮತ್ತು ಅರೆವೈದ್ಯಕೀಯ ಹಾಗೂ ಫಾರ್ಮಸಿ ಕೋರ್ಸ್‌ಗಳಿಗೆ ದಾಖಲಾಗಬಹುದು.

ಪಿಯುಸಿ– ವಿಷಯ ವಿವರ

- ಪಿಯುಸಿ ಶಿಕ್ಷಣದ ವಿಷಯಗಳನ್ನು ಭಾಗ– 1 ಮತ್ತು 2 ಎಂದು ವಿಂಗಡಿಸಲಾಗಿದೆ. ಭಾಗ - 1 ರಲ್ಲಿ ಭಾಷಾ ವಿಷಯಗಳು ಮತ್ತು ಭಾಗ-2 ರಲ್ಲಿ ಐಚ್ಛಿಕ (Optional)) ಗಳಿರುತ್ತವೆ.
- ಯಾವುದೇ ವಿದ್ಯಾರ್ಥಿಯು ಭಾಗ – 1 ರಿಂದ 2 ಭಾಷೆ ಹಾಗೂ ಭಾಗ – 2 ರಿಂದ 4 ವಿಷಯಗಳನ್ನು ಆಯ್ಕೆಮಾಡಿಕೊಂಡು ಕಲಿಯಬೇಕಾಗುತ್ತದೆ.
- ವಿಜ್ಞಾನದಲ್ಲಿ 6, ವಾಣಿಜ್ಯ ವಿಭಾಗದಲ್ಲಿ 9 ಮತ್ತು ಕಲಾ ವಿಭಾಗದಲ್ಲಿ 35 ವಿಷಯ ಸಂಯೋಜನೆಗಳಿವೆ.
- ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿ 100 ಅಂಕಗಳ 6 ವಿವಿಧ ವಿಷಯಗಳನ್ನು ಓದಬೇಕು..
- ಪಿಯುಸಿ ಶಿಕ್ಷಣದಲ್ಲಿ ಒಟ್ಟು 11 ಭಾಷೆ ಹಾಗೂ ವಿವಿಧ ಸಂಯೋಜನೆಗಳಿಗೆ (combination) ಸಂಬಂಧಿಸಿದ 23 ವಿಷಯಗಳಿವೆ.
- ಸಂಗೀತದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತಗಳನ್ನು ಐಚ್ಛಿಕ ವಿಷಯಗಳನ್ನಾಗಿ ಓದಬಹುದು / ಕಲಿಯಬಹುದು. ಇವುಗಳಿಗೆ ಪ್ರಾಯೋಗಿಕ ಹಾಗೂ ತಾತ್ವಿಕ ಎರಡೂ ಪರೀಕ್ಷೆಗಳಿರುತ್ತವೆ.
- ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತಗಳಲ್ಲದೆ ಉರ್ದು, ಅರೇಬಿಕ್, ತೆಲುಗು, ತಮಿಳು, ಮಲಯಾಳಂ, ಮರಾಠಿ ಮತ್ತು ಫ್ರೆಂಚ್ ಭಾಷೆಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆ ಎರಡನ್ನು ಮೀರುವಂತಿಲ್ಲ.
- ಇಂಗ್ಲಿಷ್ ಕಷ್ಟ ಎನ್ನುವವರು ಭಾಗ–1ರ ಯಾವುದಾದರೂ 2 ವಿಷಯಗಳನ್ನು ಆಯ್ದುಕೊಳ್ಳಬಹುದು.
- ಪಿಯುಸಿ ವಿಜ್ಞಾನ ಸಂಯೋಜನೆಯಲ್ಲಿ ಜೀವ ವಿಜ್ಞಾನ ಓದದೇ ಇರುವವರೂ ಸಹ ಫಾರ್ಮಸಿ ಕೋರ್ಸ್‌ಗೆ ದಾಖಲಾಗಬಹುದು.

(ಲೇಖಕರು– ಪ್ರಾಚಾರ್ಯರು, ವಿಡಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಸರ್ಕಾರಿ ವಕೀಲರಾಗುವುದು ಹೇಗೆ?

1. ಸರ್ಕಾರಿ ವಕೀಲರಾಗುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಯಶಸ್ವೀ ವಕೀಲರಾಗಲು ಬಾರ್ ಕೌನ್ಸಿಲ್ ಮಾನ್ಯತೆ ಪಡೆದ ಕಾಲೇಜು/ ವಿಶ್ವವಿದ್ಯಾಲಯದಿಂದಎಲ್‌ಎಲ್‌ಬಿ ಅಥವಾ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಪಡೆದಿರಬೇಕು. ಇದರ ಜೊತೆಗೆ, ವೃತ್ತಿಯ ಬಗ್ಗೆ ಸ್ವಾಭಾವಿಕ ಅಭಿರುಚಿ ಮತ್ತು ಆಸಕ್ತಿ, ಸಾಮಾನ್ಯ ಜ್ಞಾನ, ಕಾನೂನುಗಳ ಅರ್ಥೈಸುವಿಕೆ, ಉತ್ತಮ ಸಂವಹನ, ವಿಶ್ಲೇಷಾತ್ಮಕ ಕೌಶಲ ಗುಣಗಳಿರಬೇಕು. ಹಾಗೆಯೇ, ನೆನಪಿನ ಶಕ್ತಿ, ಸಮಯ ಪ್ರಜ್ಞೆ, ಸಮಯದ ನಿರ್ವಹಣೆ, ಜಾಗರೂಕತೆ ಇತ್ಯಾದಿ ವೃತ್ತಿ ಸಂಬಂಧಿತ ಕೌಶಲಗಳು ಅಗತ್ಯ.

ಪದವಿಯ ನಂತರ, ವಕೀಲಿ ವೃತ್ತಿಯ ಸೇವೆ ಸಲ್ಲಿಸಲು ಬಾರ್ ಆ್ಯಂಡ್ ಕೌನ್ಸಿಲ್ ಆಫ್ ಇಂಡಿಯ ಸಂಸ್ಥೆಯೊಂದಿಗೆ ನೋಂದಾಯಿಸಿಕೊಳ್ಳಬೇಕು. ದೇಶದ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿದ ನಂತರ ಸರ್ಕಾರಿ ವಕೀಲರಾಗಲು ಅರ್ಹತೆಯಿರುತ್ತದೆ. ಸರ್ಕಾರಿ ವಕೀಲರಾಗಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಾಥಮಿಕ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:https://cetonline.karnataka.gov.in/kea/asstprosecutor

2. ನಾನು ಬಿಎ ಪದವಿ ಮುಗಿಸಿದ್ದೇನೆ. ನಾನು ನನ್ನ ಸಹಿಯನ್ನು ಕಾಲೇಜು ದಾಖಲಾತಿಗಳಲ್ಲಿ ಇರುವಂತೆ ಮಾಡಿದ್ದೇನೆ. ಈಗ ನನ್ನ ಸಹಿ ಮಾಡುವ ರೀತಿಯನ್ನು ಬದಲಾಯಿಸಬೇಕೆಂದುಕೊಂಡಿದ್ದೇನೆ. ಇದರಿಂದ ಏನಾದರೂ ತೊಂದರೆ ಆಗುತ್ತದೆಯೇ?

ಹೆಸರು, ಊರು ತಿಳಿಸಿಲ್ಲ.

ನಮ್ಮ ಅಭಿಪ್ರಾಯದಂತೆ ಹಿಂದಿನ ಮತ್ತು ನೂತನ ಸಹಿ ಇರುವ ದೃಢೀಕರಿಸಿದ ಪ್ರಮಾಣ ಪತ್ರವನ್ನು ಮಾಡಬೇಕು. ಈಗಿರುವ ಕಾಲೇಜು ದಾಖಲೆಗಳಲ್ಲಿರುವ ಸಹಿಯನ್ನು ಬದಲಾವಣೆ ಮಾಡಬೇಕಿದ್ದಲ್ಲಿ ಪ್ರಮಾಣಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜು/ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ: ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತ ವೃತ್ತಿಯ ಆಯ್ಕೆ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಹಾಗೂ ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in**ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಝೀ ಸ್ಕಾಲರ್ಸ್ ಪ್ರೋಗ್ರಾಂ

ಆರ್ಥಿಕ ಕಾರಣದಿಂದಾಗಿ ಉನ್ನತ ಶಿಕ್ಷಣ ಮುಂದುವರಿಸಲು ತೊಂದರೆ ಎದುರಿಸುತ್ತಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವುದಕ್ಕಾಗಿ ಝೀಎಸ್ ಅಸೋಸಿಯೇಟ್ಸ್ ಇಂಡಿಯಾ ಪ್ರೈ. ಲಿ 'ಝೀ ಸ್ಕಾಲರ್ಸ್ ಪ್ರೋಗ್ರಾಂ' ರೂಪಿಸಿದೆ.

ಮೊದಲ ವರ್ಷದ ಸಾಮಾನ್ಯ ಅಥವಾ ವೃತ್ತಿಪರ ಪದವಿಪೂರ್ವ ಕೋರ್ಸ್‌ಗಳನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ಈ ಸ್ಕಾಲರ್ಸ್ ಪ್ರೋಗ್ರಾಂಗೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ದೆಹಲಿ, ಪುಣೆ ಅಥವಾ ಬೆಂಗಳೂರಿನಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ಸ್ಟ್ರೀಮ್‌ನಲ್ಲಿ ಮೊದಲ ವರ್ಷದ ಸಾಮಾನ್ಯ ಅಥವಾ ವೃತ್ತಿಪರ ಪದವಿಪೂರ್ವ ಕೋರ್ಸ್‌ಗಳನ್ನು ಓದುತ್ತಿರುವ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು 12 ನೇ ತರಗತಿ ಪರೀಕ್ಷೆಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 8 ಲಕ್ಷಕ್ಕಿಂತ ಹೆಚ್ಚಿರಬಾರದು.

ಆರ್ಥಿಕ ಸಹಾಯ: 1 ವರ್ಷಕ್ಕೆ ₹ 50,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನ : 09-03-2023

ಅರ್ಜಿ ಸಲ್ಲಿಕೆಯ ವಿಧಾನ : ಆನ್‌ಲೈನ್

ಹೆಚ್ಚಿನ ಮಾಹಿತಿಗೆ: www.b4s.in/praja/ZSPU1

ಮುಂದಿನವಾರ: ಕಲಾ ಮತ್ತು ವಾಣಿಜ್ಯ ವಿಭಾಗದ 'ವಿಷಯ ಸಂಯೋಜನೆ' ವಿವರ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ವಿಜ್ಞಾನ

ಎಸ್ಸೆಸ್ಸೆಲ್ಸಿ

11) ಸಹವೇಲೆನ್ಸೀಯ ಬಂಧದ ಸ್ವರೂಪವು ಕಾರ್ಬನ್ ಬೃಹತ್ ಸಂಖ್ಯೆಯ ಸಂಯುಕ್ತಗಳನ್ನು ಉಂಟುಮಾಡುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕಾರ್ಬನ್‌ನಲ್ಲಿ ಗಮನಿಸಬಹುದಾದ ಎರಡು ಪ್ರಮುಖ ಅಂಶಗಳ ಬಗ್ಗೆ ಬರೆಯಿರಿ. ಪುಟ-6

ಉತ್ತರ:- ಕಾರ್ಬನ್‌ನ ಪರಿವರ್ತನೀಯ ಸ್ವಭಾವ ವಿವಿಧ ಧಾತುಗಳಲ್ಲಿ ಮತ್ತು ಸಂಯುಕ್ತಗಳಲ್ಲಿ ಇಲೆಕ್ಟ್ರಾನ್‌ಗಳ ಹಂಚಿಕೆಯಿಂದ ಸಹವೇಲೆನ್ಸೀಯ ಬಂಧ ಉಂಟಾಗುವುದನ್ನು ನಾವು ನೋಡಿದ್ದೇವೆ. ಕಾರ್ಬನ್‌ನ ಸರಳ ಸಂಯುಕ್ತವಾದ ಮೀಥೇನ್‌ನ ರಚನೆಯನ್ನು ನೋಡುತ್ತೇವೆ. ನಾವು ಉಪಯೋಗಿಸುವ ಅನೇಕ ವಸ್ತುಗಳು ಕಾರ್ಬನ್‌ನಿಂದ ಮಾಡಲ್ಪಟ್ಟವೆ, ನಮ್ಮ ದೇಹವೂ ಕಾರ್ಬನ್ ಸಂಯುಕ್ತಗಳಿಂದಾಗಿದೆ.

ಇದು ಇತರೆ ಎಲ್ಲ ಧಾತುಗಳು ಉಂಟುಮಾಡುವ ಸಂಯುಕ್ತಗಳ ಒಟ್ಟು ಸಂಖ್ಯೆಗಿಂತ ತುಂಬಾ ಅಧಿಕ. ಕಾರ್ಬನ್‌ನಲ್ಲಿಯೇ ಇಂತಹ ಗುಣ ಇರಲು ಕಾರಣ ಸಹವೇಲೆನ್ಸೀಯ ಬಂಧದ ಸ್ವರೂಪ. ಇದು ಕಾರ್ಬನ್ ಬೃಹತ್ ಸಂಖ್ಯೆಯ ಸಂಯುಕ್ತಗಳನ್ನು ಉಂಟುಮಾಡಲು ಅನುಕೂಲ ಮಾಡಿಕೊಟ್ಟಿದೆ.. ಕಾರ್ಬನ್‌ನಲ್ಲಿ ಗಮನಿಸಬಹುದಾದ ಎರಡು ಪ್ರಮುಖ ಅಂಶಗಳೆಂದರೆ - (i) ಕಾರ್ಬನ್‌ನ ಒಂದು ಅನನ್ಯ ಗುಣ. ಇದು ಇತರೆ ಕಾರ್ಬನ್ ಪರಮಾಣುಗಳೊಂದಿಗೆ ಬಂಧಗಳನ್ನೇರ್ಪಡಿಸಿಕೊಂಡು ಬೃಹತ್ ಅಣುಗಳನ್ನು ಕೊಡುತ್ತದೆ. ಕಾರ್ಬನ್‌ನ ಈ ಗುಣವನ್ನು ಕೆಟನೀಕರಣ ಎನ್ನುವರು. ಈ ಸಂಯುಕ್ತಗಳು ಕಾರ್ಬನ್‌ನ ನೇರ ಸರಪಳಿ, ಕವಲು ಸರಪಳಿ ಅಥವಾ ಉಂಗುರಾಕಾರದ ಜೋಡಣೆಗಳನ್ನು ಹೊಂದಿರಬಹುದು. ಇದರ ಜೊತೆಗೆ ಕಾರ್ಬನ್ ಪರಮಾಣುಗಳು ಏಕಬಂಧ, ದ್ವಿಬಂಧ ಅಥವಾ ತ್ರಿಬಂಧದಿಂದ ಜೋಡಣೆಗೊಂಡಿರಬಹುದು.

ಕಾರ್ಬನ್ ಪರಮಾಣುಗಳ ನಡುವೆ ಕೇವಲ ಏಕಬಂಧವಿದ್ದರೆ ಅಂತಹ ಕಾರ್ಬನ್ ಸಂಯುಕ್ತಗಳನ್ನು ಪರ್ಯಾಪ್ತ ಸಂಯುಕ್ತಗಳು ಎನ್ನುವರು. ಕಾರ್ಬನ್ ಸಂಯುಕ್ತಗಳಲ್ಲಿ ಎರಡು ಅನುಕ್ರಮ ಕಾರ್ಬನ್ ಪರಮಾಣುಗಳ ನಡುವೆ ದ್ವಿಬಂಧ ಅಥವಾ ತ್ರಿಬಂಧ ಕಂಡುಬಂದರೆ ಅಂತಹ ಸಂಯುಕ್ತಗಳನ್ನು ಅಪರ್ಯಾಪ್ತ ಸಂಯುಕ್ತಗಳು ಎನ್ನುವರು.

ಕಾರ್ಬನ್ ಸಂಯುಕ್ತಗಳಲ್ಲಿ ಕಂಡುಬರುವಷ್ಟು ಪ್ರಮಾಣದಲ್ಲಿ ಕೆಟನೀಕರಣ ಗುಣವನ್ನು ಇತರೆ ಯಾವುದೇ ಧಾತುಗಳು ತೋರ್ಪಡಿಸುವುದಿಲ್ಲ.


ಸಿಲಿಕಾನ್ ಹೈಡ್ರೋಜನ್‌ನೊಂದಿಗೆ ಸಂಯುಕ್ತಗಳನ್ನು ಉಂಟುಮಾಡುತ್ತದೆ. ಈ ಸರಪಳಿಗಳಲ್ಲಿ ಏಳರಿಂದ-ಎಂಟು ಪರಮಾಣುಗಳು ಇರುತ್ತವೆ. ಆದರೆ ಈ ಸಂಯುಕ್ತಗಳು ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಕಾರ್ಬನ್-ಕಾರ್ಬನ್ ಬಂಧವು ಹೆಚ್ಚು ಪ್ರಬಲವಾಗಿರುವುದರಿಂದ ಸ್ಥಿರವಾಗಿರುತ್ತದೆ. ಇದರಿಂದಾಗಿ ನಮಗೆ ಕಾರ್ಬನ್ ಪರಮಾಣುಗಳ ಪರಸ್ಪರ ಜೋಡಣೆಯಿರುವ ಹೆಚ್ಚಿನ ಸಂಖ್ಯೆಯ ಸಂಯುಕ್ತಗಳು ದೊರೆಯುತ್ತವೆ.

(ii) ಕಾರ್ಬನ್‌ನ ವೇಲೆನ್ಸಿ ನಾಲ್ಕು. ಇದರಿಂದಾಗಿ ಕಾರ್ಬನ್ ನಾಲ್ಕು ಇತರೆ ಕಾರ್ಬನ್ ಪರಮಾಣುಗಳೊಂದಿಗೆ ಅಥವಾ ಏಕ ವೇಲೆನ್ಸೀಯ ಧಾತುಗಳೊಂದಿಗೆ ಜೋಡಣೆಗೊಳ್ಳುವ ಕಾರ್ಬನ್ ಮತ್ತು ಅದರ ಸಂಯುಕ್ತಗಳು 7 ಸಾಮರ್ಥ್ಯ ಹೊಂದಿದೆ. ಹೈಡ್ರೋಜನ್, ಆಕ್ಸಿಜನ್, ನೈಟ್ರೋಜನ್, ಸಲ್ಫರ್, ಕ್ಲೋರಿನ್ ಮತ್ತು ಇತರ ಹಲವಾರು ಧಾತುಗಳೊಂದಿಗೆ ವಿಶಿಷ್ಟ ಗುಣಗಳುಳ್ಳ ಕಾರ್ಬನ್ ಸಂಯುಕ್ತಗಳನ್ನು ಉಂಟುಮಾಡುತ್ತದೆ.

ಕಾರ್ಬನ್ ಇತರೆ ಧಾತುಗಳೊಂದಿಗೆ ಉಂಟುಮಾಡುವ ಬಂಧಗಳು ಸಾಕಷ್ಟು ಪ್ರಬಲವಾಗಿದ್ದು, ಈ ಸಂಯುಕ್ತಗಳನ್ನು ಹೆಚ್ಚು ಸ್ಥಿರವಾಗಿರುವಂತೆ ಮಾಡುತ್ತವೆ. ಕಾರ್ಬನ್ ಪ್ರಬಲ ಬಂಧಗಳನ್ನು ಉಂಟುಮಾಡಲು ಒಂದು ಕಾರಣವೆಂದರೆ ಅದರ ಗಾತ್ರ ಚಿಕ್ಕದಾಗಿರುವುದು. ಇದು ಹಂಚಿಕೊಂಡ ಎಲೆಕ್ಟ್ರಾನ್‌ಗಳನ್ನು ಪರಮಾಣು ಬೀಜಕೇಂದ್ರವು ಪ್ರಬಲವಾಗಿ ಹಿಡಿದಿಟ್ಟುಕೊಳ್ಳುವಂತೆ ಮಾಡುತ್ತದೆ. ದೊಡ್ಡ ಪರಮಾಣುಗಳನ್ನು ಹೊಂದಿರುವ ಧಾತುಗಳು ಉಂಟುಮಾಡುವ ಬಂಧಗಳು ಹೆಚ್ಚು ದುರ್ಬಲವಾಗಿವೆ.

12) ಒಂದು ಹೂವಿನಲ್ಲಿರುವ ಶಲಾಕೆಯ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.

ಉತ್ತರ:-



13) ಒಂದು ಆಟೋಮೊಬೈಲ್ ವಾಹನದಲ್ಲಿ ಹಿನ್ನೋಟವನ್ನು ಪಡೆಯಲು ಉಪಯೋಗಿಸಿದ ಪೀನ ದರ್ಪಣದ ವಕ್ರತಾ ತ್ರಿಜ್ಯವು 3.00 m ಇದೆ. ಒಂದು ವೇಳೆ ಬಸ್ಸು ದರ್ಪಣದಿಂದ 5.00 m ದೂರದಲ್ಲಿ ಇದ್ದರೆ ಪ್ರತಿಬಿಂಬದ ಸ್ಥಾನ, ಸ್ವಭಾವ ಮತ್ತು ಗಾತ್ರವನ್ನು ಕಂಡುಹಿಡಿಯಿರಿ.

ಪರಿಹಾರ : ವಕ್ರತಾ ತ್ರಿಜ್ಯ $R = +3.00$ m

ವಸ್ತು ದೂರ $u = -5.00$ m

ಪ್ರತಿಬಿಂಬ ದೂರ $v = ?$

ಪ್ರತಿಬಿಂಬದ ಎತ್ತರ $h' = ?$

ಸಂಗಮ ದೂರ $= f = \frac{R}{2} = +\frac{3.00}{2} = 1.50m$

$\frac{1}{v} + \frac{1}{u} = \frac{1}{f}$ ಆಗಿರುವುದರಿಂದ

ಅಥವಾ $\frac{1}{v} = \frac{1}{f} - \frac{1}{u} = \frac{1}{15.0} - \frac{1}{(-5.00)} = \frac{1}{1.50} + \frac{1}{5.0}$

$= \frac{5.00+1.50}{7.50}$

$v = \frac{+7.50}{6.50} = +1.15m$

ಪ್ರತಿಬಿಂಬವು ದರ್ಪಣದ ಹಿಂದೆ 1.15 m ದೂರದಲ್ಲಿದೆ.

ವರ್ಧನೆ, $\frac{1}{v} + \frac{1}{u} = \frac{1}{f}$

ವರ್ಧನೆ $m = \frac{h'}{h} = \frac{v}{u} = \frac{1.15m}{-5.00m} = +0.23$

ಪ್ರತಿಬಿಂಬವು ಮಿಥ್ಯ, ನೇರ ಮತ್ತು ಗಾತ್ರದಲ್ಲಿ 0.23 ಅಂಶದಷ್ಟು ಚಿಕ್ಕದಾಗಿದೆ.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ


ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತ

ಪಿಯುಸಿ

52) $x^2 + y^2 = 4$ ಮತ್ತು $(x-2)^2 + y^2 = 4$ ವೃತ್ತಗಳಿಂದ ಆವೃತವಾದ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಪರಿಹಾರ:



ದತ್ತ ಸಮೀಕರಣಗಳು $x^2 + y^2 = 4$ .... (1) ಮತ್ತು

$(x-2)^2 + y^2 = 4$ ಆಗಿವೆ ... (2)

ಸಮೀಕರಣ (1) ಮೂಲಬಿಂದು 'O' ಕೇಂದ್ರವಾಗಿರುವ ತ್ರಿಜ್ಯ 2 ಆಗಿರುವ ವೃತ್ತವಾದರೆ ಸಮೀಕರಣ (2) C(2, 0) ಕೇಂದ್ರವಾಗಿರುವ ತ್ರಿಜ್ಯ 2 ಆಗಿರುವ ವೃತ್ತವಾಗಿದೆ. ಈ ಎರಡು ಸಮೀಕರಣಗಳನ್ನು ಬಿಡಿಸಿದಾಗ,

$(x-2)^2 + y^2 = x^2 + y^2$ ಅಥವಾ $x^2 - 4x + 4 + y^2 = x^2 + y^2$

ಅಥವಾ $x = 1$ ಆಗುತ್ತದೆ

ಆದ್ದರಿಂದ $y = \pm 3$ ಆಗುತ್ತದೆ

ಹಾಗಾಗಿ ದತ್ತ ವೃತ್ತಗಳ $A^1(1, \sqrt{3})$ ಮತ್ತು $A^1(1, -\sqrt{3})$ ಗಳಲ್ಲಿ ಒಂದನ್ನೊಂದು ಛೇದಿಸುತ್ತವೆ. (ಚಿತ್ರ ನೋಡಿ)

ಎರಡು ವೃತ್ತಗಳ ಮಧ್ಯೆ ಆವೃತವಾಗಿರುವ OACA'O ಪ್ರದೇಶದ ಕ್ಷೇತ್ರಫಲ

= [ODCAO ಪ್ರದೇಶದ ಕ್ಷೇತ್ರಫಲ]

= 2[ODAO ಪ್ರದೇಶದ ಕ್ಷೇತ್ರಫಲ + DCAD ಪ್ರದೇಶದ ಕ್ಷೇತ್ರಫಲ]

$$= 2\left[\int_0^1 y\,dx + \int_1^2 y\,dx\right]$$

$$= 2\left[\int_0^1 \sqrt{4-(x-2)^2}\,dx + \int_1^2 \sqrt{4-x^2}\,dx\right]$$

$$= 2\left[\frac{1}{2}(x-2)\sqrt{4-(x-2)^2} + \frac{1}{2}\times 4\sin^{-1}\left(\frac{x-2}{2}\right)\right]_0^1$$

$$+2\left[\frac{1}{2}\times x\sqrt{4-x^2} + \frac{1}{2}\times 4\sin^{-1}\frac{x}{2}\right]_1^2$$

$$= \left[(x-2)\sqrt{4-(x-2)^2} + 4\sin^{-1}\left(\frac{x-2}{2}\right)\right]_0^1 + \left[x\sqrt{4-x^2} + 4\sin^{-1}\frac{x}{2}\right]_1^2$$

$$= \left[-\sqrt{3} + 4\sin^{-1}\left(\frac{-1}{2}\right) - 4\sin^{-1}(-1)\right] + \left[4\sin^{-1}1 - \sqrt{3} - 4\sin^{-1}\frac{1}{2}\right]$$

$$= \left[\left(-\sqrt{3} - 4\times\frac{\pi}{6}\right) + 4\times\frac{\pi}{2}\right] + \left[4\times\frac{\pi}{2} - \sqrt{3} - 4\times\frac{\pi}{6}\right]$$

$$= \left(-\sqrt{3} - \frac{2\pi}{3} + 2\pi\right) + \left(2\pi - \sqrt{3} - \frac{2\pi}{3}\right)$$

$$= \frac{8\pi}{3} - 2\sqrt{3}$$

53)

$$(x\,dy - y\,dx)\,y\sin\left(\frac{y}{x}\right) = (y\,dx + x\,dy)\,x\cos\left(\frac{y}{x}\right)$$

ಅವಕಲನ ಸಮೀಕರಣವನ್ನು ಬಿಡಿಸಿ.

ಪರಿಹಾರ: ದತ್ತ ಅವಕಲಿತ ಸಮೀಕರಣವನ್ನು

$$\left[xy\sin\left(\frac{y}{x}\right) - x^2\cos\left(\frac{y}{x}\right)\right]dy = \left[xy\cos\left(\frac{y}{x}\right) + y^2\sin\left(\frac{y}{x}\right)\right]dx$$

ಅಥವಾ

$$\frac{dy}{dx} = \frac{xy\cos\left(\frac{y}{x}\right) + y^2\sin\left(\frac{y}{x}\right)}{xy\sin\left(\frac{y}{x}\right) - x^2\cos\left(\frac{y}{x}\right)}$$ ಎಂದು ಬರೆಯಬಹುದು.

ಬಲಬದಿಯ ಅಂಶ ಮತ್ತು ಛೇದವನ್ನು x^2 ನಿಂದ ಭಾಗಿಸಿದಾಗ

$$\frac{dy}{dx} = \frac{\frac{y}{x}\cos\left(\frac{y}{x}\right) + \left(\frac{y^2}{x^2}\right)\sin\left(\frac{y}{x}\right)}{\frac{y}{x}\sin\left(\frac{y}{x}\right) - \cos\left(\frac{y}{x}\right)} \qquad \text{............(1)}$$

ಸಮೀಕರಣ (1) $\frac{dy}{dx} = g\left(\frac{y}{x}\right)$ ರೀತಿಯಲ್ಲಿರುವ ಸಮಜಾತೀಯ ಅವಕಲನ ಸಮೀಕರಣ ಇದನ್ನು ಬಿಡಿಸುವಾಗ

$y = vx$ .... (2) ಎಂದು ಆದೇಶಿಸಬೇಕು

$$\frac{dy}{dx} = v + x\frac{dv}{dx}$$ ಆಗುವುದು

ಇದನ್ನು ಸಮೀಕರಣ (1)ರಲ್ಲಿ ಆದೇಶಿಸಿದಾಗ

$$v + x\frac{dv}{dx} = \frac{v\cos v + v^2\sin v}{v\sin v - \cos v}$$ ದೊರೆಯುವುದು

ಅಥವಾ

$$x\frac{dv}{dx} = \frac{2v\cos v}{v\sin v - \cos v}$$

ಅಥವಾ

$$\left(\frac{v\sin v - \cos v}{v\cos v}\right)dv = \frac{2dx}{x}$$

ಆದ್ದರಿಂದ

$$\int\left(\frac{v\sin v - \cos v}{v\cos v}\right)dv = 2\int\frac{1}{x}dx$$

$$\int\tan v\,dv - \int\frac{dv}{v} = 2\int\frac{1}{x}dx$$

ಅಥವಾ

$$\log|\sec v| - \log|v| = 2\log|x| + \log|C_1|$$

ಅಥವಾ

$$\log\left|\frac{\sec v}{vx^2}\right| = \log|C_1|$$

ಅಥವಾ

$$\frac{\sec v}{vx^2} = \pm C_1$$

ಸಮೀಕರಣ (3)ರಲ್ಲಿ v ಯನ್ನು y/ x ನಿಂದ ಬದಲಿಸಿದಾಗ

$$\frac{\sec\left(\frac{y}{x}\right)}{\left(\frac{y}{x}\right)(x^2)} = C$$ ಇಲ್ಲಿ $C = \pm C_1$

ಅಥವಾ

$$\sec\left(\frac{y}{x}\right) = Cxy$$

ಇದೇ ದತ್ತ ಅವಕಲನ ಸಮೀಕರಣದ ಸಾಮಾನ್ಯ ಪರಿಹಾರ

ಮಲ್ಲೇಶ್ವರ, ವೈಯಾಲಿಕಾವಲ್, ಸದಾಶಿವನಗರದ ನಿವಾಸಿಗಳ ಪ್ರತಿಭಟನೆ

‘ಸ್ಯಾಂಕಿ ರಸ್ತೆ ಮೇಲ್ಸೇತುವೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಮೇಲ್ಸೇತುವೆ ಹಾಗೂ ರಸ್ತೆ ವಿಸ್ತರಣೆ ಯೋಜನೆಯನ್ನು ಸ್ಥಗಿತಗೊಳಿಸಿ, ‘ಸ್ಯಾಂಕಿ ಉಳಿಸಿ’ ಎಂದು ಮಲ್ಲೇಶ್ವರ, ವೈಯಾಲಿಕಾವಲ್, ಸದಾಶಿವನಗರದ ನಿವಾಸಿಗಳು ಭಾನುವಾರ ಕಪ್ಪು ಬಟ್ಟೆಯನ್ನು ಧರಿಸಿ ‘ನಾಗರಿಕರ ಒಗ್ಗಟ್ಟು ನಡಿಗೆ’ ಮೂಲಕ ಪ್ರತಿಭಟಿಸಿದರು.

ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ಬೇಡ ಎಂದು ಸ್ಥಳೀಯ ನಿವಾಸಿಗಳು ಹಲವು ವಾರಗಳಿಂದ ಆಗ್ರಹಪಡಿಸುತ್ತಿದ್ದಾರೆ. ಮುಂದುವರಿದ ಭಾಗವಾಗಿ ಭಾನುವಾರ ಸ್ಯಾಂಕಿ ಕೆರೆಯ ಸುತ್ತಲಿನ ರಸ್ತೆಯಲ್ಲಿ ‘ಸ್ಯಾಂಕಿ ಕೆರೆ ತಂಡ’ದ ಸದಸ್ಯರು ಕಪ್ಪು ಬಟ್ಟೆ ಧರಿಸಿ ನಡೆದರು.

‘ಪಾರಂಪರಿಕ ಮರಗಳನ್ನು ಮೇಲ್ಸೇತುವೆಗಾಗಿ ಕಡಿಯಲಾಗುತ್ತಿದೆ. ಹಸಿರುಮಯವಾಗಿರುವ ಈ ಪ್ರದೇಶ ಇದರಿಂದ ಬರಿದಾಗುತ್ತದೆ’ ಎಂದು ಮಲ್ಲೇಶ್ವರದ ನಿವಾಸಿ ವಸುಂದರದಾಸ್ ಆತಂಕ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಮೊದಲು ನಾಗರಿಕರ ಸಭೆ ಕರೆದು ಚರ್ಚಿಸಲು ಆಗ್ರಹ
- ಮೇಲ್ಸೇತುವೆಯಿಂದ ದಟ್ಟಣೆ ಕಡಿಮೆಯಾಗದು ಎಂದು ಪ್ರತಿಪಾದನೆ
- ಹಸಿರುಮಯ ವಾತಾವರಣಕ್ಕೆ ಧಕ್ಕೆ ತರುವುದು ಬೇಡ

‘ಸ್ಯಾಂಕಿ ಕೆರೆ ನಮಗೆ ಪ್ರಾಕೃತಿಕ ತಾಣ. ಇದರಿಂದ ನಮಗೆ ಆರೋಗ್ಯಕರ ವಾತಾವರಣವಿದೆ. ಇದನ್ನು ರಕ್ಷಿಸಲು ನಾವೆಲ್ಲ ಹೋರಾಟ ಮಾಡುತ್ತಿದ್ದೇವೆ’ ಎಂದು ಸದಾಶಿವನಗರ ಮಧುಸೂಧನ್ ಹೇಳಿದರು.

‘ಸರ್ಕಾರ ವಾಹನ ದಟ್ಟಣೆಗೆ ಸಂಬಂಧಿಸಿದಂತೆ ಅಲ್ಪಕಾಲದ ಪರಿಹಾರಗಳತ್ತ ಮಾತ್ರ ನೋಡಬಾರದು. ಮಲ್ಲೇಶ್ವರ 18ನೇ ಅಡ್ಡರಸ್ತೆಯಿಂದ ಬಾಷ್ಯಂ ವೃತ್ತದವರೆಗಿನ ಮೇಲ್ಸೇತುವೆಯಿಂದ ಯಾವ ದಟ್ಟಣೆಯೂ ಕಡಿಮೆಯಾಗುವುದಿಲ್ಲ’ ಎಂದು ಸದಾಶಿವನಗರದ ಶ್ವೇತಾ ಅಭಿಪ್ರಾಯಪಟ್ಟರು.

‘ಸ್ಯಾಂಕಿ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಾಗರಿಕರ ಸಭೆಯನ್ನು ನಡೆಸಬೇಕು ಎಂದು ಬಿಬಿಎಂಪಿಯವರಿಗೆ ಸಾಕಷ್ಟು ಬಾರಿ ಮನವಿ ಮಾಡಿಕೊಂಡಿದ್ದೇವೆ. ಇದೀಗ, ಬಿಎಂಎಲ್‌ಟಿಎ ಯೋಜನೆಯನ್ನು ಪರಿಶೀಲಿಸುತ್ತಿದೆ ಎಂದು ಬಿಬಿಎಂಪಿ ಹೇಳುತ್ತಿದೆ. ಆದರೆ ಈ ಮೊದಲೇ ಬಿಬಿಎಂಪಿಯ ಅರಣ್ಯ ಇಲಾಖೆ ಮರಗಳನ್ನು ಕಡಿಯಲು ಅನುಮತಿ ನೀಡಿದೆ. ಇದರ ಅರ್ಥ ಯೋಜನೆ ಅನುಷ್ಠಾನವಾಗುತ್ತದೆ ಎಂದಲ್ಲವೇ’ ಎಂದು ಸಿಟಿಜನ್ಸ್ ಫಾರ್ ಸ್ಯಾಂಕಿಯ ಕಿಂಸುಕಾ ಪ್ರಶ್ನಿಸಿದರು.



ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ಬೇಡ ಎಂದು ಭಾನುವಾರ ಸ್ಯಾಂಕಿ ಕೆರೆಯ ಸುತ್ತ ‘ಸ್ಯಾಂಕಿ ಕೆರೆ ತಂಡ’ದ ಸದಸ್ಯರು ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪಂಚಮಸಾಲಿ ಪ್ರತಿಭಟನೆ: ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು’ ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆ ಸ್ಥಳದಲ್ಲಿ ಶಿವ ಬಂಡಿ (31) ಎಂಬುವರು ಆತ್ಮಹತ್ಯೆಗೆ ಯತ್ನಿಸಿದ್ದು, ಅವರ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದೆ. ಪ್ರತ್ಯೇಕ ಪೆಂಡಾಲ್‌ನಲ್ಲಿ ಕುಳಿತಿರುವ ಸ್ವಾಮೀಜಿ, ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ’ ಎಂದು ಪಟ್ಟು ಹಿಡಿದಿದ್ದಾರೆ.

ಫೆ.17ರಂದು ಸಂಜೆ 5.30 ಗಂಟೆ ಸುಮಾರಿಗೆ ಪ್ರತಿಭಟನೆ ಉದ್ದೇಶಿಸಿ ಸ್ವಾಮೀಜಿ ಮಾತನಾಡುತ್ತಿದ್ದರು. ಪೆಟ್ರೋಲ್ ಬಾಟಲಿ ಸಮೇತ ಹಾಜರಿದ್ದ ಶಿವ ಬಂಡಿ, ‘ನಮ್ಮ ಸಮಾಜಕ್ಕೆ ಅನ್ಯಾಯವಾಗಿದೆ. ನ್ಯಾಯ ಬೇಕು. ಸಮಾಜಕ್ಕೋಸ್ಕರ ಪ್ರಾಣ ನೀಡುತ್ತೇನೆ’ ಎಂದು ಕೂಗಾಡಿದ್ದರು. ನಂತರ, ಏಕಾಏಕಿ ಮೈಗೆ ಪೆಟ್ರೋಲ್ ಸುರಿದುಕೊಂಡಿದ್ದರು. ರಕ್ಷಣೆಗೆ ಹೋಗಿದ್ದ ಪೊಲೀಸರು ಶಿವ ಬಂಡಿಯನ್ನು ವಶಕ್ಕೆ ಪಡೆದರು.

ಜಾಮೀನು ಮೇಲೆ ಬಿಡುಗಡೆ: ‘ಕೊಪ್ಪಳ ಜಿಲ್ಲೆ ಕುಷ್ಟಗಿಯ ಶಿವಬಂಡಿ, ಹೋಟೆಲ್ ಇಟ್ಟುಕೊಂಡಿದ್ದಾರೆ. 2 ಲೀಟರ್ ಪೆಟ್ರೋಲ್ ತಂದಿದ್ದು, ಬೆಂಕಿ ಹಚ್ಚಿಕೊಳ್ಳಲು ಯತ್ನಿಸಿದ್ದರು

ಆತ್ಮಹತ್ಯೆಗೆ ಯತ್ನ ಆರೋಪದಡಿ ಶಿವಬಂಡಿ ಅವರನ್ನು ಬಂಧಿಸಿ, ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬಿಎಂಟಿಸಿ ಬಸ್ ಡಿಕ್ಕಿ: ಡೆಲಿವರಿ ಬಾಯ್ ಸಾವು

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಜಲಭವನ ಬಳಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಸೈನುಲ್ಲಾ ಅಹಮ್ಮದ್ ಬಾಬ್ರೂಯ್ (20) ಮೃತಪಟ್ಟಿದ್ದಾರೆ.

‘ಮೂಲತಃ ಅಸ್ಸಾಂನ ಸೈನುಲ್ಲಾ ಜೆ.ಪಿ.ನಗರದಲ್ಲಿ ವಾಸವಿದ್ದು, ಮೊಬೈಲ್ ಆ್ಯಪ್ ಆಧರಿತ ಸ್ವಿಗ್ಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು’ ಎಂದು ಮೈಕೊ ಲೇಔಟ್ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಗ್ರಾಹಕರೊಬ್ಬರಿಗೆ ಆಹಾರದ ಪಾರ್ಸೆಲ್ ತಲುಪಿಸಲು ದ್ವಿಚಕ್ರ ವಾಹನದಲ್ಲಿ ತೆರಳುವಾಗ ಬೆಳಿಗ್ಗೆ 5 ಗಂಟೆ ವೇಳೆಗೆ ಬಿಎಂಟಿಸಿ ಬಸ್ಸು ಡಿಕ್ಕಿಹೊಡೆದಿದೆ. ಸೈನುಲ್ಲಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಅಪಘಾತ ಸ್ಥಳದ ಬಳಿಯ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಲಾಗಿದೆ. ಚಾಲಕ ಬಸ್ ಸಮೇತ ಪರಾರಿಯಾಗಿದ್ದಾನೆ. ನಿರ್ಲಕ್ಷ್ಯ, ಅತೀ ವೇಗದ ಚಾಲನೆ ಆರೋಪದಡಿ ಪ್ರಕರಣ ದಾಖಲಾಗಿದೆ’ ಎಂದಿದ್ದಾರೆ.

ಡೆಲಿವರಿ ಬಾಯ್ ಅಡ್ಡಗಟ್ಟಿ ಸುಲಿಗೆ

ಬೆಂಗಳೂರು: ಗ್ರಾಹಕರಿಗೆ ಆಹಾರ ತಲುಪಿಸಿ ವಾಪಸಾಗುತ್ತಿದ್ದ ಡೆಲಿವರಿ ಬಾಯ್ ನವೀನ್‌ಕುಮಾರ್ ಅವರನ್ನು ಅಡ್ಡಗಟ್ಟಿ ಮೊಬೈಲ್ ಕಸಿದುಕೊಂಡಿದ್ದು, ಈ ಸಂಬಂಧ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಭಾನುವಾರ ನಸುಕಿನಲ್ಲಿ ಪದ್ಮನಾಭನಗರದ ಲಕ್ಷ್ಮಿ ಪಾರ್ಕ್ ಬಳಿ ನವೀನ್‌ಕುಮಾರ್ ಅವರನ್ನು ಅಡ್ಡಗಟ್ಟಿದ್ದ ಮೂವರು ದುಷ್ಕರ್ಮಿಗಳು, ರಾಡ್ ತೋರಿಸಿ ಬೆದರಿಸಿ ಕೃತ್ಯ ಎಸಗಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಪರಾಧ ಸುದ್ದಿ

ಪತ್ನಿ ಬಿಟ್ಟು ಪ್ರೇಯಸಿ ಜೊತೆ ವಾಸ: ಮೃತದೇಹ ಪತ್ತೆ

ಬೆಂಗಳೂರು: ‘ಪತ್ನಿಯನ್ನು ಬಿಟ್ಟು ಪ್ರೇಯಸಿ ಜೊತೆ ವಾಸವಿದ್ದರು’ ಎನ್ನಲಾದ ನಾಗೇಶ್ (34) ಎಂಬುವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಸ್ಥಳೀಯ ಅಂಬೇಡ್ಕರ್ ನಗರ ನಿವಾಸಿ ನಾಗೇಶ್ ಅವರು ನಾಪತ್ತೆಯಾದ ಬಗ್ಗೆ ಕುಂಬಳಗೋಡು ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿತ್ತು. ವಿಶ್ವೇಶ್ವರಯ್ಯ ಬಡಾವಣೆಯ 6ನೇ ಹಂತದಲ್ಲಿ ನಾಗೇಶ್ ಅವರ ಮೃತದೇಹ ಭಾನುವಾರ ಬೆಳಿಗ್ಗೆ ಪತ್ತೆಯಾಗಿದೆ’ ಎಂದು ಜ್ಞಾನಭಾರತಿ ಠಾಣೆ ಪೊಲೀಸರು ಹೇಳಿದರು.

‘ಮರಕ್ಕೆ ನೇಣುಬಿಗಿದ ಸ್ಥಿತಿಯಲ್ಲಿ ಮೃತದೇಹವಿತ್ತು. ಮೇಲ್ನೋಟಕ್ಕೆ ಇದು ಆತ್ಮಹತ್ಯೆ ಎನಿಸುತ್ತದೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

‘ನಾಗೇಶ್ ಅವರು ಕೆಲದಿನಗಳ ಹಿಂದೆ ಪತ್ನಿ ತೊರೆದು ಪ್ರೇಯಸಿ ಜೊತೆಗೆ ವಾಸವಿದ್ದರು. ಈ ಸಂಗತಿ ತಿಳಿಯುತ್ತಿದ್ದಂತೆ ನಾಗೇಶ್ ಪತ್ನಿ ಕುಂಬಳಗೋಡಿಗೆ ಹೋಗಿ ಪತಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ನಾಗೇಶ್, ಪ್ರೇಯಸಿ ಜೊತೆ ಸ್ಥಳದಿಂದ ಪರಾರಿಯಾಗಿದ್ದರು. ಹೀಗಾಗಿ, ಕುಂಬಳಗೋಡು ಠಾಣೆಗೆ ದೂರು ನೀಡಿದ್ದರು. ನಾಗೇಶ್ ಮೃತದೇಹ ಪತ್ತೆಯಾದ ಬೆನ್ನಲ್ಲೇ ಪ್ರೇಯಸಿ ತಲೆಮರೆಸಿಕೊಂಡಿದ್ದಾರೆ’ ಎಂದರು.

ಕೃಷಿ ಹೊಂಡದಲ್ಲಿ ಮುಳುಗಿ ತಾಯಿ–ಮಗ ಸಾವು

ದೊಡ್ಡಬಳ್ಳಾಪುರ: ತಾಲ್ಲೂಕಿನ ಕೋಳೂರು ಗ್ರಾಮದಲ್ಲಿ ಭಾನುವಾರ ಜಾನುವಾರು ಮೇಯಿಸುತ್ತಿದ್ದ ತಾಯಿ–ಮಗ ಆಕಸ್ಮಿಕವಾಗಿ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಕೋಳೂರು ಗ್ರಾಮದ ರೂಪಾ (35), ಅವರ ಮಗ ಹೇಮಂತ್ (9) ಮೃತಪಟ್ಟವರು.

ಫಾಲನೇತ್ರ ಎಂಬುವವರಿಗೆ ಸೇರಿರುವ ಕೃಷಿ ಹೊಂಡದ ಬದುವಿನ ಮೇಲೆ ಆಟವಾಡುತ್ತಿದ್ದ ಹೇಮಂತ್ ಕಾಲು ಜಾರಿ ಹೊಂಡಕ್ಕೆ ಬಿದ್ದಿದ್ದಾನೆ. ಮಗನನ್ನು ರಕ್ಷಿಸಲು ಹೋದ ತಾಯಿ ಕೂಡ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಸ್ಥಳೀಯರು ಮೃತದೇಹಗಳನ್ನು ಹೊರತೆಗೆದಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್
(9606038256)
ಸಹ ಮಾಡಬಹುದು.



ಜೆ.ಸಿ. ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹರಡಿಕೊಂಡಿರುವ ಕೇಬಲ್‌ಗಳು

‘ಕೇಬಲ್ ತೆರವುಗೊಳಿಸಿ’

ಜೆ.ಸಿ.ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕೇಬಲ್‌ಗಳು ಬಿದ್ದಿದ್ದು, ಸಾರ್ವಜನಿಕರು ಓಡಾಡಲು ಪ್ರಯಾಸ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಬಲ್ ಸರಿಯಾಗಿ ಅಳವಡಿಸದ ಕಾರಣ ಪಾದಚಾರಿ ಮಾರ್ಗದ ತುಂಬೆಲ್ಲಾ ಹರಡಿಕೊಂಡಿದೆ. ಇದರಿಂದ ಪಾದಚಾರಿಗಳು ಮುಖ್ಯರಸ್ತೆಯಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಾಹನಗಳ ಅತಿವೇಗದಿಂದಾಗಿ ರಸ್ತೆ ಅಂಚಿನಲ್ಲಿ ಓಡಾಡಲು ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ, ಬೆಸ್ಕಾಂ ಸಿಬ್ಬಂದಿ ತುರ್ತಾಗಿ ದುರಸ್ತಿ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು.

ಸಂತೋಷ್ ಕುಮಾರ್, ಪಾದಚಾರಿ



ಮಹದೇವಪುರದ ದೊಡ್ಡನೆಕ್ಕುಂದಿಯ ವಿನಾಯಕ ಲೇಔಟ್ ರಸ್ತೆ.

‘ಅಗೆದ ರಸ್ತೆ ಸರಿಪಡಿಸಿ’

ಮಹದೇವಪುರ ಕ್ಷೇತ್ರದ ವಾರ್ಡ್ ಸಂಖ್ಯೆ 85ರ ದೊಡ್ಡನೆಕ್ಕುಂದಿಯ ವಿನಾಯಕ ಲೇಔಟ್‌ನಲ್ಲಿ ಕಳೆದ ತಿಂಗಳು ಚರಂಡಿ, ರಸ್ತೆ ಕಾಮಗಾರಿ ಪ್ರಾರಂಭಿಸಲಾಗಿತ್ತು. ಕೆಲಸ ಪೂರ್ಣಗೊಳಿಸದೇ ರಸ್ತೆಯನ್ನು ಅಗೆದು, ಚರಂಡಿ ಮೇಲಿನ ಚಪ್ಪಡಿ ಕಲ್ಲುಗಳನ್ನೂ ಕಿತ್ತು ಹೋಗಿದ್ದಾರೆ. ಈವರೆಗೂ ರಸ್ತೆ ಮತ್ತು ಚರಂಡಿಯನ್ನು ದುರಸ್ತಿಗೊಳಿಸಿಲ್ಲ. ಈ ಸಂಬಂಧ ಸ್ಥಳೀಯ ಎಂಜಿನಿಯರ್‌ಗಳ ಗಮನಕ್ಕೆ ತಂದರೂ ಸ್ಪಂದಿಸುತ್ತಿಲ್ಲ. ಇವತ್ತು ನಾಳೆ ಎಂದು ಸಬೂಬು ಹೇಳುತ್ತಿದ್ದಾರೆ. ಇದರಿಂದ ಹಿರಿಯ ನಾಗರಿಕರು ಮತ್ತು ಮಹಿಳೆಯರಿಗೆ ಓಡಾಡಲು ಕಷ್ಟವಾಗುತ್ತಿದೆ.

ಎಸ್. ಪ್ರಭಾಕರ್, ಸ್ಥಳೀಯ ನಿವಾಸಿ



ಹಲಸೂರು ಮೆಟ್ರೊ ನಿಲ್ದಾಣಕ್ಕೆ ಹೋಗುವ ಪಾದಚಾರಿ ಮಾರ್ಗದಲ್ಲಿ ಜಲ್ಲಿಕಲ್ಲು

‘ಪಾದಚಾರಿ ಮಾರ್ಗದಲ್ಲಿ ಜಲ್ಲಿಕಲ್ಲು’

ಹಲಸೂರು ಮೆಟ್ರೊ ನಿಲ್ದಾಣಕ್ಕೆ ಹೋಗುವ ಪಾದಚಾರಿ ಮಾರ್ಗದಲ್ಲಿ ಜಲ್ಲಿಕಲ್ಲು, ಕಟ್ಟಡ ನಿರ್ಮಾಣ ತ್ಯಾಜ್ಯವನ್ನು ಹಾಕಲಾಗಿದೆ. ಇದರಿಂದಾಗಿ ಪಾದಚಾರಿಗಳು ಹಳೇ ಮದ್ರಾಸ್ ಮುಖ್ಯರಸ್ತೆಯಲ್ಲಿ ನಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುವುದರಿಂದ ಪಾದಚಾರಿಗಳು ಜೀವ ಭಯದಲ್ಲಿ ಓಡಾಡಬೇಕಾಗಿದೆ. ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಟ್ಟಡ ನಿರ್ಮಾಣ ತ್ಯಾಜ್ಯವನ್ನು ಕೂಡಲೇ ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ರಾಜೇಂದ್ರ, ಸುಮಂತ್, ಪಾದಚಾರಿಗಳು

‘ನಿರ್ವಹಣೆಯಾಗದ ವಿಶ್ವೇಶ್ವರಯ್ಯ ಉದ್ಯಾನ’

ಬಸವೇಶ್ವರನಗರದ 3ನೇ ಹಂತದ ಯುವಿಸಿಇ ಲೇಔಟ್‌ನಲ್ಲಿರುವ ವಿಶ್ವೇಶ್ವರಯ್ಯ ಉದ್ಯಾನವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಬಿಬಿಎಂಪಿಯಿಂದ ಗುತ್ತಿಗೆ ನಿರ್ವಹಣೆ ಪಡೆದವರೂ ನಿರ್ಲಕ್ಷ್ಯಿಸಿದ್ದಾರೆ. ವ್ಯಾಯಾಮ, ವಾಯುವಿಹಾರ ಹಾಗೂ ವಿಶ್ರಾಂತಿಗೆ, ಮಕ್ಕಳ ಆಟಕ್ಕೆ ಅಗತ್ಯವಿರುವ ಉದ್ಯಾನದ ನಿರ್ವಹಣೆಗೆ ನಿರ್ಲಕ್ಷ್ಯ ವಹಿಸಲಾಗಿದೆ. ಕಸ, ಕಡ್ಡಿ, ಪ್ಲಾಸ್ಟಿಕ್ ವಸ್ತುಗಳು, ಮರಗಳ ತರಗೆಲೆಗಳು ಉದ್ಯಾನದಲ್ಲಿ ಹರಡಿಕೊಂಡಿರುತ್ತವೆ. ಇದರಿಂದ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರಿಗೆ ಇಲ್ಲಿ ಸರಿಯಾಗಿ ಶೌಚಾಲಯದ ವ್ಯವಸ್ಥೆಯೂ ಇಲ್ಲ. ರಾತ್ರಿ ಸಮಯದಲ್ಲಿ ಉದ್ಯಾನದ ಗೇಟ್‌ಗಳಿಗೆ ಬೀಗ ಹಾಕುವುದಿಲ್ಲ. ಇದರಿಂದ ಅನೈತಿಕ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ, ಉದ್ಯಾನವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು.

ಜೆ. ಮೋಹನ್ ರೆಡ್ಡಿ, ಬಸವೇಶ್ವರನಗರದ ನಿವಾಸಿ



ವಿಶ್ವೇಶ್ವರಯ್ಯ ಉದ್ಯಾನದ ದುಸ್ಥಿತಿ

'ನಾನಿನ್ನೂ ಅರಿಯಬೇಕಿದ್ದ ನನ್ನಪ್ಪ' ಕೃತಿ ಬಿಡುಗಡೆಯಲ್ಲಿ ಪ್ರೊ.ಎಸ್‌ಜಿ.ಎಸ್ ಅಭಿಮತ

'ವರ್ತಮಾನಕ್ಕೆ ಜಿಕೆಜಿ ತೀಕ್ಷ್ಣ ಪ್ರತಿಕ್ರಿಯೆ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ 'ನಾನಿನ್ನೂ ಅರಿಯಬೇಕಿದ್ದ ನನ್ನಪ್ಪ' ಕೃತಿಯನ್ನು ಪ್ರೊ.ಎಸ್‌ಜಿ. ಸಿದ್ಧರಾಮಯ್ಯ ಬಿಡುಗಡೆ ಮಾಡಿದರು. ಶ್ಯಾಮಲಾ ಗುರುಪ್ರಸಾದ್, ವಿನಯಾ ಒಕ್ಕುಂದ, ಕೆ.ವೈ. ನಾರಾಯಣಸ್ವಾಮಿ, ಮಾವಳ್ಳಿ ಶಂಕರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: 'ವರ್ತಮಾನದ ಪರಿಸ್ಥಿತಿಗೆ ಜಿ.ಕೆ. ಗೋವಿಂದರಾವ್ ಅವರ ಮನಸ್ಸು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿತ್ತು. ಕೆಟ್ಟ ವಾತಾವರಣದಲ್ಲಿ ನಮ್ಮ ಮೊಮ್ಮಕ್ಕಳನ್ನು ಬಿಟ್ಟು ಹೋಗಬೇಕಲ್ಲ ಎಂಬ ನೋವು ಕೊನೆಯ ದಿನಗಳಲ್ಲಿ ಅವರನ್ನು ಕಾಡಿತ್ತು' ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಹೇಳಿದರು.

ಪ್ರೊ.ಜಿ.ಕೆ. ಗೋವಿಂದ ರಾವ್ ಬಳಗ ಮತ್ತು ಅಹರ್ನಿಶಿ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ನಮ್ಮ ಜಿಕೆಜಿ ನೆನಪು' ಕಾರ್ಯಕ್ರಮದಲ್ಲಿ ಶ್ಯಾಮಲಾ ಗುರುಪ್ರಸಾದ್ ಅವರ 'ನಾನಿನ್ನೂ ಅರಿಯಬೇಕಿದ್ದ ನನ್ನಪ್ಪ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಇಂದಿನ ದುರ್ದಿನಗಳಲ್ಲಿ ನಮಗೆ ಜಿಕೆಜಿ, ಚಂಪಾ ಅವರಂತವರ ಅಗತ್ಯ ಹೆಚ್ಚಿದೆ. ಜಿಕೆಜಿ ನಾಡಿನ ಸಾಕ್ಷಿಪ್ರಜ್ಞೆ. ಸಮಾಜದಲ್ಲಿನ ಬದಲಾವಣೆಗಳ ಬಗ್ಗೆ ಕೊನೆಯ ದಿನಗಳಲ್ಲಿ ಬೇಸರದ ಮಾತು ಹಂಚಿಕೊಂಡಿದ್ದರು' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, 'ಜಿಕೆಜಿ ಅವರಲ್ಲಿ ಬಸವಣ್ಣ ಅವರಲ್ಲಿನ ತಳಮಳ ಕಾಣಬಹುದಾಗಿತ್ತು. ವಿದ್ಯಾರ್ಥಿಗಳಲ್ಲಿ ಜಿಕೆಜಿ ಚಿಂತನೆಗಳನ್ನು ಬಿತ್ತಬೇಕು' ಎಂದು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ಲೇಖಕಿ ವಿನಯಾ ಒಕ್ಕುಂದ, 'ಪುತ್ರಿ ಶ್ಯಾಮಲಾ ತಮ್ಮ ವಿಮರ್ಶಾ ಪ್ರಜ್ಞೆಯನ್ನು ಸದಾ ಜಾಗೃತವಾಗಿರಿಸಿಕೊಂಡು ಈ ಕೃತಿ ಬರೆದಿದ್ದಾರೆ' ಎಂದರು.

ಶ್ಯಾಮಲಾ ಗುರುಪ್ರಸಾದ್ ಅವರು, 'ತಂದೆ ಜಿಕೆಜಿ ನಮ್ಮೆಲ್ಲರ ನಡುವಿನ ಮಿಣುಕು ದೀಪವಾಗಿದ್ದಾರೆ. ಈ ಮಿಣುಕು ದೀಪ ಪ್ರಕಾಶಮಾನವಾಗಿ ಬೆಳೆಯುತ್ತದೆ ಎಂಬ ಆಶಾಭಾವವಿದೆ' ಎಂದು ಹೇಳಿದರು.



ನಾಟಕ ಪ್ರದರ್ಶನ

ರಂಗನಿರಂತರ ಸಾಂಸ್ಕೃತಿಕ ಸಂಘಟನೆ ನಗರದಲ್ಲಿ ಆಯೋಜಿಸಿರುವ ಸಿಜಿಕೆ ರಾಷ್ಟ್ರೀಯ ರಂಗೋತ್ಸವದಲ್ಲಿ ಭಾನುವಾರ 'ದಕ್ಲಾಕಥಾ ದೇವಿಕಾವ್ಯ' ನಾಟಕ ಪ್ರದರ್ಶನ ನಡೆಯಿತು –ಪ್ರಜಾವಾಣಿ ಚಿತ್ರ

'ವಿಧಾನಸಭೆ ಜತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ'

ಬೆಂಗಳೂರು: ಏಕಕಾಲದಲ್ಲೇ ವಿಧಾನಸಭೆ, ಬಿಬಿಎಂಪಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ನಡೆಸಬೇಕು ಎಂದು ಭಾರತೀಯ ಚುನಾವಣಾ ಸುಧಾರಣಾ ಹೋರಾಟ ಸಮಿತಿಯು ರಾಜ್ಯ ಚುನಾವಣಾ ಆಯೋಗಕ್ಕೆ ಒತ್ತಾಯಿಸಿದೆ.

ಈ ಬಗ್ಗೆ ಆಯೋಗಕ್ಕೆ ಪತ್ರ ಬರೆದಿರುವ ಸಮಿತಿ ಸಂಸ್ಥಾಪಕ ರಮೇಶ ಆರ್. ಧುತ್ತರಗಿ, 'ಬಿಬಿಎಂಪಿ ಚುನಾಯಿತ ಸದಸ್ಯರಿಲ್ಲದೇ ಎರಡು ವರ್ಷ ನಾಲ್ಕು ತಿಂಗಳುಗಳಾಗಿದೆ. ಜಿಲ್ಲಾ, ತಾಲ್ಲೂಕು ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲದೇ 22 ತಿಂಗಳುಗಳಾಗಿವೆ' ಎಂದು ತಿಳಿಸಿದ್ದಾರೆ.

'ಬಿಬಿಎಂಪಿ ವಾರ್ಡ್, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆ, ಸೀಮಾ ಗಡಿರೇಖೆ, ಮೀಸಲಾತಿ ಕುರಿತು ಸರ್ಕಾರ ಜಾಣ ಕುರುಡು ನೀತಿ ಅನುಸರಿಸುತ್ತಿದೆ' ಎಂದು ದೂರಿದ್ದಾರೆ.

ಅಶ್ವತ್ಥನಾರಾಯಣ ವಿರುದ್ಧ ಸ್ವಪಕ್ಷೀಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲಾ ಉಸ್ತುವಾರಿ ಸಚಿವ ಅಶ್ವತ್ಥನಾರಾಯಣ ಹಾಗೂ ರೇಷ್ಮೆ ಅಭಿವೃದ್ಧಿ ಕೈಗಾರಿಕೆಗಳ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಗೌತಮ್ ಗೌಡ ಅವರ ವಿರುದ್ಧ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರೇ ಭಾನುವಾರ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿಯ ಪಂಚಮುಖಿ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಬಿಜೆಪಿ ಮುಖಂಡರು ಹಾಗೂ ಸದಸ್ಯರು, 'ರಾಮನಗರ ಬಿಜೆಪಿ ಉಳಿಸಿ' ಎಂದು ಆಗ್ರಹಿಸಿ ಮೌನ ಪ್ರತಿಭಟನೆ ನಡೆಸಿದರು. ಸಚಿವರ ವಿರುದ್ಧ ಹಲವಾರು ಆರೋಪಗಳ ಕರಪತ್ರವನ್ನೂ ಬಿಡುಗಡೆ ಮಾಡಿದರು.

'ಸಚಿವ ಅಶ್ವತ್ಥನಾರಾಯಣ ಅವರು ಸ್ಥಳೀಯ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಮತ್ತು ಪ್ರಾಮಾಣಿಕರಿಗೆ ಅವಕಾಶ ನೀಡುತ್ತಿಲ್ಲ. ರಾಮನಗರ ಜಿಲ್ಲೆಯಲ್ಲಿ ಈವರೆಗೆ ಸುಸಜ್ಜಿತ ಬಿಜೆಪಿ ಕಚೇರಿಯನ್ನು ಸ್ಥಾಪಿಸಲು ಆಗಿಲ್ಲ. ಅವರ ನಿರ್ಲಕ್ಷ್ಯದಿಂದಲೇ ರಾಮನಗರ ನಗರಸಭೆಯಲ್ಲಿ ಪಕ್ಷ ನಾಲ್ಕನೇ ಸ್ಥಾನಕ್ಕೆ ಕುಸಿಯಿತು' ಎಂದೂ ಆರೋಪಿಸಿದ್ದಾರೆ.

ವಂಚನೆ: ಠಾಣೆ ಮೆಟ್ಟಿಲೇರಿದ ಸಚಿವಾಲಯ ನೌಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಯಶ್ರೀ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಅಡಿ ನಿವೇಶನ ಕೊಡಿಸುವುದಾಗಿ ಹೇಳಿ ₹ 4.20 ಲಕ್ಷ ಪಡೆದು ವಂಚಿಸಲಾಗಿದೆ' ಎಂದು ಆರೋಪಿಸಿ ವಿಧಾನಸಭೆ ಸಚಿವಾಲಯದ ನೌಕರ ಇಸಾಕ್ ಅಹಮ್ಮದ್ ಎಂಬುವರು ಚಂದ್ರಾ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಜೆ.ಸಿ.ನಗರ ನಿವಾಸಿ ಇಸಾಕ್ ಅವರ ದೂರು ಆಧರಿಸಿ ಆರೋಪಿಗಳಾದ ಅಮರ್ ಸಿಂಗ್, ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.


'ಸ್ನೇಹಿತರೊಬ್ಬರ ಮೂಲಕ ಇಸಾಕ್ ಅವರಿಗೆ ಅಮರ್ ಸಿಂಗ್ ಪರಿಚಯವಾಗಿತ್ತು. ಜಯಶ್ರೀ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ನೆಂದು ಹೇಳಿದ್ದ ಅವರು ಸದಸ್ಯರಾದರೆ ನಿವೇಶನ ಮಂಜೂರು ಮಾಡುವುದಾಗಿ ಭರವಸೆ ನೀಡಿದ್ದ. ಅದನ್ನು ನಂಬಿದ್ದ ದೂರುದಾರ, 2012ರ ಮೇ 29ರಂದು ₹ 4.20 ಲಕ್ಷ ನೀಡಿದ್ದರು.'

'ಹಣ ಪಡೆದಿದ್ದ ಆರೋಪಿ, ನಿವೇಶನ ಕೊಡಿಸಿರಲಿಲ್ಲ. ಅನುಮಾನಗೊಂಡ ದೂರುದಾರ, ಸೊಸೈಟಿ ಬಗ್ಗೆ ಪರಿಶೀಲಿಸಿದ್ದರು. ಅದು ನಕಲಿ ಸೊಸೈಟಿ ಎಂಬುದು ಗೊತ್ತಾಗಿತ್ತು. ಹಣ ವಾಪಸು ನೀಡಲು ಕೋರಿದರೆ ಜೀವ ಬೆದರಿಕೆಯೊಡ್ಡಿದ್ದಾರೆ ದೂರುದಾರರು ತಿಳಿಸಿದ್ದಾರೆ' ಎಂದು ತಿಳಿಸಿವೆ.

ಮಲ್ಲಸಂದ್ರ: ಶಾಸಕ ರಾಮಲಿಂಗಾ ರೆಡ್ಡಿ ಆರೋಪ

'ಉದ್ಯೋಗ ಕಲ್ಪಿಸಲು ಕೇಂದ್ರ ವಿಫಲ'

ಪ್ರಜಾವಾಣಿ ವಾರ್ತೆ



ಮಲ್ಲಸಂದ್ರದಲ್ಲಿ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗೀತಾ ಶಿವರಾಮ್, ಶಾಸಕ ರಾಮಲಿಂಗಾ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ಕೆ.ಸಿ. ಅಶೋಕ್, ಕೆ. ನಾಗಭೂಷಣ್, ಉದಯ್ ಕುಮಾರ್ ಇದ್ದರು.

ಪೀಣ್ಯದಾಸರಹಳ್ಳಿ: 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ವಿದ್ಯಾವಂತರಿಗೆ ಉದ್ಯೋಗ ನೀಡುವಲ್ಲಿ ವಿಫಲವಾಗಿದ್ದು, ಯುವಜನರಿಗೆ ವಂಚಿಸಿದೆ' ಎಂದು ಶಾಸಕ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗೀತಾ ಶಿವರಾಮ್ ಅವರ ನೇತೃತ್ವದಲ್ಲಿ ಮಲ್ಲಸಂದ್ರದಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ರತಿಭಾವಂತ ಯುವಜನರಿಗೆ ನಿರಾಸೆಯಾಗಿದೆ. ಮೋದಿ ನೇತೃತ್ವದ ಸರ್ಕಾರ ವಿದ್ಯಾವಂತರನ್ನು ಬೀದಿಗೆ ತಂದಿದೆ' ಎಂದು ದೂರಿದರು.

'ಉದ್ಯೋಗ ಮೇಳದಲ್ಲಿ 70ಕ್ಕೂ ಹೆಚ್ಚು ವಿವಿಧ ಕಂಪನಿಗಳು ಭಾಗಿಯಾಗಿ, ಸಂದರ್ಶನ ನಡೆಸಿದವು. ಅನೇಕ ವಿದ್ಯಾವಂತರು ಉದ್ಯೋಗ ಪಡೆದುಕೊಂಡರು' ಎಂದು ಆಯೋಜಕಿ ಗೀತಾ ತಿಳಿಸಿದರು.

ಮುಖಂಡರಾದ ನಾಗಲಕ್ಷ್ಮಿ ಚೌಧರಿ, ಮಂಜುನಾಥ್, ಮಂಜುನಾಥ್ ನಾಗಯ್ಯ, ಜಗದೀಶ್, ಸಿದ್ದರಾಜು ಇದ್ದರು.

'ನಾನು ಮಾಸ್ಟರ್ ಹಿರಣ್ಣಯ್ಯ ನನ್ನ ಕಥೆ ಹೇಳ್ತೀನಿ' ಕೃತಿ ಬಿಡುಗಡೆಯಲ್ಲಿ ಕವಿ ಎಚ್ಚೆಸ್ವಿ ಪ್ರಶ್ನೆ

'ಹಿರಣ್ಣಯ್ಯರ ನಾಟಕ ಪ್ರದರ್ಶನ ಈಗ ಸಾಧ್ಯವೆ?'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ 'ನಾನು ಮಾಸ್ಟರ್ ಹಿರಣ್ಣಯ್ಯ ನನ್ನ ಕಥೆ ಹೇಳ್ತೀನಿ' ಕೃತಿಯನ್ನು ಎಚ್‌ಎಸ್ ವೆಂಕಟೇಶಮೂರ್ತಿ ಲೋಕಾರ್ಪಣೆ ಮಾಡಿದರು. ಹಿರಣ್ಣಯ್ಯ ಅವರ ಪುತ್ರ ಬಾಬು ಹಿರಣ್ಣಯ್ಯ, ಪತ್ನಿ ಶಾಂತಾ, ಎಂ.ಎಸ್ ನರಸಿಂಹಮೂರ್ತಿ ಮತ್ತು ವೈ.ವಿ. ಗುಂಡೂರಾವ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕನ್ನಡ ರಂಗಭೂಮಿಯಲ್ಲಿ ಹೊಸ ಸಾಧ್ಯತೆ ತೋರಿಸಿಕೊಟ್ಟವರು ಮಾಸ್ಟರ್ ಹಿರಣ್ಣಯ್ಯ. ನಾಟಕಗಳಲ್ಲಿ ರಾಜಕಾರಣಿಗಳನ್ನು ಎದುರಿಗೆ ಕೂರಿಸಿಕೊಂಡು ಬೈಯ್ಯುತ್ತಿದ್ದರು. ಇವತ್ತಿನ ವಾತಾವರಣ ದಲ್ಲಿ ಅಂತಹ ನಾಟಕಗಳು ನಡೆಯುತ್ತವೆಯೇ' ಎಂದು ಕವಿ ಎಚ್.ಎಸ್. ವೆಂಕಟೇಶ ಮೂರ್ತಿ ಪ್ರಶ್ನಿಸಿದರು.

ವಿಕ್ರಂ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಾಬು ಹಿರಣ್ಣಯ್ಯ ನಿರೂಪಣೆಯ 'ನಾನು ಮಾಸ್ಟರ್ ಹಿರಣ್ಣಯ್ಯ ನನ್ನ ಕಥೆ ಹೇಳ್ತೀನಿ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಹಿರಣ್ಣಯ್ಯ ಅವರು ಭ್ರಷ್ಟಾಚಾರ, ದುಷ್ಟತನವನ್ನು ನಾಟಕಗಳ ಮೂಲಕ ರಾಜಾರೋಷವಾಗಿ ಟೀಕಿಸುತ್ತಿದ್ದರು. ಕವಿಗಳಲ್ಲಿ ದ.ರಾ.ಬೇಂದ್ರೆ ಹೇಗೋ, ರಂಗಭೂಮಿಯಲ್ಲಿ ಹಿರಣ್ಣಯ್ಯ ಹಾಗೇ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತೀಯ ಆಯುರ್ವೇದ ಪ್ರತಿಷ್ಠಾನದ ಮುಖ್ಯಸ್ಥ ಡಾ.ಸಿ.ಎ.ಕಿಶೋರ್, '20 ವರ್ಷಗಳ ಹಿಂದೆ ಹಿರಣ್ಣಯ್ಯ ಅವರಿಗೆ ಆಯುರ್ವೇದ ಚಿಕಿತ್ಸೆ ನೀಡಿದೆ. ಗುಣಮುಖರಾದ ಬಳಿಕ ನನ್ನನ್ನು ಮನೆಗೆ ಕರೆದ ಅವರು, ಪತ್ನಿಗೆ ಹಣ ತಂದು ಕೊಡಲು ಸೂಚಿಸಿದರು. ನಾನು ಹಣ ನಿರಾಕರಿಸಿ, ನಿಮ್ಮ ಪಾದ ಸ್ಪರ್ಶಿಸುವ ಅವಕಾಶ ನೀಡಿ ಎಂದು ಕೋರಿದೆ. ಅದಕ್ಕೆ ಅವರು 'ನಾನೇನು ಹರೆಯದ ಹುಡುಗಿಯೇ, ದೇಹವನ್ನೇ ಅಪ್ಪಿಕೋ' ಎಂದು ಹಾಸ್ಯ ಚಟಾಕಿ ಹಾರಿಸಿದ್ದರು. ಅವರಲ್ಲಿ ಹಾಸ್ಯ ಪ್ರಜ್ಞೆ ಸದಾ ಜಾಗೃತವಾಗಿರುತ್ತಿತ್ತು' ಎಂದು ತಿಳಿಸಿದರು.

ಬರಹಗಾರ ಎಂ.ಎಸ್. ನರಸಿಂಹ ಮೂರ್ತಿ ಅವರು ಮಾಸ್ಟರ್ ಹಿರಣ್ಣಯ್ಯ ಅವರ ಒಡನಾಟ ಸ್ಮರಿಸಿಕೊಂಡರು.

ರಾಷ್ಟ್ರೀಯ ನಾಯಕರು ರಾಜ್ಯಕ್ಕೆ ಬರುತ್ತಿರುವುದು ಇದೇ ಕಾರಣಕ್ಕೆ ಎಂದ ಡಿಕೆಶಿ

‘ಬಿಜೆಪಿಗೆ ಸೋಲಿನ ಭೀತಿ’

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ಬಿಜೆಪಿಯು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸೋಲಿನ ಭೀತಿ ಎದುರಿಸುತ್ತಿದೆ. ಅದಕ್ಕಾಗಿಯೇ ಬಿಜೆಪಿಯ ರಾಷ್ಟ್ರೀಯ ನಾಯಕರು ವಿಧಾನಸಭಾ ಕ್ಷೇತ್ರಗಳ ಹಂತಕ್ಕೆ ಬಂದು ಪ್ರಚಾರ ನಡೆಸುತ್ತಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಚಿಕ್ಕಮಗಳೂರು ನಗರಸಭೆಯ ಮಾಜಿ ಅಧ್ಯಕ್ಷ ಎಚ್.ಡಿ.ತಮ್ಮಯ್ಯ ಮತ್ತು ಅವರ ಬೆಂಬಲಿಗರನ್ನು ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ನೋಡಿರುವ ಜನರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಮತಗಟ್ಟೆಗಳ ಹಂತದಿಂದಲೂ ಬಿಜೆಪಿ ತೊರೆದು ಕಾಂಗ್ರೆಸ್ ಸೇರುವವರ ಸಂಖ್ಯೆ ಹೆಚ್ಚುತ್ತಿದೆ. ಇದು ಜನರು ಬದಲಾವಣೆ ಬಯಸಿರುವುದರ ಸಂಕೇತ. ಮುಂದಿನ ದಿನಗಳಲ್ಲಿ ಮತಷ್ಟು ಜನರು ಕಾಂಗ್ರೆಸ್ ಸೇರಲಿದ್ದಾರೆ’ ಎಂದರು.

‘ಸೋಮವಾರ ಕೂಡ ಇತರ ಪಕ್ಷಗಳ ಕೆಲವು ಮುಖಂಡರು ನಮ್ಮ ಪಕ್ಷ ಸೇರಲಿದ್ದಾರೆ. ಶಾಸಕಾಂಗ ಪಕ್ಷದ ನಾಯಕರು ಮತ್ತು ಪಕ್ಷದ ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ವಿವಿಧ ಪಕ್ಷಗಳ ಹಲವು ಮಂದಿ ಹಾಲಿ ಶಾಸಕರು ಕಾಂಗ್ರೆಸ್ ಸೇರಲು ಬಯಸಿದ್ದಾರೆ. ಆದರೆ, ಎಲ್ಲರಿಗೂ ಸ್ಥಾನಮಾನ ಕಲ್ಪಿಸುವುದು ಕಷ್ಟ. ಕೆಲವರಿಗೆ ನೀಡಬಹುದು. ಆದ್ದರಿಂದ, ಪಕ್ಷ ಸೇರಲು ಬಯಸಿದವರ ಹೆಸರನ್ನು ಈಗ ಬಹಿರಂಗಪಡಿಸುವುದಿಲ್ಲ. ಮುಂದಿನ ದಿನಗಳಲ್ಲಿ ಎಲ್ಲವೂ ಗೊತ್ತಾಗಲಿದೆ’ ಎಂದು ಶಿವಕುಮಾರ್ ಹೇಳಿದರು.

‘ಚಿಕ್ಕಮಗಳೂರಿನಲ್ಲಿ ದತ್ತಪೀಠದ ವಿಚಾರ ಮುಂದಿಟ್ಟುಕೊಂಡು ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ. ಈಗ ಜನರಿಗೆ ಬದುಕು ಕಟ್ಟಿಕೊಳ್ಳುವುದು ಮುಖ್ಯವಾಗಿದೆ. ಬಿಜೆಪಿ ಕೇವಲ ಭಾವನೆ ಆಧಾರದ ಮೇಲೆ ರಾಜಕೀಯ ಮಾಡುತ್ತಿದೆ. ನಾವು ಬದುಕಿನ ವಿಚಾರ ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತೇವೆ. ಜನರು ಕೂಡ ಅವರ ಹೊಟ್ಟೆಪಾಡಿನ ಬಗ್ಗೆಯೇ ಪ್ರಶ್ನಿಸುತ್ತಿದ್ದಾರೆ’ ಎಂದರು.

ಶಿವಮೊಗ್ಗದಲ್ಲಿ ಭಾವನಾತ್ಮಕ ವಿಚಾರದಿಂದ ಅಶಾಂತಿ ಹೆಚ್ಚಾಗಿದೆ. ಪರಿಣಾಮವಾಗಿ ಅಲ್ಲಿ ಹೂಡಿಕೆ ಮಾಡಲು ಯಾರೊಬ್ಬರೂ ಮುಂದೆ ಬರುತ್ತಿಲ್ಲ. ಬಿಜೆಪಿ ನಾಯಕರೂ ಆಗಿರುವ ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಅವರೇ ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ಪೋಸ್ಟ್ ಮಾಡಿದ್ದಾರೆ. ಜನರು ಭಾವನೆಗಳಿಗಿಂತ ಬದುಕಿನ ಬಗ್ಗೆ ಹೆಚ್ಚು ಯೋಚಿಸುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ ಎಂದರು.

ಜನರಿಂದ ಕಾಂಗ್ರೆಸ್‌ಗೆ ಶಾಶ್ವತ ಹೂ: ಸಿ.ಎಂ

ಹುಬ್ಬಳ್ಳಿ: ‘ಬಿಜೆಪಿ ಯೋಜನೆಗಳನ್ನು ಕಾಂಗ್ರೆಸ್ ನಕಲು ಮಾಡುತ್ತಿದೆ. ನಾನು ‘ಗೃಹಿಣಿ ಶಕ್ತಿ’ ಯೋಜನೆ ಜಾರಿಗೆ ತರುವ ಬಗ್ಗೆ ಪ್ರಸ್ತಾಪಿಸಿದ್ದೆ, ಅದನ್ನೇ ಇಟ್ಟುಕೊಂಡು ಅವರು ‘ಗೃಹಲಕ್ಷ್ಮಿ’ ಯೋಜನೆ ಘೋಷಣೆ ಮಾಡಿದ್ದಾರೆ. ಕಾಂಗ್ರೆಸ್ ನಾಯಕರ ಕಿವಿಯ ಮೇಲೆ ಜನ ಶಾಶ್ವತವಾಗಿ ಹೂ ಇಡಲಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ‘ಭ್ರಷ್ಟ ಬಿಜೆಪಿಗೆ ಪ್ರತ್ಯೇಕ ನರಕವನ್ನೇ ಸೃಷ್ಟಿಸಬೇಕು’ ಎಂಬ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಹೇಳಿಕೆ ಕುರಿತ ಪ್ರತಿಕ್ರಿಯಿಸಿದ ಅವರು, ‘ಸುರ್ಜೇವಾಲಾಗೆ ಕರ್ನಾಟಕದ ಬಗ್ಗೆ ಏನು ಗೊತ್ತು? ಅವರು ಮೊದಲು ಕಾಂಗ್ರೆಸ್ ನಾಯಕರ ಜಗಳ ಬಗೆಹರಿಸಲಿ. ಕಾಂಗ್ರೆಸ್ ಅಸುರರ ದೊಡ್ಡ ಪಟ್ಟಿಯೇ ಇದೆ’ ಎಂದರು.

ಸಿದ್ಧರಾಮಯ್ಯ ಮಾತು ತಪ್ಪಿದ ಮಗ: ನಂತರ ಹಾವೇರಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಸಿದ್ಧರಾಮಯ್ಯ ಅವರು ಮಾತು ತಪ್ಪಿದ ಮಗ. ತಮ್ಮ ಬಜೆಟ್ ನಲ್ಲಿ 10 ಕೆಜಿ ಅಕ್ಕಿ ಕೊಡುತ್ತೇವೆ ಎಂದಿದ್ದರು, ಅದನ್ನು ನಾಲ್ಕು ಕೆಜಿಗೆ ಇಳಿಸಿದರು. ಚುನಾವಣೆ ಬಂದಾಗ ಏಳು ಕೆಜಿ ಮಾಡಿದರು. ಹೀಗೆ ಜನರನ್ನು ಯಾಮಾರಿಸುವ ಕೆಲಸ ಮಾಡಿದ್ದಾರೆ. ಹೀಗಾಗಿ ಶಾಶ್ವತವಾಗಿ ಅವರಿಗೇ ಹೂ ಇಟ್ಟುಕೊಳ್ಳುವ ಪರಿಸ್ಥಿತಿ ಬರಲಿದೆ’ ಎಂದು ಟೀಕಿಸಿದರು. ‘ಮಹದಾಯಿ ಯೋಜನೆ ಕಾಮಗಾರಿ ಶೀಘ್ರ ಪ್ರಾರಂಭಿಸಲಾಗುವುದು. ಈ ಬಗ್ಗೆ ಎಲ್ಲ ತಯಾರಿ ಅಂತಿಮ ಹಂತದಲ್ಲಿದೆ’ ಎಂದು ಮಾಹಿತಿ ನೀಡಿದರು. ರಾಮ ನಗರದಲ್ಲಿ ರಾಮ ಮಂದಿರವನ್ನು ಕಾಂಗ್ರೆಸ್ ,ಬಿಜೆಪಿ, ಜೆಡಿಎಸ್ ಅಂತ ಮಾಡಿಲ್ಲ, ಅಲ್ಲಿ ರಾಮ ಬೆಟ್ಟ ಅಂತ ಐತಿಹಾಸಿಕ ಹಿನ್ನೆಲೆ ಹೊಂದಿರುವ ಬೆಟ್ಟ ಇದೆ. ಅಲ್ಲದೇ ಆ ಭಾಗದ ಜನರ ಇಚ್ಛೆ ಇತ್ತು, ಅದಕ್ಕೆ ಸ್ಪಂದಿಸಿದ್ದೇನೆ ಎಂದರು.

ಲಕ್ಷ ಕಾರ್ಯಕರ್ತರ ಜತೆ ಇಂದು ಎಚ್‌ಡಿಕೆ ಫೋನ್-ಇನ್

ಬೆಂಗಳೂರು: ವಿಧಾನಸಭಾ ಚುನಾವಣಾ ತಯಾರಿಯನ್ನು ಚುರುಕುಗೊಳಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಸೋಮವಾರ ಏಕಕಾಲಕ್ಕೆ ಪಕ್ಷದ ಒಂದು ಲಕ್ಷ ಕಾರ್ಯಕರ್ತರ ಜತೆ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಮಾತನಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ವಿವಿಧ ಪಕ್ಷಗಳ ಮುಖಂಡರನ್ನು ಜೆಡಿಎಸ್ ಪಕ್ಷಕ್ಕೆ ಸೇರಿಸಿಕೊಳ್ಳಲು ಪಕ್ಷದ ಪ್ರಧಾನ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಂಚರತ್ನ ರಥಯಾತ್ರೆ ನಡೆಸುತ್ತಿರುವ ಕಾರಣದಿಂದ ಪಕ್ಷದ ಕಾರ್ಯಕರ್ತರನ್ನು ಸಂಪರ್ಕಿಸಲು ಸಮಯಾವಕಾಶ ಸಿಕ್ಕಿರಲಿಲ್ಲ. ಆದ್ದರಿಂದ, ನೇರ ಫೋನ್‌ಇನ್ ಮೂಲಕ ಮತಗಟ್ಟೆ ಹಂತದ ಕಾರ್ಯಕರ್ತರ ಜತೆ ಮಾತನಾಡಲು ನಿರ್ಧರಿಸಿದ್ದೇನೆ ಎಂದರು.

‘ಚುನಾವಣಾ ತಯಾರಿಯಲ್ಲಿ ತೊಡಗಿರುವ ಜೆಡಿಎಸ್ ಕಾರ್ಯಕರ್ತರಿಗೆ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಕಿರುಕುಳ ನೀಡುತ್ತಿದ್ದಾರೆ. ಆಡಳಿತದಲ್ಲಿರುವ ಬಿಜೆಪಿಯವರು ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿ ಬೆದರಿಕೆ ಹಾಕುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕಾರ್ಯಕರ್ತರ ಜತೆ ನಿಲ್ಲಬೇಕಾಗಿರುವುದು ನನ್ನ ಕರ್ತವ್ಯ. ದೂರವಾಣಿ ಮೂಲಕ ಕಾರ್ಯಕರ್ತರೊಂದಿಗೆ ಮಾತನಾಡಿ ಧೈರ್ಯ ತುಂಬುವ ಹಾಗೂ ಪಕ್ಷ ಸಂಘಟನೆಗೆ ಉತ್ತೇಜನ ನೀಡುವ ಕೆಲಸ ಮಾಡುತ್ತೇನೆ’ ಎಂದು ಹೇಳಿದರು.

ಹಾಲಹರವಿ, ಫೋಟ್ನೇಕರ್ ಜೆಡಿಎಸ್‌ಗೆ: ಹುಬ್ಬಳ್ಳಿ- ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ ಬಿಜೆಪಿ ತೊರೆದು ಮತ್ತು ವಿಧಾನ ಪರಿಷತ್‌ನ ಮಾಜಿ ಸದಸ್ಯ ಶ್ರೀಕಾಂತ್ ಎಲ್. ಫೋಟ್ನೇಕರ್ ಹಾಗೂ ಕೋಲಾರ- ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ನಿರ್ದೇಶಕ ವಡಗೂರು ಹರೀಶ್ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದರು. ಮೂವರನ್ನೂ ಎಚ್.ಡಿ. ಕುಮಾರಸ್ವಾಮಿ ಪಕ್ಷಕ್ಕೆ ಬರಮಾಡಿಕೊಂಡರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ, ಮುಖಂಡರಾದ ಇಂಚರ ನಾರಾಯಣಸ್ವಾಮಿ, ಚೌಡರೆಡ್ಡಿ ತೂಪಲ್ಲಿ, ಕೋಲಾರ ಕ್ಷೇತ್ರದ ಅಭ್ಯರ್ಥಿ ಸಿ.ಎಂ.ಆರ್.ಶ್ರೀನಾಥ್, ಮುಳಬಾಗಿಲು ಕ್ಷೇತ್ರದ ಅಭ್ಯರ್ಥಿ ಸಮೃದ್ಧಿ ಮಂಜುನಾಥ್, ಬಂಗಾರಪೇಟೆ ಕ್ಷೇತ್ರದ ಅಭ್ಯರ್ಥಿ ಮಲ್ಲೇಶ್ ಬಾಬು, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಪ್ರಕಾಶ್ ಹಾಜರಿದ್ದರು.

ಕಿವಿ ಮೇಲೆ ಹೂ ಇಟ್ಟು ಬದುಕಿದ್ದು ಕಾಂಗ್ರೆಸ್: ಕಟೀಲ್

ಕೊಡಗು: ‘ಕಾಂಗ್ರೆಸ್ ಕಿವಿ ಮೇಲೆ ಹೂ ಇಟ್ಟುಕೊಂಡಿದೆ. ಅದು ಹೂ ಇಟ್ಟುಕೊಂಡೇ ಬದುಕಿದ್ದು, ಕೊನೆಗೆ ಹೂವೇ ಅದಕ್ಕೆ ಗತಿಯಾಗುತ್ತದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಟೀಕಿಸಿದರು. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಸ್ವಾತಂತ್ರ್ಯ ಬಂದಾಗಿನಿಂದ ಜನರ ಕಿವಿಯ ಮೇಲೆ ಹೂವಿಟ್ಟು ಬದುಕಿದವರು ಕಾಂಗ್ರೆಸ್‌ನವರು. ಅವರು ಅಧಿಕಾರದಲ್ಲಿದ್ದಾಗ ಸಾಲಗಾರ, ಮೋಸಗಾರ ರಾಷ್ಟ್ರ ಎಂಬ ಕುಖ್ಯಾತಿಗೆ ನಮ್ಮ ದೇಶ ಒಳಗಾಗಿತ್ತು. ಆದರೆ, ಅದನ್ನು ನಮ್ಮ ಸರ್ಕಾರ ತೆಗೆದು ಹಾಕಿತು’ ಎಂದರು.

ಭಟ್ಕಳ ಮುಸ್ಲಿಮರು ಮೂಲತಃ ಜೈನರು: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಭಟ್ಕಳ: ‘ಮತದ ಅಮಲು ಏರಿಸಿಕೊಂಡವರಿಗೆ ತಾವು ಯಾರು, ಎಲ್ಲಿದ್ದೇವೆ ಎಂದು ತಿಳಿಯುವುದಿಲ್ಲ. ಭಟ್ಕಳದ ಮುಸ್ಲಿಂ ಸಮುದಾಯದವರು ಹಿಂದೂ, ಜೈನ್, ಸನಾತನ ಧರ್ಮದ ಮೂಲದವರು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು. ‘ಭಟ್ಕಳದ ನಾಗ ಬನಕ್ಕೆ 800 ವರ್ಷಗಳ ಇತಿಹಾಸವಿದೆ. ಅಬ್ಬಬ್ಬಾ ಎಂದರೆ 300 ವರ್ಷ ಇತಿಹಾಸವುಳ್ಳ ಭಟ್ಕಳ ಮುಸ್ಲಿಮರು ನಾಗಬನ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ವಿಪರ್ಯಾಸ’ ಎಂದರು.

> **ಮತಾಂತರ ಉದ್ದೇಶಕ್ಕಾಗಿ ಹಿಂದೂ ಯುವತಿಯರನ್ನು ವಂಚಿಸುವುದು ಲವ್ ಜಿಹಾದ್. ಅಗತ್ಯಬಿದ್ದಲ್ಲಿ ಇದನ್ನು ಗೃಹ ಸಚಿವರಿಗೆ ಮನವರಿಕೆ ಮಾಡಿಕೊಡುತ್ತೇವೆ**
> **ಸಿ.ಟಿ.ರವಿ**
> ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

‘ಕಾಂಗ್ರೆಸ್ ನಾಯಕರು ಕಿವಿ ಮೇಲೆ ಚೆಂಡು ಹೂವು ಇಟ್ಟುಕೊಂಡ ಚಿತ್ರಗಳನ್ನು ವಿಧಾನಸೌಧದ ಸುತ್ತಮುತ್ತ ಅಂಟಿಸಲಿ. ಇದು ಜನರಿಗೆ ಒಳ್ಳೆಯ ಮನರಂಜನೆ ನೀಡಲಿದೆ’ ಎಂದು ಹೇಳಿದರು.

‘ಒಳ ಮೀಸಲು ಜಾರಿಗೆ ಸಹಮತ’

ಮಡಿಕೇರಿ: ‘ಕೊಡವ ಭಾಷೆ ಮಾತನಾಡುವ ಎಲ್ಲ ಸಮುದಾಯಗಳ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಲು ₹ 25 ಲಕ್ಷ ಬಿಡುಗಡೆ ಮಾಡಲಾಗುವುದು ಹಾಗೂ ಒಳ ಮೀಸಲು ಜಾರಿಗೆ ಸರ್ಕಾರದ ಸಹಮತವಿದೆ’ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಕೊಡವ 18 ಭಾಷಿಗ ಜನಾಂಗದ ಕೊಡವ ಭಾಷಿಗ ಸಮುದಾಯಗಳ ಕೂಟವು ವಿರಾಜಪೇಟೆ ತಾಲ್ಲೂಕಿನ ಬಿಟ್ಟಂಗಾಲ ಗ್ರಾಮದ ಕೊಡಗು ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ‘ಒತ್ತೋರ್ಮೆ ಕೂಟ’ದಲ್ಲಿ ಮಾತನಾಡಿದರು.

‘ಕುಲಶಾಸ್ತ್ರೀಯ ಅಧ್ಯಯನದ ಹೊಣೆಯನ್ನು ಮೈಸೂರು ಬುಡಕಟ್ಟು ಸಂಶೋಧನಾ ಸಂಸ್ಥೆ ಅಥವಾ ಹಂಪಿ ವಿಶ್ವವಿದ್ಯಾಲಯಕ್ಕೆ ವಹಿಸಲಾಗುವುದು. ತೀರಾ ಕಷ್ಟದಲ್ಲಿ ಇರುವ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಲಾಗುವುದು’ ಎಂದು ಭರವಸೆ ನೀಡಿದರು.

ಕ್ರಿಕೆಟ್ ಗಲಾಟೆ: ಬಂಧಿಸಲು ಹೋದ ಪೊಲೀಸರ ಮೇಲೆ ದಾಳಿ

ಆರೋಪಿಗಳ ಕಾಲಿಗೆ ಗುಂಡು, ಬಂಧನ

ಪ್ರಜಾವಾಣಿ ವಾರ್ತೆ



ವಿನಯ್



ತ್ರಿಮೂರ್ತಿ

ದೊಡ್ಡಬಳ್ಳಾಪುರ: ದೊಡ್ಡಬೆಳವಂಗಲ ಕ್ರಿಕೆಟ್ ಟೂರ್ನಿ ವೇಳೆ ನಡೆದ ಗಲಾಟೆಯಲ್ಲಿ ಚಾಕು ಇರಿದು ಯುವಕರಿಬ್ಬರನ್ನು ಹತ್ಯೆ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಭಾನುವಾರ ಬೆಳಗಿನ ಜಾವ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

ಪ್ರಮುಖ ಆರೋಪಿ ಹುಲಿಕುಂಟೆ ಗ್ರಾಮದ ವಿನಯ್ ಮತ್ತು ತ್ರಿಮೂರ್ತಿ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ತಲೆ ಮರೆಸಿಕೊಂಡಿರುವ ಇನ್ನೂ ಮೂವರು ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ತಲೆ ಮರೆಸಿಕೊಂಡಿರುವ ಆರೋಪಿಗಳಲ್ಲಿ ವಿನಯ್ ಸಹೋದರ ಅನಿಲ್ ಕೂಡ ಇದ್ದಾನೆ. ಈ ಇಬ್ಬರೂ ಹುಲಿಕುಂಟೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾಗಿದ್ದ ಕಾಂಗ್ರೆಸ್ ಮುಖಂಡರೊಬ್ಬರ ಮಕ್ಕಳು ಎಂದು ಪೊಲೀಸರು ತಿಳಿಸಿದ್ದಾರೆ. ನಗರದ ಡಿ.ಕ್ರಾಸ್ ಸಮೀಪದ ರೈಲ್ವೆ ಗೇಟ್ ಬಳಿ ಆರೋಪಿಗಳು ಅಡಗಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರು ಬೆಳಗಿನ ಜಾವ ಅಲ್ಲಿಗೆ ತೆರಳಿದ್ದರು. ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸಿದಾಗ ಅವರ ಕಾಲಿಗೆ ಗುಂಡು ಹೊಡೆದು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಗೊಂಡಿರುವ ಪೊಲೀಸ್ ಸಿಬ್ಬಂದಿ ಕರಾರ್ ಹುಸೇನ್, ಸುನೀಲ್ ಬಾಸಗಿ ಮತ್ತು ಆರೋಪಿಗಳನ್ನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಗಿದೆ. ಆರೋಪಿಗಳೆಲ್ಲರೂ ಪುಡಿ ರೌಡಿಗಳಾಗಿದ್ದು ಹುಲಿಕುಂಟೆ ಗ್ರಾಮದ ಸುತ್ತಮುತ್ತ ಅಪರಾಧ ಚಟುವಟಿಕೆಗಳಲ್ಲಿ ತೊಡಗಿದ್ದರು. ತಲೆಮರೆಸಿಕೊಂಡಿರುವ ಅನಿಲ್, ಕೋರಿ, ದೀಪು ಎಂಬುವರನ್ನು ಶೀಘ್ರ ಬಂಧಿಸುವುದಾಗಿ ಪೊಲೀಸರು ಹೇಳಿದ್ದಾರೆ.

ದೊಡ್ಡಬಳ್ಳಾಪುರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಧೀರಜ್ ಮುನಿರಾಜು ಎಂಬುವರು ದೊಡ್ಡಬೆಳವಂಗಲದಲ್ಲಿ ಶುಕ್ರವಾರ ಕ್ರಿಕೆಟ್ ಟೂರ್ನಿ ಆಯೋಜಿಸಿದ್ದರು. ಮೈದಾನದಲ್ಲಿ ಕಾರು ಪಾರ್ಕಿಂಗ್ ವಿಚಾರವಾಗಿ ಗಲಾಟೆ ನಡೆದಿತ್ತು. ಆಗ ಒಂದು ಗುಂಪು ಭರತ್ ಕುಮಾರ್ ಮತ್ತು ಪ್ರತೀಕ್ ಎಂಬ ಯುವಕರನ್ನು ಚಾಕುವಿನಿಂದ ಬರ್ಬರವಾಗಿ ಇರಿದು ಹತ್ಯೆ ಮಾಡಿ ಪರಾರಿಯಾಗಿತ್ತು.

ರಾಜಕಾರಣಿಗಳು ಆಯೋಜಿಸುವ ಪಂದ್ಯಾವಳಿಗೆ ನಿರ್ಬಂಧ: ಎಸ್‌.ಪಿ

ದೊಡ್ಡಬೆಳವಂಗಲದಲ್ಲಿ ಕ್ರಿಕೆಟ್ ಪಂದ್ಯಾವಳಿ ವೇಳೆ ನಡೆದ ಗಲಾಟೆಯಲ್ಲಿ ಇಬ್ಬರು ಕೊಲೆಯಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಇಲಾಖೆಯು ರಾಜಕೀಯ ಪ್ರೇರಿತ ಪಂದ್ಯಾವಳಿ, ಕ್ರೀಡಾಕೂಟ ಆಯೋಜನೆಗೆ ನಿರ್ಬಂಧ ವಿಧಿಸಿದೆ.

‘ಇಬ್ಬರ ಕೊಲೆ ಹಿನ್ನೆಲೆಯಲ್ಲಿ ಮುಂಬರುವ 2023ರ ವಿಧಾನಸಭಾ ಚುನಾವಣೆ ಮುಗಿಯುವವರೆಗೂ ರಾಜಕೀಯ ಪ್ರೇರಿತ ಕ್ರಿಕೆಟ್ ಪಂದ್ಯಾವಳಿಗಳನ್ನು ನಿರ್ಬಂಧಿಸಲಾಗಿದೆ’ ಎಂದು ಬೆಂಗಳೂರು ಗ್ರಾಮಾಂತರ ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿ ಭಾನುವಾರ ಆದೇಶ ಹೊರಡಿಸಿದ್ದಾರೆ.

‘ರಾಜಕೀಯ ಪ್ರೇರಿತ ಕ್ರಿಕೆಟ್ ಪಂದ್ಯಾವಳಿಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಯಾರಾದರೂ ಪಂದ್ಯಾವಳಿ ಆಯೋಜಿಸಿದರೆ, ಅಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದು ಡಿವೈಎಸ್‌ಪಿ, ಸಿಪಿಐ, ಪಿಎಸ್‌ಐಗಳಿಗೆ ಸೂಚನೆ ನೀಡಿದ್ದಾರೆ.

ಚುನಾವಣೆ ಮುಗಿಯುವವರೆಗೂ ಸರ್ಕಾರ ನಡೆಸುವ ಕ್ರೀಡೆಗಳನ್ನು ಹೊರತು ಪಡಿಸಿ ಯಾವುದೇ ಖಾಸಗಿ ವ್ಯಕ್ತಿ, ಸಂಸ್ಥೆಗಳು ಆಯೋಜನೆ ಮಾಡುವ ಯಾವುದೇ ಕ್ರೀಡೆಗಳಿಗೂ ಅವಕಾಶ ನೀಡದಂತೆ ಸೂಚಿಸಿದ್ದಾರೆ.



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಭಾನುವಾರ ಸಿದ್ಧಲಿಂಗೇಶ್ವರ ಸ್ವಾಮಿಯ ಮಹಾರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು

ವಿಜೃಂಭಣೆಯ ಸಿದ್ಧಗಂಗಾ ಜಾತ್ರೆ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಸಿದ್ಧಗಂಗಾ ಮಠದಲ್ಲಿ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಿದ್ಧಲಿಂಗೇಶ್ವರ ಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಸಿದ್ಧಲಿಂಗೇಶ್ವರ ಸ್ವಾಮಿ ಮೂರ್ತಿಯನ್ನು ಅಟವಿ ಸ್ವಾಮೀಜಿ ಗದ್ದುಗೆಗೆ ತಂದು ಪೂಜೆ ಸಲ್ಲಿಸಿದ ನಂತರ ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ರಥದ ಬಳಿಗೆ ತಂದು ಪ್ರತಿಷ್ಠಾಪಿಸಲಾಯಿತು. ಭಕ್ತರು ದವನ, ಹೂವು, ಬಾಳೆ ಹಣ್ಣು ಅರ್ಪಿಸಿದರು.

ನಂದಿಧ್ವಜ, ನಾದಸ್ವರ, ವೀರಗಾಸೆ, ಡೋಲು, ಪಟ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ರಥೋತ್ಸವಕ್ಕೆ ಮೆರುಗು ನೀಡಿದವು. ಶಿವರಾತ್ರಿಯ ಮಾರನೇ ದಿನ ನಡೆದ ರಥೋತ್ಸವಕ್ಕೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಜನರು ಸಾಕ್ಷಿಯಾದರು.

ಮಠದಲ್ಲಿ ಹತ್ತು ದಿನಗಳಿಂದ ನಡೆಯುತ್ತಿರುವ ವಿವಿಧ ಕಾರ್ಯಕ್ರಮ, ಉತ್ಸವಗಳಿಗೆ ತೆರೆ ಬಿದ್ದಿತು. ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಭಕ್ತರು ಶನಿವಾರ ರಾತ್ರಿ ಮಠದಲ್ಲೇ ಉಳಿದು ಶಿವರಾತ್ರಿ ಜಾಗರಣೆಯಲ್ಲಿ ಪಾಲ್ಗೊಂಡಿದ್ದರು.

> ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
> ಪ್ರಜಾವಾಣಿ ನೋಡಿಯೊ

ಭಾನುವಾರ ಬೆಳಿಗ್ಗೆಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ನಿಂತು ಶಿವಕುಮಾರ ಸ್ವಾಮೀಜಿ ಗದ್ದುಗೆಯ ದರ್ಶನ ಪಡೆದರು. ಗದ್ದುಗೆಯನ್ನು ಹಲವು ಬಗೆಯ ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಅನ್ನ ಸಂತರ್ಪಣೆಯಿಂದ ಹಿಡಿದು ಮಠದ ಆವರಣ ಸ್ವಚ್ಛಗೊಳಿಸುವವರೆಗೂ ಎಲ್ಲ ಕಾರ್ಯಗಳಲ್ಲಿ ಮಠದ ಮಕ್ಕಳು ತೊಡಗಿಸಿಕೊಂಡಿದ್ದರು.

ಮೋದಿ ಬೆಳಗಾವಿ ಭೇಟಿ 27ಕ್ಕೆ

ಬೆಳಗಾವಿ: ಪ್ರಧಾನಿ ನರೇಂದ್ರ ಮೋದಿ ಫೆ.27 ರಂದು ಬೆಳಗಾವಿಯ ಹೈಟೆಕ್ ರೈಲ್ವೆ ನಿಲ್ದಾಣ ಉದ್ಘಾಟಿಸಲಿದ್ದಾರೆ.

‘ಅಂದು ಶಿವಮೊಗ್ಗದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮೋದಿ ಭಾಗವಹಿಸುವರು. ಬಳಿಕ, ಇಲ್ಲಿಗೆ ಬಂದು ರೈಲ್ವೆ ನಿಲ್ದಾಣ ಉದ್ಘಾಟಿಸುವರು. ಬೃಹತ್ ಸಾರ್ವಜನಿಕ ಸಮಾವೇಶದಲ್ಲಿ ಪಾಲ್ಗೊಳ್ಳುವರು. ಇದರೊಂದಿಗೆ ರೋಡ್ ಷೋ ನಡೆಸುವ ಬಗ್ಗೆಯೂ ಚರ್ಚಿಸುತ್ತಿದ್ದೇವೆ’ ಎಂದು ಪಕ್ಷದ ರಾಜ್ಯ ವಕ್ತಾರ ಎಂ.ಬಿ.ಝಿರಲಿ ತಿಳಿಸಿದರು.

ಬಿಜೆಪಿಯ ಡೋಂಗಿ ಹಿಂದುತ್ವವಾದಿಗಳ ವಿರುದ್ಧ ಹೋರಾಟ: ಮುತಾಲಿಕ್

ಬಾಗಲಕೋಟೆ: ‘ನನ್ನದು ಬಿಜೆಪಿ ವಿರುದ್ಧದ ಹೋರಾಟವಲ್ಲ. ಬಿಜೆಪಿಯಲ್ಲಿರುವ ಹಿಂದೂ ದ್ರೋಹಿಗಳು, ಅದರ ತತ್ವ, ಸಿದ್ಧಾಂತ ಹಾಳು ಮಾಡಿದವರ ವಿರುದ್ಧ ಹೋರಾಟ’ ಎಂದು ಶ್ರೀರಾಮ ಸೇನೆ ಮುಖಂಡ ಪ್ರಮೋದ ಮುತಾಲಿಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾರ್ಕಳದಲ್ಲಿ ಗೆದ್ದರೂ ಬಿಜೆಪಿಯನ್ನೇ ಬೆಂಬಲಿಸುತ್ತೇನೆ. ಆದರೆ ಡೋಂಗಿ ಹಿಂದುತ್ವವಾದಿಗಳಿಗೆ ಬುದ್ಧಿ ಕಲಿಸಲು ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿದ್ದೇನೆ’ ಎಂದರು.

‘ನನಗೆ ಬಾಗಲಕೋಟೆ ಮತ್ತು ಕಾರ್ಕಳದಿಂದ ಸ್ಪರ್ಧಿಸಲು ಬೇಡಿಕೆ ಇತ್ತು. ಕಾರ್ಕಳವನ್ನೇ ಆಯ್ಕೆ ಮಾಡಿಕೊಂಡಿದ್ದೇನೆ. ಕಾರ್ಕಳದಲ್ಲಿ ನೂರಕ್ಕೆ ನೂರು ನಾನೇ ಗೆದ್ದು ಹಿಂದುತ್ವದ ಪತಾಕೆ ಹಾರಿಸುತ್ತೇನೆ’ ಎಂದು ಹೇಳಿದರು.

ಇಂದು ಉಡುಪಿಗೆ ಜೆ.ಪಿ.ನಡ್ಡಾ ಭೇಟಿ

ಉಡುಪಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಫೆ.20ರಂದು ಉಡುಪಿಗೆ ಭೇಟಿ ನೀಡಲಿದ್ದಾರೆ.

ಬೆಳಿಗ್ಗೆ ಕೃಷ್ಣಮಠಕ್ಕೆ ತೆರಳಿ, ಬಳಿಕ ಎಂಜಿಎಂ ಕಾಲೇಜು ಮೈದಾನದಲ್ಲಿ ನಡೆಯುವ ಜಿಲ್ಲಾ ಮಟ್ಟದ ಬೂತ್ ಸಮಿತಿ ಕಾರ್ಯಕರ್ತರ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನದ ನಂತರ ಬೈಂದೂರು ತಾಲ್ಲೂಕಿನ ಮುಳ್ಳಿಕಟ್ಟೆ ಮೈದಾನದಲ್ಲಿ ಸಾರ್ವಜನಿಕರ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಗಾಳಿಯಲ್ಲಿ ಗುಂಡು: ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲು

ಹುಮನಾಬಾದ್ (ಬೀದರ್ ಜಿಲ್ಲೆ): ಪಟ್ಟಣ ಹೊರವಲಯದ ಬಸವತೀರ್ಥ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಶುಕ್ರವಾರ ಗಾಳಿಯಲ್ಲಿ ಗುಂಡು ಹಾರಿಸಿದ ಆರೋಪದ ಮೇರೆಗೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.


ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ನಾಗೇಶ ಕಲ್ಲೂರ್ ದೂರು ನೀಡಿದ್ದರು. ‘ಶುಕ್ರವಾರ ಕಲ್ಲೂರ್ ಗ್ರಾಮದಿಂದ ಹುಮನಾಬಾದ್‌ಗೆ ಬರುವ ರಸ್ತೆಯಲ್ಲಿ ಸಿದ್ದಲಿಂಗ ಸ್ವಾಮೀಜಿ ಪಿಸ್ತೂಲ್ ಹಿಡಿದುಕೊಂಡು ನಿಂತಿದ್ದರು. ಸಮೀಪ ಹೋಗಿ ನೋಡುತ್ತಿದ್ದಂತೆ ಸ್ವಾಮೀಜಿ ಗಾಳಿಯಲ್ಲಿ ಗುಂಡು ಹಾರಿಸಿದರು. ಕಾನೂನಿನ ಅರಿವು ಇದ್ದರೂ ಸಾರ್ವಜನಿಕರ ಮಧ್ಯೆ ಗುಂಡು ಹಾರಿಸಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.

‘ಭಾನುವಾರ ನಸುಕಿನ ಜಾವ ರಾಯಚೂರಿನ ಚೌಕಿಮಠದಲ್ಲಿ ಸಿದ್ದಲಿಂಗ ಸ್ವಾಮೀಜಿ ಅವರಿಂದ ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ’ ಎಂದು ಪಿಎಸ್‌ಐ ಮಂಜನಗೌಡ ಪಾಟೀಲ ತಿಳಿಸಿದ್ದಾರೆ.

ಮತ್ತೊಂದು ಎಫ್‌ಐಆರ್: ‘ಸಿದ್ದಲಿಂಗ ಸ್ವಾಮೀಜಿ ದಬ್ಬಾಳಿಕೆ ಮಾಡಿ ನನಗೆ ಸೇರಿದ ಹೊಲವನ್ನು ಮಠಕ್ಕೆ ಸೇರಿದೆ ಎಂದು ವಶಪಡಿಸಿಕೊಳ್ಳಲು ಬಂದಿದ್ದರು. ಇದನ್ನು ತಡೆಯಲು ಹೋಗಿದ್ದಕ್ಕೆ ತನ್ನ ಮೇಲೆ ಹಲ್ಲೆ ನಡೆಸಿ ಅಪಮಾನ ಮಾಡಿದ್ದಾರೆ’ ಎಂದು ಆರೋಪಿಸಿ ಕಲ್ಲೂರ ತಾಂಡಾ ನಿವಾಸಿ ಸೋಮಲಾ ಪವಾರ ನೀಡಿದ ದೂರಿನ ಮೇರೆಗೆ ಸ್ವಾಮೀಜಿ ವಿರುದ್ಧ ಚಿಟಗುಪ್ಪ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗರಿಷ್ಠ ತಾಪಮಾನ

ನವದೆಹಲಿ: ‘ದೆಹಲಿಯಲ್ಲಿ ಭಾನುವಾರ ಗರಿಷ್ಠ ತಾಪಮಾನ 31.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಇದು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಫೆಬ್ರುವರಿ ತಿಂಗಳಲ್ಲಿ ದಾಖಲಾದ ಅತಿಹೆಚ್ಚಿನ ತಾಪಮಾನವಾಗಿದೆ’ ಎಂದು ಹವಾಮಾನ ಇಲಾಖೆಯು ತಿಳಿಸಿದೆ.



ಸುಭಾಷಿತ

ಪರಿಸ್ಥಿತಿಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಅವು ಎಂದಿಗೂ ಸರಿ ಹೊಂದುವುದಿಲ್ಲ.

–ಚದುರಂಗ

ಸಿರಿಧಾನ್ಯ ಬೆಳೆಯಲು, ಬಳಸಲು ಪ್ರೋತ್ಸಾಹ ಹೆಚ್ಚಿಸಬೇಕಿದೆ

ಭಾರತದ ಆಗ್ರಹಕ್ಕೆ ಅನುಗುಣವಾಗಿ ವಿಶ್ವಸಂಸ್ಥೆಯು 2023ನೇ ಇಸವಿಯನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಿದ ಬಳಿಕ ಈ ಧಾನ್ಯಗಳ ಕುರಿತು ವಿಶ್ವ ಸಮುದಾಯದಲ್ಲಿ ಆಸಕ್ತಿ ಹೆಚ್ಚಳವಾಗಿದೆ. ಆಹಾರ ಮತ್ತು ಬೆಳೆಯಾಗಿ ಸಿರಿಧಾನ್ಯಗಳ ಮಹತ್ವದ ಕುರಿತು ಪ್ರಚಾರ ಮತ್ತು ಜಾಗೃತಿ ಅಭಿಯಾನವೂ ನಡೆಯುತ್ತಿದೆ. ಕೇಂದ್ರ ಸರ್ಕಾರದ 2023-24ರ ಬಜೆಟ್‌ನಲ್ಲಿಯೂ ಭಾರತವನ್ನು ಸಿರಿಧಾನ್ಯಗಳ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವವನ್ನು ಇರಿಸಲಾಗಿದೆ. ಆದರೆ ಅದಕ್ಕಾಗಿ ಯಾವುದೇ ಯೋಜನೆಯನ್ನು ರೂಪಿಸಲಾಗಿಲ್ಲ. ಪೌಷ್ಟಿಕತೆ, ಪರಿಸರ, ಕಡಿಮೆ ದರ ಮತ್ತು ಇತರ ಕಾರಣಗಳಿಗಾಗಿ ಸಿರಿಧಾನ್ಯಗಳ ಕಡೆಗಿನ ಗಮನ ಇತ್ತೀಚಿನ ಕೆಲವು ವರ್ಷಗಳಲ್ಲಿ ಹೆಚ್ಚಿದೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಸಿರಿಧಾನ್ಯಗಳನ್ನು ಬೆಳೆಯುವ ದೇಶ ಭಾರತ. ಸಿರಿಧಾನ್ಯಗಳ ರಫ್ತಿನಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಸಿರಿಧಾನ್ಯಗಳನ್ನು ಬೆಳೆಯಲು ಮತ್ತು ಸೇವಿಸಲು ಹೆಚ್ಚು ಪ್ರೋತ್ಸಾಹ ನೀಡಲು ಸಾಧ್ಯವಾಗುವಂತಹ ಸಮರ್ಪಕ ನೀತಿಯನ್ನು ಜಾರಿಗೆ ತಂದರೆ ಸಿರಿಧಾನ್ಯಗಳಿಗೆ ಸಂಬಂಧಿಸಿ ಮುಂಚೂಣಿ ಸ್ಥಾನವನ್ನು ಕಾಯ್ದುಕೊಳ್ಳುವುದು ಸಾಧ್ಯ. ಜೋಳ, ರಾಗಿ, ಸಜ್ಜೆ ಸೇರಿದಂತೆ ಹತ್ತಾರು ವಿವಿಧ ಸಿರಿಧಾನ್ಯಗಳನ್ನು ದೇಶದಲ್ಲಿ ಬೆಳೆಯಲಾಗುತ್ತಿದೆ. ರಾಜಸ್ಥಾನ, ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ.



ಸಿರಿಧಾನ್ಯಗಳ ಬಿತ್ತನೆ ಪ್ರದೇಶ ಕಡಿಮೆಯಾಗಲು ಕಾರಣಗಳೇನು ಎಂಬುದನ್ನು ಗುರುತಿಸಬೇಕು ಮತ್ತು ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕು

ಕೆಲವು ದಶಕಗಳಿಂದ ದೇಶದಲ್ಲಿ ಸಿರಿಧಾನ್ಯಗಳ ಉತ್ಪಾದನೆ ಕುಸಿದಿರುವುದು ಕಳವಳಕಾರಿ ಬೆಳವಣಿಗೆ. ಇತ್ತೀಚಿನ ಬೆಳೆ ಋತುವಿನಲ್ಲಿ ಬಿತ್ತನೆ ಮಾಡಲಾದ ಒಟ್ಟು ಪ್ರದೇಶವು ಹೆಚ್ಚಳವಾಗಿದ್ದರೂ ಸಿರಿಧಾನ್ಯಗಳನ್ನು ಬಿತ್ತಲಾದ ಪ್ರದೇಶವು ಕಡಿಮೆಯಾಗಿದೆ. ಬೆಳೆ ಮತ್ತು ಆಹಾರವಾಗಿ ಸಿರಿಧಾನ್ಯಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದ್ದರೂ ಬಿತ್ತನೆ ಪ್ರದೇಶ ಕಡಿಮೆಯಾಗಲು ಕಾರಣಗಳೇನು ಎಂಬುದನ್ನು ಗುರುತಿಸಬೇಕು ಮತ್ತು ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಅಕ್ಕಿ ಮತ್ತು ಗೋಧಿಯಿಂದ ರೊಟ್ಟಿ ಹಾಗೂ ಇತರ ಆಹಾರ ಪದಾರ್ಥಗಳನ್ನು ತಯಾರಿಸುವುದು ಸುಲಭ. ದೇಶದ ಹೆಚ್ಚಿನ ಪ್ರದೇಶಗಳಲ್ಲಿ ಆಹಾರ ಅಂದರೆ, ಅಕ್ಕಿ ಮತ್ತು ಗೋಧಿಯಂತಹ ಧಾನ್ಯಗಳೇ ಆಗಿವೆ. ಪಡಿತರ ವ್ಯವಸ್ಥೆಯ ಮೂಲಕವೂ ಅಕ್ಕಿ ಮತ್ತು ಗೋಧಿಯನ್ನೇ ನೀಡುವುದರಿಂದ ಜನರು ಇವುಗಳ ಬಳಕೆಗೇ ಹೊಂದಿಕೊಂಡಿದ್ದಾರೆ. ಸಿರಿಧಾನ್ಯಗಳನ್ನು ಬಡವರಷ್ಟೇ ಬಳಸುತ್ತಾರೆ ಎಂಬ ಭಾವನೆ ಜನರಲ್ಲಿ ನೆಲೆ ಆಗಿರುವುದರಿಂದ ಆದಾಯ ಹೆಚ್ಚಳವಾಗುತ್ತಲೇ ಜನರು ಈ ಧಾನ್ಯಗಳನ್ನು ಬಿಟ್ಟು ಅಕ್ಕಿ ಅಥವಾ ಗೋಧಿಯತ್ತ ಹೊರಳುತ್ತಾರೆ. ರೈತರು ಕೂಡ ಭತ್ತ ಮತ್ತು ಗೋಧಿಯನ್ನು ಬೆಳೆಯುವುದಕ್ಕೇ ಒಗ್ಗಿಕೊಂಡಿದ್ದಾರೆ. ನೀರಾವರಿ ಸೌಲಭ್ಯ ವಿಸ್ತರಣೆಯಾದಂತೆಯೇ ಹೆಚ್ಚು ನೀರು ಬೇಕಾಗುವ ಗೋಧಿ ಮತ್ತು ಭತ್ತ ಬೆಳೆಯುವುದು ಹೆಚ್ಚಾಗಿದೆ. ರೈತರು ಗೋಧಿ ಮತ್ತು ಭತ್ತದ ಬೆಳೆಗಳತ್ತ ಆಕರ್ಷಿತರಾಗಲು ಇತರ ಕಾರಣಗಳೂ ಇವೆ: ಈ ಬೆಳೆಗಳಿಂದ ಬರುವ ಲಾಭವು ಸಿರಿಧಾನ್ಯಗಳಿಗೆ ಹೋಲಿಸಿದರೆ ಹೆಚ್ಚು; ಸರ್ಕಾರ ಹೆಚ್ಚಿನ ಸಹಾಯಧನ ನೀಡುತ್ತದೆ ಮತ್ತು ಮಾರುಕಟ್ಟೆಯಲ್ಲಿ ಉತ್ತಮ ದರ ದೊರೆಯುವ ಖಾತರಿಯೂ ಇರುತ್ತದೆ.

ಹಲವು ಅನುಕೂಲಗಳಿಂದಾಗಿ ಸಿರಿಧಾನ್ಯಗಳು ವಿಶೇಷ ಅನ್ನಿಸಿಕೊಳ್ಳುತ್ತವೆ. ಇತರ ಧಾನ್ಯಗಳಿಗೆ ಹೋಲಿಸಿದರೆ ಸಿರಿಧಾನ್ಯಗಳಲ್ಲಿ ಪೋಷಕಾಂಶಗಳು, ಖನಿಜಾಂಶಗಳು ಮತ್ತು ನಾರಿನ ಅಂಶಗಳು ಹೆಚ್ಚು. ಹಾಗಾಗಿ ಸಿರಿಧಾನ್ಯಗಳನ್ನು ಸೇವಿಸುವುದರಿಂದ ಹೆಚ್ಚಿನ ಪೌಷ್ಟಿಕಾಂಶ ದೊರೆಯುತ್ತದೆ. ಒಣ ಮತ್ತು ಅರೆಒಣ ಪ್ರದೇಶಗಳಲ್ಲಿಯೂ ಸಿರಿಧಾನ್ಯಗಳನ್ನು ಬೆಳೆಯಬಹುದಾಗಿದೆ. ಗೋಧಿ ಮತ್ತು ಭತ್ತಕ್ಕೆ ಬೇಕಾಗುವುದರ ಅರ್ಧದಷ್ಟು ನೀರಿನಲ್ಲಿ ಈ ಧಾನ್ಯಗಳನ್ನು ಬೆಳೆಯಬಹುದಾಗಿದೆ. ನೀರಿನ ಲಭ್ಯತೆ ಕಡಿಮೆಯಾಗುತ್ತಲೇ ಹೋಗುತ್ತಿರುವ ಈ ಸಂದರ್ಭದಲ್ಲಿ ಇದೊಂದು ಬಹುದೊಡ್ಡ ಅನುಕೂಲ. ಸಿರಿಧಾನ್ಯಗಳು ಹೆಚ್ಚು ದೃಢವಾದ ಬೆಳೆಗಳಾದ್ದರಿಂದ ಹವಾಮಾನದ ವ್ಯತ್ಯಯಗಳು ಮತ್ತು ಕೀಟಗಳ ದಾಳಿಗೆ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ. ಅಲ್ಪಾವಧಿಯಲ್ಲಿಯೇ ಇವುಗಳನ್ನು ಬೆಳೆಯಬಹುದಾಗಿದೆ. ಹವಾಮಾನ ಬದಲಾವಣೆಯು ಕೃಷಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಈ ಸಂದರ್ಭದಲ್ಲಿ ಸಿರಿಧಾನ್ಯಗಳು ಹೆಚ್ಚು ಸೂಕ್ತವಾದ ಬೆಳೆಗಳಾಗಿವೆ. ಇವುಗಳನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡುವ ಅಗತ್ಯ ಇದೆ. ಸ್ಪರ್ಧಾತ್ಮಕ ದರ ದೊರೆಯುವಂತೆ ಮಾಡಬೇಕು. ಇತರ ರೀತಿಯ ನೆರವನ್ನೂ ರೈತರಿಗೆ ಒದಗಿಸಬೇಕು. ಪಡಿತರ ವ್ಯವಸ್ಥೆಯ ಮೂಲಕ ಸಿರಿಧಾನ್ಯಗಳನ್ನು ಪೂರೈಸಿ, ಜನರು ಇವುಗಳ ಬಳಕೆ ಹೆಚ್ಚಿಸಲು ಪ್ರೋತ್ಸಾಹ ನೀಡಬೇಕು. ಸಿರಿಧಾನ್ಯಗಳನ್ನು ವ್ಯಾಪಕವಾಗಿ ಬೆಳೆಯುವಂತೆ ಮತ್ತು ಬಳಕೆ ಆಗುವಂತೆ ಮಾಡುವ ಅಗತ್ಯ ಇದೆ.

ಏಟು ಬಿದ್ದದ್ದು ಒಬ್ಬರಿಗೆ, ನೋವು ತಟ್ಟಿದ್ದು ಮತ್ತೊಬ್ಬರಿಗೆ!

ಬಾಲ್ಯವಿವಾಹ: ಚಾಟಿ ಏಟು ತರವೇ?



ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ಬಾಲ್ಯವಿವಾಹಗಳನ್ನು ನಿಯಂತ್ರಣಕ್ಕೆ ತರುವುದಕ್ಕಾಗಿ ಅಸ್ಸಾಂ ಸರ್ಕಾರ ಬೀಸಿದ ಚಾಟಿ ಏಟು ಬಲವಾಗಿದ್ದು, ಅಲ್ಲಿನ ಕೆಲವು ಕುಟುಂಬಗಳ ನೆಮ್ಮದಿಯನ್ನು ಕದಡಿದೆ. ಏಟು ಬಿದ್ದದ್ದು ಒಬ್ಬರಿಗಾದರೆ ನೋವಾದದ್ದು ಮತ್ತೊಬ್ಬರಿಗೆ. ಬಾಲಕಿಯರನ್ನು ವಿವಾಹವಾದ ಯುವಕರನ್ನು, ಅವರ ಮದುವೆಗೆ ಅನುಮತಿ ನೀಡಿದ ಹಿರಿಯರನ್ನು, ಮದುವೆ ಮಾಡಿಸಿದ ಪುರೋಹಿತರನ್ನು, ಮೌಲ್ವಿಗಳನ್ನು ಹಿಡಿದು, ಎಳೆದೊಯ್ದು ಪೊಲೀಸರು ಜೈಲಿಗಟ್ಟಿದ್ದಾರೆ.

ಈ ಸಂಬಂಧ ಮೂರು ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ, ನಾಲ್ಕು ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ವರದಿಯಾಗಿದೆ. ಅಸ್ಸಾಂನ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಜನವರಿ 23ರಂದು ನಿರ್ಣಯ ಕೈಗೊಳ್ಳಲಾಯಿತು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವತಿಯರನ್ನು ವಿವಾಹವಾದ ಎಲ್ಲ ಪುರುಷರನ್ನೂ ದಸ್ತಗಿರಿ ಮಾಡಿ ಶಿಕ್ಷಿಸುವಂತೆ ಅದರ ಬೆನ್ನಿಗೇ ಆದೇಶ ಹೊರಬಿತ್ತು. ಏಕೆಂದರೆ, ಭಾರತದಲ್ಲಿ ಮಹಿಳೆ ವಿವಾಹವಾಗಬಹುದಾದ ಕನಿಷ್ಠ ವಯಸ್ಸು 18 ವರ್ಷಗಳು. ಈ ಆದೇಶದ ಫಲವೇ ಈ ಚಾಟಿ ಏಟಿನ ಕ್ರಮ.

ಚಿಕ್ಕ ವಯಸ್ಸಿನಲ್ಲಿ ಗರ್ಭ ಧರಿಸುತ್ತಿರುವವರ ಪ್ರಮಾಣವು ಅಸ್ಸಾಂನಲ್ಲಿ ಹೆಚ್ಚಿಗೆ ಇದೆ. ಇದರ ಅರ್ಥ ರಾಜ್ಯದಲ್ಲಿ ಬಾಲ್ಯವಿವಾಹವು ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ತಾಯಂದಿರ ಮರಣ ಪ್ರಮಾಣವೂ ಹೆಚ್ಚಾಗಿದೆ. ಸಮುದಾಯದ ಹಿತ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಬೇಕಾಯಿತು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

2019- 21ರ ಅವಧಿಯ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಯು ಭಾರತದಲ್ಲಿನ 20-24 ವರ್ಷಗಳ ವಯೋಮಾನದಲ್ಲಿರುವ ಮಹಿಳೆಯರ ಪೈಕಿ ಶೇ 23ರಷ್ಟು ಮಹಿಳೆಯರು ತಾವು 18 ವರ್ಷ ತುಂಬುವುದಕ್ಕೆ ಮುನ್ನ ವಿವಾಹವಾಗಿರುವುದಾಗಿ ಹೇಳಿದ್ದಾರೆ ಎಂದು ತಿಳಿಸಿದೆ. ಈ ಪ್ರಮಾಣ ಅಸ್ಸಾಂ ರಾಜ್ಯದಲ್ಲಿ ಶೇ 31.8ರಷ್ಟು ಇದ್ದು, ಅತ್ಯಂತ ಹೆಚ್ಚಿನ ಬಾಲ್ಯವಿವಾಹಗಳು ನಡೆಯುವ ರಾಜ್ಯ ಇದಾಗಿದೆ. ಈ ಕಾರಣದಿಂದ ಬಾಲ್ಯವಿವಾಹಗಳನ್ನು ತಡೆಗಟ್ಟುವ ಈ ಕ್ರಮ ಬಿಗಿಯಾಗಿ ಜರುಗಲಿದೆ ಎಂದಿದ್ದಾರೆ.

ಬಾಲ್ಯವಿವಾಹಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯವೇನೂ ಉತ್ತಮ ಸ್ಥಿತಿಯಲ್ಲಿಲ್ಲ. ಅಂಕಿ ಅಂಶಗಳ ಪ್ರಕಾರ, ಮಕ್ಕಳ ವಿರುದ್ಧ ಅತಿ ಹೆಚ್ಚು ದೌರ್ಜನ್ಯ ಪ್ರಕರಣಗಳು ದಾಖಲಾಗುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 7ನೇ ಸ್ಥಾನದಲ್ಲಿದೆ. ಹಿಂದಿನ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಕಡಿಮೆಯಾಗುವ ಬದಲು ಸತತವಾಗಿ ಏರುತ್ತಲೇ ಇದೆ.

ದೇಶದಲ್ಲಿ, ಬಾಲ್ಯವಿವಾಹ (ಎಂದರೆ ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹುಡುಗಿ ಮತ್ತು 21 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹುಡುಗ) ಮಕ್ಕಳ ವಿರುದ್ಧ ನಡೆಯುವ ಒಂದು ಗಂಭೀರ ಅಪರಾಧ. ಈ ಪದ್ಧತಿಯನ್ನು ನಿರ್ಮೂಲನ ಮಾಡಲು ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಭಾರತದಾದ್ಯಂತ ಎಲ್ಲ ರಾಜ್ಯಗಳಲ್ಲೂ ಈ ಪಿಡುಗು ಇದೆ. ಬಾಲ್ಯವಿವಾಹವು ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವುದಷ್ಟೇ ಅಲ್ಲದೆ ಅವರನ್ನು ಹಿಂಸೆ, ಶೋಷಣೆ ಮತ್ತು ದೌರ್ಜನ್ಯಗಳಿಗೆ ಗುರಿ ಮಾಡುತ್ತದೆ. ಶಿಕ್ಷಣ, ಆರೋಗ್ಯ ಮತ್ತು ರಕ್ಷಣೆ ಪಡೆಯಲು ಅವರಿಗಿರುವ ಹಕ್ಕನ್ನೂ ಅವರಿಂದ ಕಸಿಯುತ್ತದೆ.

‘ಕುಟುಂಬದ ಹಣಕಾಸು ಪರಿಸ್ಥಿತಿ, ಅವರ ವಾಸಸ್ಥಳ... ಇವ್ಯಾವೂ ಬಾಲ್ಯವಿವಾಹಗಳ ಹೆಚ್ಚಳಕ್ಕೆ ಕಾರಣವಾಗುವುದಿಲ್ಲ. ಶಿಕ್ಷಣ ಇಲ್ಲದಿರುವುದೇ ಬಾಲ್ಯವಿವಾಹಗಳ ಹೆಚ್ಚಳಕ್ಕೆ ಕಾರಣ’ ಎಂದು ಭಾರತೀಯ ಬಾಲ್ಯವಿವಾಹಗಳ ಬಗ್ಗೆ ಯುನಿಸೆಫ್ ನಡೆಸಿರುವ ಸಮೀಕ್ಷೆ ತಿಳಿಸಿದೆ. ವಿಪರ್ಯಾಸವೆಂದರೆ, ಅಸ್ಸಾಂನಲ್ಲಿ ಹೆಚ್ಚು ಹೆಚ್ಚು ಶಾಲೆಗಳನ್ನು ಪ್ರಾರಂಭಿಸುವ ಮೂಲಕ ಹೆಚ್ಚು ಹೆಚ್ಚು ಮಕ್ಕಳನ್ನು ಶಾಲೆಗೆ ಕರೆತರುವ ಬದಲು, ಹಿಂದಿನ ಸೆಪ್ಟೆಂಬರ್‌ನಲ್ಲಿ, ನೀತಿ ಆಯೋಗದ ಮಾರ್ಗಸೂಚಿಯಂತೆ 1,700 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಹತ್ತಿರದ ಶಾಲೆಗಳೊಂದಿಗೆ ವಿಲೀನಗೊಳಿಸಲಾಯಿತು. ಶಾಲೆ ದೂರವಾದಷ್ಟೂ ಸುರಕ್ಷತೆಯ ಕೊರತೆ ಎಂಬ ಕಾರಣಕ್ಕಾಗಿ ಇನ್ನಷ್ಟು ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿಯುವಂತೆ ಆಗುತ್ತದೆ. ಹಾಗೆಯೇ, ಅಸ್ಸಾಂನಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಅತ್ಯಲ್ಪ ಪ್ರಮಾಣದಲ್ಲಿದೆ (ಶೇ 14). ಇದಕ್ಕೆ, ಶಿಕ್ಷಣ ಇಲ್ಲದಿರುವುದೂ ಒಂದು ಕಾರಣ ಎನ್ನಲಾಗಿದೆ. ಬಾಲ್ಯವಿವಾಹಗಳ ಹೆಚ್ಚಳಕ್ಕೆ ಇದೂ ಕಾರಣ. ಹತ್ತು ವರ್ಷಗಳಿಗೂ ಹೆಚ್ಚು ಕಾಲ ಶಾಲೆಗೆ ಹೋಗಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿರುವ ಜಮ್ಮು ಮತ್ತು ಕಾಶ್ಮೀರ ಹಾಗೂ ಕೇರಳದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಇದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿ ತಿಳಿಸುತ್ತದೆ.

2006ರಲ್ಲಿ ಜಾರಿಗೆ ಬಂದ ಬಾಲ್ಯವಿವಾಹ ನಿಷೇಧ ಕಾಯ್ದೆಯ ಪ್ರಕಾರ, ಬಾಲ್ಯವಿವಾಹ ಒಂದು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧ. ಕಾನೂನಿನ ಉದ್ದೇಶವು ಅಪರಾಧಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿಕೊಡುವುದು ಮತ್ತು ಅಪರಾಧ ಮಾಡಿದವರಿಗೆ ಸೂಕ್ತ ಶಿಕ್ಷೆ ವಿಧಿಸುವುದು. ಆದರೆ ಇದೊಂದು ವಿಚಿತ್ರ ಸನ್ನಿವೇಶ. ಇಲ್ಲಿ, ತಪ್ಪು ಮಾಡಿದವರನ್ನು ಶಿಕ್ಷಿಸಿದರೆ, ಅದರ ಬರೆ ಬಿದ್ದಿರುವುದು ಶೋಷಣೆಗೆ ಒಳಗಾದವರಿಗೇ! ಕುಟುಂಬದ ದುಡಿಯುವ ಕೈಗಳಿಗೆ ಕೋಳ ತೊಡಿಸಿರುವುದರಿಂದ ಅನೇಕ ಕುಟುಂಬಗಳು ಅತಂತ್ರವಾಗಿವೆ, ದಿಕ್ಕು ತೋಚದ ಸಣ್ಣ ವಯಸ್ಸಿನ ಹುಡುಗಿಯರು ಆತ್ಮಹತ್ಯೆ ಮಾಡಿಕೊಂಡಿರುವುದೂ ವರದಿಯಾಗಿದೆ. ಹಾಗೆಂದು ಇಂಥ ಪ್ರಕರಣಗಳ ವಿರುದ್ಧ ಕ್ರಮ ಜರುಗಿಸಬಾರದು ಎಂದೂ ಹೇಳಲಾಗದು.



ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು. ಹಾಗೆಯೇ ಇದು, ಒಂದು ರಾಜ್ಯಕ್ಕೆ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾದುದೂ ಅಲ್ಲ. ಸಾಮಾಜಿಕ ಸಮಸ್ಯೆಯೊಂದನ್ನು ಕಾನೂನು ಕ್ರಮದಿಂದ ಮಾತ್ರ ನಿವಾರಿಸಲು ಸಾಧ್ಯವಿಲ್ಲ ಎಂಬುದನ್ನು ಜಾರಿಗೆ ಬಂದಿರುವ ನಮ್ಮ ಅನೇಕ ಸಮಾಜ ಸುಧಾರಣಾ ಕಾನೂನುಗಳು ರುಜುವಾತುಪಡಿಸಿವೆ.

ಯಾವುದೇ ಸಮಾಜ ಸುಧಾರಣಾ ಕಾನೂನು ಯಶಸ್ವಿಯಾಗಿ ಜಾರಿಯಾಗಬೇಕಾದರೆ, ಆ ನಿರ್ದಿಷ್ಟ ಸಾಮಾಜಿಕ ಪಿಡುಗು ಸಮಾಜದಲ್ಲಿ ಬೇರೂರಲು ಕಾರಣಗಳೇನು ಎಂಬುದನ್ನು ತಿಳಿದು, ಅವುಗಳನ್ನು ನಿವಾರಿಸುವ ಪ್ರಯತ್ನಗಳಾಗಬೇಕು. ಬಾಲ್ಯವಿವಾಹದಿಂದ ಹೆಣ್ಣುಮಕ್ಕಳ ಆರೋಗ್ಯದ ಮೇಲಾಗುವ ಪರಿಣಾಮಗಳ ಬಗ್ಗೆ ಹೆಣ್ಣುಮಕ್ಕಳಲ್ಲಿ ಮತ್ತು ಅವರ ತಂದೆ-ತಾಯಿ, ಪೋಷಕರಲ್ಲಿ ತಿಳಿವಳಿಕೆ ಮೂಡಿಸಬೇಕು. ಹೆಣ್ಣುಮಕ್ಕಳಿಗೆ ಶಿಕ್ಷಣ ಪಡೆಯಲು ಅಗತ್ಯವಿರುವ ಎಲ್ಲ ಅವಕಾಶಗಳನ್ನು ಕಲ್ಪಿಸಬೇಕು. ಗ್ರಾಮ, ತಾಲ್ಲೂಕು, ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಶಿಬಿರಗಳನ್ನು ಏರ್ಪಡಿಸಬೇಕು, ಶಾಲಾ ಶಿಕ್ಷಕರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಿ, ಅವರಿಗೆ ಅರಿವು ಮೂಡಿಸುವ ಮೂಲಕ ಶಾಲಾ ಮಕ್ಕಳಲ್ಲಿ ಬಾಲ್ಯವಿವಾಹದ ದುಷ್ಪರಿಣಾಮಗಳನ್ನು, ಶಿಕ್ಷಣದ ಮಹತ್ವವನ್ನು ತಿಳಿಯಪಡಿಸಬೇಕು. ಹೆಣ್ಣುಮಕ್ಕಳ ಯಶೋಗಾಥೆಯ ಉದಾಹರಣೆಗಳನ್ನು ಹೇಳಿ ಶಾಲೆ ತಪ್ಪಿಸದಂತೆ ಹುರಿದುಂಬಿಸಬೇಕು. ಶಾಲೆ ತಪ್ಪಿಸದೇ ಇರುವ ಮಕ್ಕಳಿಗೆ ಸಣ್ಣ ಪುಟ್ಟ ಪ್ರೋತ್ಸಾಹಕಗಳನ್ನು ಕೊಡಬೇಕು.

ಇದಾವುದೂ ಕಷ್ಟದ ಕೆಲಸವಲ್ಲ. ಇದಕ್ಕೆ ಬೇಕಾಗಿರುವುದು ಇಚ್ಛಾಶಕ್ತಿ ಮಾತ್ರ. ಕಾನೂನು ಮಾಡದ ಪವಾಡವನ್ನು ಈ ಕ್ರಮಗಳು ಮಾಡುತ್ತವೆ. ಇವೆಲ್ಲದರ ಹೊರತಾಗಿಯೂ ಕಾನೂನಿನ ಭಯ ಇರಲೇಬೇಕು. ತಿಳಿವಳಿಕೆಯ ಕ್ರಮಗಳು ಜನರಲ್ಲಿ ಜಾಗೃತಿ ಮೂಡಿಸಿ ಸಕಾರಾತ್ಮಕ ಪರಿಣಾಮಗಳಿಗೆ ಕಾರಣವಾದರೆ, ಕಾನೂನಿನ ಕ್ರಮ ಜನರಲ್ಲಿ ಶಿಕ್ಷೆಯ ಭಯ ಹುಟ್ಟಿಸಿ ತಪ್ಪು ಮಾಡದಂತೆ ಎಚ್ಚರಿಕೆ ಮೂಡಿಸುತ್ತದೆ.

ವಿವಾಹವು ಮಹಿಳೆಯ ಆಯ್ಕೆಯಾಗಬೇಕೆ ವಿನಾ ಶಿಕ್ಷೆಯಾಗಬಾರದು. ಮಹಿಳೆಯರ ಸಬಲೀಕರಣ ಮತ್ತು ಜನಜಾಗೃತಿ ಮಾತ್ರವೇ ಈ ಸಮಸ್ಯೆಗೆ ಪರಿಹಾರ ದೊರಕಿಸಿಕೊಡಲು ಸಾಧ್ಯವಿರುವ ಮಾರ್ಗಗಳು. ಏಕಾಏಕಿ ಕೈಗೊಂಡ ಬಿಗಿ ಕ್ರಮ ಅಸ್ಸಾಂನಲ್ಲಿ ಭಯ ಹುಟ್ಟಿಸಿರುವುದಂತೂ ನಿಜ. ದಕ್ಷಿಣ ಅಸ್ಸಾಂನ ಕೆಲವು ಜಿಲ್ಲೆಗಳಲ್ಲಿ ನಿಗದಿಯಾಗಿದ್ದ 100ಕ್ಕೂ ಹೆಚ್ಚು ಬಾಲ್ಯವಿವಾಹಗಳನ್ನು ರದ್ದುಗೊಳಿಸಲಾಗಿದೆ ಇಲ್ಲವೇ ಮುಂದೂಡಲಾಗಿದೆ ಎಂಬ ವರದಿಗಳಿವೆ.

ಈ ನಡುವೆ, ಸರ್ಕಾರದ ಈ ಕ್ರಮ ರಾಜಕೀಯ ಬಣ್ಣ ಪಡೆದುಕೊಂಡಿದೆ. ಅಲ್ಪಸಂಖ್ಯಾತರು ಮತ್ತು ಬುಡಕಟ್ಟು ಸಮುದಾಯಗಳನ್ನು ಗುರಿಯಾಗಿಸಿಕೊಂಡು ಈ ಕ್ರಮ ಕೈಗೊಳ್ಳಲಾಗಿದೆ ಎಂಬ ಆರೋಪಗಳು ಬಂದಿವೆ. ಹಾಗಾಗಿ, ಈ ಕ್ರಮ ಸಕಾರಾತ್ಮಕ ಫಲ ನೀಡುವ ಸಾಧ್ಯತೆ ಎಷ್ಟಿದೆಯೋ ಅಷ್ಟೇ ನಕಾರಾತ್ಮಕ ಪರಿಣಾಮವನ್ನೂ ಬೀರುವ ಸಾಧ್ಯತೆಯೂ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಚುರುಮುರಿ



ಬಂಪರ್ ಬಜೆಟ್

• ಸುಮಂಗಲಾ

ಬೆಕ್ಕಣ್ಣ ಬಜೆಟ್ ಸುದ್ದಿಗಳನ್ನು ಬಿಟ್ಟೂಬಿಡದೆ ನೋಡುತ್ತಿತ್ತು.

‘ಬಜೆಟ್ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕರ ಕಿವಿಯಲ್ಲಿ ಚೆಂಡು ಹೂವು = ಕೇಸರಿ ಬಣ್ಣ = ಕೇಸರಿ ಬಣ್ಣದ ಕಮಲದ ಹೂವು... ಏನೋ ಈ ಸಮೀಕರಣನೇ ಬಗೆಹರಿವಲ್ದು’ ಎಂದು ತಲೆ ಕೆರೆದುಕೊಂಡಿತು.

‘ಕೇಸರಿ ಬಣ್ಣ ನಿಮ್ಮ ಕಮಲಕ್ಕನ ಮನಿಯವ್ರಿದ್ದು ಮಾತ್ರ ಅಲ್ಲಲೇ. ಕೇಸರಿ ಎಂಥಾ ಚಂದದ ಬಣ್ಣ... ನಿಂದೂ ಹುಲಿಯಂಥ ಕೇಸರಿ ಬಣ್ಣ ಅಲ್ಲೇನು? ಹೂವುಗೀವು ಬಿಟ್ಟಾಕಿ ಬಜೆಟ್ಟಿನಾಗೆ ಏನೈತೆ ನೋಡು’ ಎಂದು ಬೆಕ್ಕಣ್ಣನ ಮೂತಿಗೆ ತಿವಿದೆ.

‘ಅಲ್ಲಾ... ಬೊಮ್ಮಾಯಿ ಅಂಕಲ್ಲು ಬಜೆಟ್ಟಿನಾಗೆ ಎಲ್ಲರಿಗೂ ಏನೇನೋ ಸವಲತ್ತು ಕೊಟ್ಟಾರೆ. ಬೀದಿನಾಯಿ ದತ್ತು ತಗೊಳ್ಳಾಕ ಅದೇನೋ ಪೋರ್ಟಲ್ಲು ಮಾಡ್ತಾರಂತೆ, ಮುಧೋಳ ನಾಯಿ ತಳಿ ಸಂರಕ್ಷಣೆಗೆ 5 ಕೋಟಿ ಕೊಟ್ಟಾರೆ... ಬೆಕ್ಕುಗಳ ರಕ್ಷಣೆ ಬಗ್ಗೆ ಮಾತ್ರ ಒಂದ್ ಮಾತೂ ಇಲ್ಲ’ ಬೆಕ್ಕಣ್ಣ ಸುದ್ದಿ ಓದುತ್ತ ಜೋರಾಗಿ ಗುರ್ರೆಂದಿತು.

‘ರೈತರು, ಮಹಿಳೆಯರು, ವಿದ್ಯಾರ್ಥಿಗಳಿಗೆ ಭಾರೀ ಬಂಪರ್ ಕೊಡುಗೆ ಕೊಟ್ಟಾರಂತೆ. ಏನೇ ಅಂದ್ರೂ ನಮ್ಮ ಬೊಮ್ಮಾಯಿ ಅಂಕಲ್ಲು ಮಹಿಳೆಯರು, ವಿದ್ಯಾರ್ಥಿಗಳು, ರೈತರ ಕೈಬಿಡಂಗಿಲ್ಲ’ ಗುರ್ರೆನ್ನುವುದನ್ನು ಮರೆತ ಬೆಕ್ಕಣ್ಣ ಅಭಿಮಾನದಿಂದ ಉಲಿಯಿತು.

‘ಚುನಾವಣೆ ಮುಂದಿಟ್ಟುಕೊಂಡು ಅದೆಂಗೆ ಕೈಬಿಡ್ತಾರಲೇ... ಈಗ ಬಜೆಟ್ಟಿನಾಗೆ ಕೈತುಂಬ ಕೊಟ್ಟಂಗೆ ಮಾಡಿದರೆ ಮುಂದೆ ಚುನಾವಣೆವಳಗ ಬೆಳೆ ಹುಲುಸಾಗಿ ಬರತೈತಿ. ರಾಜ್ಯ ಬೊಕ್ಕಸದ ಒಟ್ಟು ಸಾಲ ಎಷ್ಟೈತೆ ನೋಡು. 77 ಸಾವಿರ ಕೋಟಿ ರೂಪಾಯಿ ಸಾಲ, ಮತ್ತ ಅದಕ್ಕ ಬಡ್ಡಿ 34 ಸಾವಿರ ಕೋಟಿ. ಬಂಪರ್ ಕೊಡುಗೆನೂ ಅವರ ಜೇಬಿಂದ ಕೊಡಂಗಿಲ್ಲ, ಸಾಲನೂ ಅವರ ಜೇಬಿಂದ ತುಂಬಂಗಿಲ್ಲ, ತಿಳೀತಿಲ್ಲೋ’ ನಾನು ಕುಟುಕಿದೆ.

‘ಅಂದರೆ ಚೆಂಡು ಹೂವೋ ಅಥವಾ ಕಮಲದ ಹೂವೋ... ಒಟ್ಟು ಎಲ್ಲಾರೂ ಸೇರಿ ನಿಮಗ ಅಂದ್ರ ಶ್ರೀಸಾಮಾನ್ಯನ ಕಿವಿಗೆ ಹೂವು ಇಡ್ತಾರಷ್ಟೇ’ ಬೆಕ್ಕಣ್ಣ ಕೊನೆಗೊಂದು ಜಾಣತನದ ಷರಾ ಬರೆಯಿತು.

ದಿನದ ಟ್ವೀಟ್

ಯಾರ ಹೆಸರಿಟ್ಟರೂ ವ್ಯರ್ಥ



ಇವರು ಶಿವಮೊಗ್ಗದ ವಿಮಾನ ನಿಲ್ದಾಣಕ್ಕೆ ಯಡಿಯೂರಪ್ಪನವರ ಹೆಸರಿಡಬೇಕು, ಕುವೆಂಪು ಹೆಸರಿಡಬೇಕು, ಅಕ್ಕಮಹಾದೇವಿ ಬೇಕು ಅನ್ನುವ ಚರ್ಚೆಯಲ್ಲೇ ಇರುವಾಗ ಅಲ್ಲಿನ ನಾಮಫಲಕ, ಸೂಚನಾ ಫಲಕಗಳಲ್ಲಿ ಕನ್ನಡವನ್ನೇ ಬಳಕೆ ಮಾಡಲಾಗಿಲ್ಲ ಎಂಬ ಮಾಹಿತಿ ಬರುತ್ತಿದೆ. ಅದು ನಿಜವಾದಲ್ಲಿ ಯಾರ ಹೆಸರಿಟ್ಟರೂ ವ್ಯರ್ಥ.

ವಿಕಾಸ್ ಹೆಗಡೆ, ಟೆಕಿ

ಕಿಡಿನುಡಿ



ಬಿಜೆಪಿ ಬಳಸುತ್ತಿರುವ ತರ್ಕ ಇದು: ವ್ಯಕ್ತಿಯೊಬ್ಬ ತಪ್ಪು ಮಾಡಿಲ್ಲ ಎಂದಾದರೆ, ಆತನಿಗೆ ತನಿಖಾ ಸಂಸ್ಥೆಗಳ ಮುಂದೆ ತನಿಖೆಗೆ ಹಾಜರಾಗಲು ಯಾವ ಸಮಸ್ಯೆಯೂ ಇರಬಾರದು. ಅಂದರೆ, ಯಾವ ತಪ್ಪನ್ನೂ ಮಾಡದವರಿಗೆ ಅಥವಾ ಮುಚ್ಚಿಡಲು ಏನೂ ಇಲ್ಲದವರಿಗೆ ತನಿಖಾ ಸಂಸ್ಥೆಗಳು ಕಿರುಕುಳ ನೀಡುತ್ತಿರಬಹುದು. ಹೀಗಿರುವಾಗ, ಪ್ರಕ್ರಿಯೆಯನ್ನೇ ಶಿಕ್ಷೆಯನ್ನಾಗಿ ಮಾಡಿದ್ದಕ್ಕೆ ಉತ್ತರದಾಯಿತ್ವ ಏನಾದರೂ ಇರುತ್ತದೆಯೇ?

ಎಂ.ಕೆ. ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 20-2-1998

• ‘ಕಾಂಗ್ರೆಸ್ ಬೆಂಬಲ ವಾಪಸಿಗೆ ಬೊಫೋರ್ಸ್ ಭೀತಿ ಕಾರಣ’

ದಾವಣಗೆರೆ, ಫೆ. 19– ಬೊಫೋರ್ಸ್ ಫಿರಂಗಿ ಖರೀದಿ ಹಗರಣ ತಮಗೆ ತಿರುಗುಬಾಣವಾಗುತ್ತದೆ ಎಂಬುದನ್ನು ಕಾಂಗ್ರೆಸ್ ಪಕ್ಷ ಮನಗಂಡಿದ್ದು, ತಮ್ಮ ನೇತೃತ್ವದ ಸಂಯುಕ್ತ ರಂಗ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳಲು ಅದೇ ಮುಖ್ಯ ಕಾರಣ ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ಇಲ್ಲಿ ಹೇಳಿದರು.

ಜನತಾದಳ ಪಕ್ಷದ ಅಭ್ಯರ್ಥಿ ಪ್ರೊ.ಎಚ್.ಎಸ್. ಪಟೇಲ್ ಅವರ ಪರ ಏರ್ಪಡಿಸಿದ್ದ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷ ಈಗ ಬೊಫೋರ್ಸ್ ಬಗ್ಗೆ ಮಾತನಾಡುತ್ತಿದೆ. ಈ ಹಗರಣಕ್ಕೆ ಸಂಬಂಧಿಸಿದ ತನಿಖೆಯಲ್ಲಿನ ಬಹಳಷ್ಟು ಸಂಗತಿಗಳು ಅವರಿಗೆ ಪ್ರತಿಕೂಲವಾಗುವ ಸೂಚನೆಗಳು ಹೊರಬಿದ್ದಾಗ ಬೆಂಬಲ ಹಿಂತೆಗೆದುಕೊಂಡಿತು’ ಎಂದರು.

• ರಾಯಚೂರಿನ ಸ್ಫೋಟಕ ಬಳಕೆ?

ಬೆಂಗಳೂರು, ಫೆ. 19– ಈಚೆಗೆ ಕೊಯಮತ್ತೂರಿನಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ತೀವ್ರ ಶೋಧ ನಡೆಸಿದ ತಮಿಳುನಾಡು ಪೊಲೀಸರು ಅಲ್ಲಿನ ತಿರುಮಲ ರಸ್ತೆಯಲ್ಲಿ ಎಲೆಕ್ಟ್ರಿಕ್ ಡಿಟೋನೇಟರ್, ಜಿಲೆಟಿನ್ ಕಡ್ಡಿಗಳು, ಪೈಪ್ ಮತ್ತು ಪೆಟ್ರೋಲ್ ಬಾಂಬ್‌ಗಳನ್ನು ವಶಪಡಿಸಿಕೊಂಡಿದ್ದು, ಅವುಗಳಲ್ಲಿ ಕೆಲವೊಂದು ರಾಯಚೂರಿನಲ್ಲಿ ತಯಾರಾದವುಗಳೆಂದು ಅಲ್ಲಿನ ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ.

‘ಈ ಹಿನ್ನೆಲೆಯಲ್ಲಿ ರಾಜ್ಯದ ಒಂದು ತಂಡವನ್ನು ಅಧ್ಯಯನಕ್ಕಾಗಿ ಕೊಯಮತ್ತೂರಿಗೆ ಕಳುಹಿಸಲಾಗಿದೆ’ ಎಂದು ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ ಟಿ. ಶ್ರೀನಿವಾಸುಲು ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 20-2-1973

• ಸಂಸತ್ ಇತಿಹಾಸದಲ್ಲೇ ಪ್ರಥಮ: ರಾಷ್ಟ್ರಪತಿ ಭಾಷಣ ಬಹಿಷ್ಕರಿಸಿ ವಿರೋಧ ಪಕ್ಷಗಳ ಸಭಾತ್ಯಾಗ

ನವದೆಹಲಿ, ಫೆ. 19– ಸಂಸತ್ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿ ವಿ.ವಿ. ಗಿರಿ ಅವರ ಭಾಷಣಕ್ಕೆ ಇಂದು 6 ಪ್ರಮುಖ ವಿರೋಧ ಪಕ್ಷಗಳು ಬಹಿಷ್ಕಾರ ಹಾಕಿದವು. ರಾಷ್ಟ್ರಪತಿಯವರು ಸಭಾಭವನಕ್ಕೆ ಬಂದಾಗ ಹಾಜರಿದ್ದ ಐವರು ವಿರೋಧಿ ಸದಸ್ಯರು ಹಲವು ನಿಮಿಷಗಳಲ್ಲೇ ಸಭಾತ್ಯಾಗ ಮಾಡಿದರು.

ಭಾರತದ ಸಂಸತ್ತಿನ ಇತಿಹಾಸದಲ್ಲಿ ವಿರೋಧ ಪಕ್ಷದವರು ಸಾಮೂಹಿಕವಾಗಿ ರಾಷ್ಟ್ರಪತಿಯವರ ಭಾಷಣಕ್ಕೆ ಬಹಿಷ್ಕಾರ ಹಾಕುತ್ತಿರುವುದು ಇದೇ ಮೊದಲು.

• ಕಾಳಿ ನದಿ ಯೋಜನೆಯಲ್ಲಿ 5 ತಿಂಗಳು ಕೆಲಸ ನೀಡಲು ಸಚಿವರ ಭರವಸೆ

ಬೆಂಗಳೂರು, ಫೆ. 19– ನಗರಕ್ಕೆ ಕೆಲಸ ಹುಡುಕಿಕೊಂಡು ಬಂದಿರುವ ಅಭಾವ ಪೀಡಿತ ಜನರಿಗೆ ಇಂದೇ ಕಾಳಿ ನದಿ ಯೋಜನೆಯಲ್ಲಿ ಕೆಲಸ ದೊರಕಿಸಲು ಪುಕ್ಕಟೆ ಸಾರಿಗೆ ವ್ಯವಸ್ಥೆ, ಪ್ರಯಾಣದ ಕಾಲ ಮತ್ತು ಸ್ಥಳಕ್ಕೆ ತಲುಪಿದ ಎರಡು, ಮೂರು ದಿನ ಉಚಿತ ಊಟ ಮೊದಲಾದ ಸೌಕರ್ಯಗಳನ್ನು ನೀಡಿ, ಐದು ತಿಂಗಳ ಕಾಲ ಕೆಲಸದ ಭರವಸೆಯನ್ನು ನೀಡುವುದಾಗಿ ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪನವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಸಂಗತ

ಬೌದ್ಧಿಕ ಕೇಂದ್ರವಾಗಲಿ

ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ದೊರೆಯದಿರುವುದು ರಾಜಕೀಯ– ಸಾಹಿತ್ಯಕ ವೈಫಲ್ಯವೇ ಸರಿ

• ನಾ.ದಿವಾಕರ

ಮೈಸೂರಿನಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ತನ್ನ ಸಾಹಿತ್ಯಕ ಪಯಣದ 15 ವರ್ಷಗಳನ್ನು ಪೂರೈಸಿದೆ. ಭಾರತೀಯ ಭಾಷಾ ಸಂಸ್ಥಾನದ ಆವರಣದಲ್ಲಿ, ಈ ಸಂಸ್ಥೆಯ ಆಶ್ರಯದಲ್ಲೇ 2008ರಲ್ಲಿ ಆರಂಭವಾದ ಕನ್ನಡ ಶಾಸ್ತ್ರೀಯ ಸಂಸ್ಥೆಯು ಕೇಂದ್ರ ಸರ್ಕಾರದ ಬಳುವಳಿಯಾಗಿ ಬಂದಿರುವುದಲ್ಲ. ಬದಲಾಗಿ ನಮ್ಮ ಸಾಹಿತಿಗಳು, ಕಲಾವಿದರು ಮತ್ತು ಕನ್ನಡಪರ ಹೋರಾಟಗಾರರು ನಡೆಸಿದ ಹೋರಾಟದ ಫಲವಾಗಿ ಬಂದಿರುವುದು. ಕನ್ನಡದ ಅಭಿಜಾತ ಸಾಹಿತ್ಯದಲ್ಲಿನ ಅಮೂಲ್ಯ ಕೃತಿಗಳನ್ನು ಮುಂದಿನ ಪೀಳಿಗೆಗಾಗಿ ಕಾಪಿಟ್ಟುಕೊಳ್ಳುವ ಉದ್ದೇಶದಿಂದ ಸಂಶೋಧನೆ, ಅಧ್ಯಯನ ಮತ್ತು ಸಾಹಿತ್ಯಕ ಉತ್ಖನನದ ಪ್ರಕ್ರಿಯೆಯ ಮೂಲಕ, ಕನ್ನಡ ಭಾಷೆಯ ಶ್ರೀಮಂತಿಕೆಯನ್ನೂ ಚಾರಿತ್ರಿಕ ಹೆಜ್ಜೆಗಳನ್ನೂ ಗುರುತಿಸುವ ಒಂದು ಬೌದ್ಧಿಕ ಕೇಂದ್ರವಾಗಿ ಈ ಕೇಂದ್ರ ರೂಪುಗೊಳ್ಳಬೇಕಿದೆ. ಈ ಸಂಸ್ಥೆಯನ್ನು ಒಂದು ಅಧ್ಯಯನ ಪೀಠದಂತೆ ಅಥವಾ ಸಂಶೋಧನಾ ಕೇಂದ್ರದಂತೆ ಪರಿಗಣಿಸುವುದೇ ಅಕ್ಷಮ್ಯ.

ನಮ್ಮ ಸಾಹಿತ್ಯ ವಲಯದ ಆಸಕ್ತ ಮನಸ್ಸುಗಳು ಒಂದಾಗಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸ್ವಾಯತ್ತತೆಗಾಗಿ ನಾಲ್ಕು ವರ್ಷಗಳಿಂದ ಹೋರಾಡುತ್ತಿವೆ. ಕೇಂದ್ರ ಸಂಸ್ಥೆಯೊಂದರ ಆಶ್ರಯದಲ್ಲಿ ಬೆಳೆಯುವುದಕ್ಕೂ ತನ್ನದೇ ಆದ ಸ್ವಾಯತ್ತತೆಯೊಂದಿಗೆ ಕಾರ್ಯನಿರ್ವಹಿಸುವುದಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸಗಳು ರಾಜಕೀಯ ನಾಯಕರಿಗೆ ಅರ್ಥವಾಗುವುದಿಲ್ಲ. ಆದರೆ ಸಾಹಿತ್ಯಕ ಮನಸ್ಸುಗಳಿಗೆ ಇದು ಅರ್ಥವಾಗುತ್ತದೆ. 2013ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಕೇಂದ್ರವನ್ನು ಬೆಂಗಳೂರಿಗೆ ವರ್ಗಾಯಿಸುವ ಪ್ರಯತ್ನವೂ ನಡೆದಿತ್ತು. ಈ ಸಂದರ್ಭದಲ್ಲಿ ಸಾಹಿತಿಗಳ ಒತ್ತಡಕ್ಕೆ ಮಣಿದು ಸರ್ಕಾರವು ಸಂಸ್ಥೆಯನ್ನು ಮೈಸೂರಿನಲ್ಲೇ ಉಳಿಸಲು ಒಪ್ಪಿತ್ತು.

ದಿವಂಗತ ಪ. ಮಲ್ಲೇಶ್ ಅವರ ಕೊಡುಗೆಯನ್ನು ಸ್ಮರಿಸದಿದ್ದರೆ ನಾವು ಕೃತಘ್ನರಾಗುತ್ತೇವೆ. ಇದಕ್ಕೂ ಮುನ್ನ ಇದೇ ಕೇಂದ್ರೀಯ ಸಂಸ್ಥೆಯ ಆಶ್ರಯದಲ್ಲಿದ್ದ ಶಾಸ್ತ್ರೀಯ ತಮಿಳು ಅತ್ಯುನ್ನತ ಅಧ್ಯಯನ ಕೇಂದ್ರ ತನ್ನ ಬಂಧನವನ್ನು ಬಿಡಿಸಿಕೊಂಡು ಚೆನ್ನೈಗೆ ವರ್ಗಾವಣೆಯಾಗಿತ್ತು. ತಮಿಳು ಶಾಸ್ತ್ರೀಯ ಕೇಂದ್ರವನ್ನು ವರ್ಗಾಯಿಸಿದ ಒಂದೇ ವರ್ಷದಲ್ಲಿ ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಒಕ್ಕೊರಲಿನಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಶಾಸ್ತ್ರೀಯ ಕೇಂದ್ರಕ್ಕೆ ಸ್ವಾಯತ್ತತೆಯನ್ನು ಒದಗಿಸುವುದರಲ್ಲಿ ಯಶಸ್ವಿಯಾಗಿದ್ದರು. ಹೋದ ವರ್ಷ ಈ ಕೇಂದ್ರವು ತನ್ನದೇ ಆದ ಸ್ವಂತ ಕಟ್ಟಡವನ್ನೂ ನಿರ್ಮಿಸಿ, ಪೂರ್ಣ ಪ್ರಮಾಣದ ಸ್ವಾತಂತ್ರ್ಯವನ್ನು ಪಡೆದಿದೆ.

ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಸ್ವಾಯತ್ತತೆಗಾಗಿ ಹೋರಾಡುತ್ತಿರುವವರು ಹತ್ತಾರು ಬಾರಿ ಸಿಐಐಎಲ್ ಸಂಸ್ಥೆಯ ನಿರ್ದೇಶಕರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಾಣಕ್ಕೆ ನಾಲ್ಕೂವರೆ ಎಕರೆ ಭೂಮಿಯನ್ನು ನೀಡುವುದಾಗಿ ಮೈಸೂರು ವಿಶ್ವವಿದ್ಯಾಲಯ ತಾತ್ವಿಕ ಒಪ್ಪಿಗೆ ನೀಡಿದೆ. ಆದರೆ ಆ ಕಡತ ಬಹುಶಃ ಯಾವುದೋ ಕಪಾಟಿನಲ್ಲಿ ದೂಳು ತಿನ್ನುತ್ತಾ ಕುಳಿತಿದ್ದಂತೆ ಕಾಣುತ್ತದೆ. ಈಗ ಶಾಸ್ತ್ರೀಯ ಕನ್ನಡ ಕೇಂದ್ರವನ್ನು ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡಕ್ಕೆ ವರ್ಗಾವಣೆ ಮಾಡಲು ಪ್ರಯತ್ನಗಳು ನಡೆಯುತ್ತಿದ್ದು, ತಡವಾಗಿಯಾದರೂ ಈ ವಿಚಾರದಲ್ಲಿ ಆಸಕ್ತಿ ತೋರಿದ ಸಂಸದ ಪ್ರತಾಪ ಸಿಂಹ ಅವರ ಪ್ರಯತ್ನ ಶ್ಲಾಘನೀಯವೇ. ಈ ಕಟ್ಟಡವೂ ದುರಸ್ತಿಯಾಗಬೇಕಿದ್ದು, ಶಾಸ್ತ್ರೀಯ ಕೇಂದ್ರಕ್ಕೆ ಬೇಕಾದ ಕಟ್ಟಡದ ಒಂದು ಭಾಗವನ್ನು ದುರಸ್ತಿ ಮಾಡಲು ಕೇಂದ್ರ ಸರ್ಕಾರದಿಂದ ₹ 27 ಕೋಟಿ ಮಂಜೂರಾಗಿದೆ ಎಂದು ಸಂಸದರು ಹೇಳಿದ್ದಾರೆ.



ಆದರೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಅಭಿವೃದ್ಧಿಗೆ ಒಂದು ಸ್ಥಾವರಕ್ಕಿಂತಲೂ ಅವಶ್ಯವಾಗಿ ಬೇಕಿರುವುದು ಅಭಿಜಾತ ಕನ್ನಡ ಸಾಹಿತ್ಯದ ಜಂಗಮ ಸ್ವರೂಪಿ ಅಧ್ಯಯನವನ್ನು ಮುಂದುವರಿಸಲು ಮತ್ತು ಅಭಿವೃದ್ಧಿಪಡಿಸಲು ನೆರವಾಗುವ ಸ್ವಾಯತ್ತತೆ. ಕನ್ನಡದ ಮನಸ್ಸುಗಳು ಈ ಸ್ವಾಯತ್ತತೆಗಾಗಿ ಹಲವು ಹೋರಾಟ, ಪ್ರತಿಭಟನೆಗಳನ್ನು ನಡೆಸಿ, ಮನವಿಗಳನ್ನು ಸಲ್ಲಿಸಿದ್ದರೂ ನಮ್ಮ ಜನಪ್ರತಿನಿಧಿಗಳು ತುಟಿಪಿಟಿಕ್ಕೆನ್ನದೆ ಇರುವುದು ಕನ್ನಡದ ದುರಂತ ಅಲ್ಲವೇ?

ಈಗಲೂ ಸಂಸದರು ಒಂದು ಸ್ಥಾವರಕ್ಕಾಗಿ ಶ್ರಮಿಸುತ್ತಿದ್ದಾರೆ. ಆದರೆ ಸ್ವಾಯತ್ತತೆ ಪಡೆಯಲು ಕೇಂದ್ರ ಸರ್ಕಾರದಮೇಲೆಒತ್ತಡತರುವಲಕ್ಷಣಗಳುಕಾಣುತ್ತಿಲ್ಲ. ಸ್ವಾಯತ್ತತೆ ಇಲ್ಲದೆ ಕಟ್ಟಡ ಬದಲಾಗುವುದರಿಂದ ಏನೂ ಸಾಧಿಸಲಾಗುವುದಿಲ್ಲ. ಸ್ವಂತ ಸ್ಥಾವರದಲ್ಲಿ ಕನ್ನಡ ಅಭಿಜಾತ ಸಾಹಿತ್ಯದ ಜಂಗಮವಾಣಿ ಮುನ್ನಡೆಯುವುದಾದರೆ ಈ ಸಂಸ್ಥೆಗಾಗಿ ಹೋರಾಡಿದ ಕನ್ನಡ ಮನಸ್ಸುಗಳ ಶ್ರಮವೂ ಸಾರ್ಥಕವಾದೀತು. ಇದು ರಾಜಕೀಯ ಪ್ರತಿಷ್ಠೆಯ ವಿಚಾರವಲ್ಲ, ಶುದ್ಧ ಸಾಹಿತ್ಯಕ ಅಭಿವ್ಯಕ್ತಿಯ ಪ್ರಶ್ನೆ ಎನ್ನುವುದು ಜನಪ್ರತಿನಿಧಿಗಳಿಗೆ ಅರ್ಥವಾಗಬೇಕಿದೆ.

ಸಮಾಜವಾದಿ, ದಿವಂಗತ ಪ. ಮಲ್ಲೇಶ್ ಅವರ ‘ಕನ್ನಡ ಶಾಸ್ತ್ರೀಯ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ಮೊದಲು ಕೊಡಲಿ ರೀ, ಮರದ ಕೆಳಗೆ ಟೇಬಲ್ಲು ಕುರ್ಚಿ ಹಾಕ್ಕೊಂಡು ಕೆಲಸ ಮಾಡೋಣ’ ಎಂಬ ಬಿರುನುಡಿಗಳು ಸಹಜವಾಗಿಯೇ ನೆನಪಾಗುತ್ತವೆ.

ವಾಚಕರ ವಾಣಿ

ಅಭಿವೃದ್ಧಿ ಪದ ಬಳಕೆಗೆ ಮುನ್ನ...

ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಪ್ರತಿಯೊಬ್ಬರ ಬಾಯಲ್ಲೂ ಅಭಿವೃದ್ಧಿ, ಪ್ರಗತಿ, ವಿಕಾಸ ಎಂಬ ಪದಗಳನ್ನು ಕೇಳುತ್ತಿದ್ದೇವೆ. ಇದನ್ನು ನೋಡಿದರೆ, ನಿಜವಾಗಿಯೂ ಇವರಿಗೆ ಈ ಪದಗಳ ಅರ್ಥ ತಿಳಿದಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಒಂದು ವೇಳೆ ತಿಳಿದಿದ್ದರೆ ಅವರವರ ಆಡಳಿತದ ಅವಧಿಯಲ್ಲಿ ಅವರು ಮಾಡಿದ್ದಾದರೂ ಏನು? ಅಭಿವೃದ್ಧಿ ಎಂಬುದು ಬರೀ ಆಶ್ವಾಸನೆಯೇ ಅಥವಾ ಚುನಾವಣೆ ಗೆಲ್ಲಲು ಇರುವ ಅಸ್ತ್ರವೇ? ನಮ್ಮ ಜನಪ್ರತಿನಿಧಿಗಳು ಚುನಾವಣೆ ವೇಳೆ ಅಭಿವೃದ್ಧಿ ಎಂಬ ಪದವನ್ನು ಬಳಸುವ ಮೊದಲು, ತಾವು ಅಭಿವೃದ್ಧಿಯ ಬಗ್ಗೆ ಮಾತನಾಡಲು ಅರ್ಹರೇ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ.

ದೇವರಾಜ ವನಗೇರಿ, ಬಾಗಲಕೋಟೆ

ಮತದಾನವನ್ನೇ ಮರೆಸುವ ಆಮಿಷ!

ನಾನು ಹಲವಾರು ಚುನಾವಣೆಗಳಲ್ಲಿ ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. 2004ರ ವಿಧಾನಸಭಾ ಚುನಾವಣೆಗಾಗಿ ಹಿಂದಿನ ದಿನ ಹಿರಿಯೂರು ತಾಲ್ಲೂಕಿನ ಒಂದು ಹಳ್ಳಿಗೆ ಸಿಬ್ಬಂದಿಯೊಂದಿಗೆ ತೆರಳಿದಾಗ ಊರಿನ ಜನ ತುಂಬಾ ಆತ್ಮೀಯವಾಗಿ ನಡೆಸಿಕೊಂಡರು. ನಮ್ಮ ಬೇಕು ಬೇಡಗಳನ್ನು ಪಕ್ಷಾತೀತವಾಗಿ ಅರಿತು ಸತ್ಕರಿಸಿದರು. ಒಬ್ಬ ವ್ಯಕ್ತಿಯಂತೂ ಬಹಳಷ್ಟು ಚಟುವಟಿಕೆಯಿಂದ ಓಡಾಡಿಕೊಂಡಿದ್ದ. ‘ಬೆಳಿಗ್ಗೆ ಬಂದು ನಿಮಗೆಲ್ಲ ಕಾಫಿ, ಟೀ ವ್ಯವಸ್ಥೆ ಮಾಡ್ತೇನೆ’ ಎಂದೆಲ್ಲಾ ಹೇಳುತ್ತಿದ್ದ. ಬೆಳಿಗ್ಗೆ ಮತದಾನ ಆರಂಭವಾದರೂ ಆತನ ಪತ್ತೆಯಿಲ್ಲ. ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ ಹಳ್ಳಿಗರೊಬ್ಬರನ್ನು ಆ ವ್ಯಕ್ತಿಯ ಬಗ್ಗೆ ವಿಚಾರಿಸಿದೆ. ಅವರಿಂದ ಬಂದ ಉತ್ತರ ಕೇಳಿ ಆಶ್ಚರ್ಯವಾಯಿತು. ‘ಸಾರ್, ನಿನ್ನೆ ರಾತ್ರಿಯಿಂದ ಕುಡಿಯುವುದಕ್ಕೆ ಶುರು ಮಾಡಿದವ ಬೆಳಿಗ್ಗೆವರೆಗೂ ಕುಡಿದು, ಮೈಮೇಲೆ ಪ್ರಜ್ಞೆಯಿಲ್ಲದೆ ಹೊಲದಲ್ಲಿ ಬಿದ್ದಿದ್ದಾನೆ. ವೋಟ್ ಮಾಡಕ್ಕೆ ಬರಲೂ ಅವನಿಂದಾಗದು’ ಎಂದು ಹೇಳಿದರು.

ಎಲ್ಲ ಪಕ್ಷಗಳವರೂ ಒಬ್ಬರಾದ ಮೇಲೆ ಒಬ್ಬರು ಬಂದು ಆತನಿಗೆ ಕುಡಿಸಿದ್ದರು. ಅಷ್ಟೇ ಅಲ್ಲ, ಆ ಊರಿನ ಕೆಲವರು ಗಂಡು- ಹೆಣ್ಣು ಎಂಬ ಭೇದವಿಲ್ಲದೆ ಕುಡಿದು ಮತಗಟ್ಟೆಗೆ ಮತ ಚಲಾಯಿಸಲು ಬಂದು, ಯಾವ ಪಕ್ಷಕ್ಕೆ ಮತ ಹಾಕಬೇಕೆಂಬುದನ್ನೇ ಮರೆಯುತ್ತಿದ್ದರು. ‘ಚುನಾವಣೆ: ಸಾತ್ವಿಕ ಮಾರ್ಗಕ್ಕೆ ಸೂತ್ರ’ ಎಂಬ ಡಾ. ಜ್ಯೋತಿ ಅವರ ಲೇಖನವನ್ನು (ಪ್ರ.ವಾ., ಫೆ. 15) ಓದಿದಾಗ ಈ ಪ್ರಕರಣ ನೆನಪಾಯಿತು.

ಡಿ.ಬಿ.ನಾಗರಾಜ, ಬೆಂಗಳೂರು

ಇದ್ದಾರೆಯೇ ಮುತ್ಸದ್ದಿ?

ಬಜೆಟ್ಟಿನ ಉತ್ತಮ
ಅಂಶಗಳನ್ನು ಗುರುತಿಸುವ
ವಿರೋಧ ಪಕ್ಷದ
ಒಬ್ಬನಾದರೂ ಮುತ್ಸದ್ದಿ,
ಬಜೆಟ್ಟಿನ ಲೋಪಗಳನ್ನು
ಗುರುತಿಸುವ ಆಡಳಿತ ಪಕ್ಷದ
ಒಬ್ಬನಾದರೂ ಮುತ್ಸದ್ದಿ
ಇಂದು ನಮಗೆ ಕಾಣುವರೇ?

ಟಿ.ವಿ.ನಾಗರಾಜ
ಚಿಕ್ಕಬಳ್ಳಾಪುರ

ಹೆಮ್ಮೆಯೋ ನಾಚಿಕೆಗೇಡೋ?

ಸಂಚಾರ ನಿಯಮ ಉಲ್ಲಂಘನೆಗೆ ವಿಧಿಸಿದ ದಂಡದ ಹಣ ಪಾವತಿಗೆ ಶೇ 50ರಷ್ಟು ರಿಯಾಯಿತಿ ನೀಡಿದ್ದರಿಂದ ಸಂಗ್ರಹವಾದ ದಂಡದ ಮೊತ್ತ ₹ 120 ಕೋಟಿ ಮೀರಿದೆ ಎಂದು ಸಂಚಾರ ಪೊಲೀಸರು ಬೀಗಿದ್ದಾರೆ. ಇದು ಹೆಮ್ಮೆಪಡಬೇಕಾದ ವಿಷಯವೋ ಅಥವಾ ನಾಚಿಕೆಗೇಡಿನದೋ? ಇಷ್ಟೊಂದು ಪ್ರಮಾಣದ ದಂಡ ವಸೂಲಾಗಿದೆಯೆಂದರೆ ಸಂಚಾರ ನಿಯಮಗಳು ಯಾವ ಪರಿ ಉಲ್ಲಂಘನೆಯಾಗಿವೆ ಮತ್ತು ಅವುಗಳನ್ನು ನಿಯಂತ್ರಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದರ್ಥವಲ್ಲವೇ? ಶೇ 50ರಷ್ಟು ರಿಯಾಯಿತಿಯ ಆಫರ್ ನೀಡುವ ಮೂಲಕ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರಿಗೆ ಉತ್ತೇಜನ ನೀಡಿದಂತಾಗಲಿಲ್ಲವೇ? ಹೀಗೆ ಶೇ 50 ರಿಯಾಯಿತಿ ನೀಡುವುದೂ ಒಂದೇ ಸಂಚಾರ ನಿಯಮವನ್ನು ಶೇ 50ರಷ್ಟು ಉಲ್ಲಂಘಿಸಲು ಅನುಮತಿ ನೀಡುವುದೂ ಒಂದೇ ಅಲ್ಲವೆ?

ಹೀಗೆ ಮಾಡುವ ಬದಲು, ಸಂಚಾರ ಪೊಲೀಸರು ರಸ್ತೆಗಿಳಿದು ಸೂಕ್ತ ರೀತಿಯಲ್ಲಿ ಸಂಚಾರ ನಿಯಂತ್ರಣ ಮಾಡಿದ್ದರೆ ದಂಡ ವಿಧಿಸುವ, ರಿಯಾಯಿತಿ ನೀಡುವ, ಕೋಟಿ ವಸೂಲು ಮಾಡಿ ಬೀಗುವ ಪ್ರಸಂಗವೇ ಎದುರಾಗುತ್ತಿರಲಿಲ್ಲ. ದಂಡ ಮತ್ತು ಮದ್ಯದ ಹಣದಿಂದ ಬಂದ ಮೊತ್ತವನ್ನು ಜನೋಪಯೋಗಿ ಕಾರ್ಯಕ್ಕೆ ಬಳಸಿದರೆ ರಾಜ್ಯವೂ ಉದ್ಧಾರ ಆಗದು ಜನರೂ ಉದ್ಧಾರವಾಗರು ಎಂಬ ಜ್ಞಾನೋದಯ ಸರ್ಕಾರಕ್ಕೆ ಆಗುವುದೆಂದು?

ಪಿ.ಜೆ.ರಾಘವೇಂದ್ರ, ಮೈಸೂರು

ಕಾಡುತ್ತಿದೆ ಅಂದು ಜಾತಿ, ಇಂದು ಭಾಷೆ

ಗತಕಾಲದ ಶ್ರೇಣೀಕೃತ ಸಮಾಜದಲ್ಲಿ ಪ್ರಬಲ ಜಾತಿಯವರ ಮನೆಯ ದನಕರುಗಳು ಸತ್ತಾಗ ಅವುಗಳನ್ನು ಹೊತ್ತುತರಲು, ಶೌಚ ಸ್ವಚ್ಛ ಮಾಡಲು ಮತ್ತು ಪಾದರಕ್ಷೆಗಳನ್ನು ಕೊಟ್ಟುಬರುವಂತಹ ಸಂದರ್ಭಗಳಲ್ಲಿ ಮಾತ್ರ ಅಂತಹವರ ಮನೆಗೆ ಶೂದ್ರರು ಹೋಗಲು ಅವಕಾಶವಿತ್ತು. ಹೋಗುವಾಗ ಉಗುಳಲು ಸಣ್ಣ ಮಣ್ಣಿನ ಮಡಕೆ ಮತ್ತು ಹೆಜ್ಜೆ ಕೆಡಿಸಲು ಸೊಂಟಕ್ಕೆ ಹಿಂದೊಂದು ಬಾರಿಗೆ ಕಟ್ಟಿಕೊಂಡು ಹೋಗಬೇಕಿತ್ತು. ಒಯ್ದ ಮಡಕೆಯಲ್ಲಲ್ಲದೆ ಹೊರಗೆ ಉಗುಳಿದರೆ, ಹಿಂದೆ ಕಟ್ಟಿಕೊಂಡ ಬಾರಿಗೆಯಿಂದ ತಮ್ಮ ಹೆಜ್ಜೆಗಳನ್ನು ಕೆಡಿಸದಿದ್ದರೆ ಪ್ರಬಲ ಜಾತಿಯವರ ಓಣಿ ಮೈಲಿಗೆಯಾಯಿತೆಂದು ಶೂದ್ರರಿಗೆ ಉಗ್ರ ಶಿಕ್ಷೆ ಕಾದಿರುತ್ತಿತ್ತು. ಏಕೆ ಈ ಶಿಕ್ಷೆ ಎಂದು ಪ್ರಶ್ನಿಸುವಂತಿರಲಿಲ್ಲ.

ಅದೇ ರೀತಿ ಈಗಲೂ ಎಷ್ಟೋ ಕಡುಬಡವರು ಉಚಿತವಾಗಿ ದೊರೆಯುವ ಸರ್ಕಾರಿ ಶಾಲೆಗಳಲ್ಲೂ ಶಿಕ್ಷಣ ಪಡೆಯಲಾಗದೆ ಬಾಲಕಾರ್ಮಿಕರಾಗಿ ಮುಂದುವರಿಯುತ್ತಿರುವಾಗ, ‘ಇಂಗ್ಲಿಷ್ ಬಡವರಿಗಷ್ಟೇ ಪೆಡಂಭೂತವಾಗಿದೆ’ ಎಂಬ ಹನಮಂತಪ್ಪ ಬಿ. ದಾಸರ ಅವರ ಪತ್ರ (ವಾ.ವಾ., ಫೆ. 16) ಸಮಯೋಚಿತವಾಗಿದೆ ಎನಿಸಿತು. ಅಂದು ಜಾತಿ ಸಮಸ್ಯೆ ಇತ್ತು, ಇಂದು ಭಾಷಾ ಸಮಸ್ಯೆ ಇದೆ. ಒಟ್ಟಿನಲ್ಲಿ ಪಕ್ಷಪಾತ ತಪ್ಪುವಂತಿಲ್ಲ.

ವೀರಭದ್ರಪ್ಪ ಪಗಡದಿನ್ನಿ, ಸಿಂಧನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಡಬ್ಲ್ಯುಎಚ್‌ಒ ಕಳವಳ

ಆಹಾರದಲ್ಲಿ ಕೀಟನಾಶಕ

ಪ್ರಜಾವಾಣಿ ವಾರ್ತೆ



ರಕ್ಷಣೆ ಹೇಗೆ

ಕೀಟನಾಶಕಗಳಿಗೆ ಜನರು ನೇರವಾಗಿ ತೆರೆದುಕೊಳ್ಳುವುದನ್ನು ತಡೆಯಲು ಕೆಲವು ಕ್ರಮಗಳನ್ನು ಡಬ್ಲ್ಯುಎಚ್‌ಒ ವಿವರಿಸಿದೆ

- ಕೀಟನಾಶಕಗಳನ್ನು ಹೊಲ ಅಥವಾ ಕೈತೋಟಗಳಲ್ಲಿ ಸಿಂಪಡಿಸುವಾಗ, ಜನರು ಸಾಧ್ಯವಾದಷ್ಟು ಈ ಪ್ರದೇಶಗಳಿಂದ ದೂರವಿರುವುದು ಒಳಿತು. ಮಾಸ್ಕ್ ಧರಿಸಿ, ಕೈಗಳಿಗೆ ಕೈಗವಸು ಧರಿಸಿ ಔಷಧ ಸಿಂಪಡಿಸಬೇಕು
- ಆಹಾರ ಪದಾರ್ಥ ಮಾರಾಟದ ವೇಳೆ, ರಾಸಾಯನಿಕ ಅಂಶ ಉಳಿಕೆಯ ಗರಿಷ್ಠ ಮಿತಿಯನ್ನು ಪಾಲಿಸುವುದು ಕಡ್ಡಾಯ ಮಾಡಬೇಕು
- ಆಹಾರ ಹಾಗೂ ಹಣ್ಣುಗಳನ್ನು ಚೆನ್ನಾಗಿ ತೊಳೆದು ಸೇವಿಸುವುದರಿಂದ, ಅವುಗಳಲ್ಲಿ ಉಳಿದಿರುವ ರಾಸಾಯನಿಕ ಅಂಶವು ದೇಹ ಸೇರುವುದನ್ನು ತಡೆಯಬಹುದು. ಇದರಿಂದ ಬ್ಯಾಕ್ಟೀರಿಯಾಗಳನ್ನೂ ನಿಯಂತ್ರಿಸಿದಂತೆ ಆಗುತ್ತದೆ
- ರೈತರು ತಮ್ಮ ಬೆಳೆಗಳಿಗೆ ಅಗತ್ಯವಿರುವಷ್ಟು ಕೀಟನಾಶಕಗಳನ್ನು ಮಾತ್ರ ಬಳಸಬೇಕು; ಬಳಕೆಯಲ್ಲಿ ನಿಯಂತ್ರಣ ವಿಧಿಸಿಕೊಳ್ಳಬೇಕು
- ಎಲ್ಲ ದೇಶಗಳು ಕೃಷಿಯಲ್ಲಿ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು

ಜಗತ್ತಿನಾದ್ಯಂತ ಸಾವಿರಕ್ಕೂ ಹೆಚ್ಚು ರೀತಿಯ ಕೀಟನಾಶಕ ಹಾಗೂ ಕಳೆನಾಶಕಗಳನ್ನು ಬಳಕೆ ಮಾಡಲಾಗುತ್ತಿದೆ. ಬೆಳೆಗಳನ್ನು ಕೀಟಗಳಿಂದ ರಕ್ಷಣೆ ಮಾಡಲು ಹಾಗೂ ಕಳೆಗಿಡಗಳನ್ನು ನಾಶ ಮಾಡುವ ಉದ್ದೇಶಕ್ಕೆ ಬಳಕೆಯಾಗುವ ಇವು ಮನುಷ್ಯರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತವೆ.

ಹಳೆಯ ಹಾಗೂ ಅಗ್ಗದ ದರದಲ್ಲಿ ಸಿಗುವ ಕೀಟನಾಶಕದ ಅಂಶಗಳು ಭೂಮಿ ಹಾಗೂ ನೀರಿನಲ್ಲಿ ವರ್ಷಗಳ ಕಾಲ ಉಳಿದುಬಿಡುತ್ತವೆ. ದೀರ್ಘಕಾಲದವರೆಗೆ ಉಳಿಯುವ ಡಿಡಿಟಿ, ಲಿಂಡೇನ್‌ನಂತಹ ರಾಸಾಯನಿಕಗಳನ್ನು 2001ರ ಸ್ಟಾಕ್‌ಹೋಮ್ ಅಧಿವೇಶನದಲ್ಲಿ ನಿಷೇಧಿಸಲಾಗಿತ್ತು. ಇಂತಹ ಹಲವು ರಾಸಾಯನಿಕಗಳ ಉತ್ಪಾದನೆ ಹಾಗೂ ಬಳಕೆಯನ್ನು ಮುಂದುವರಿದ ದೇಶಗಳು ನಿಷೇಧಿಸಿವೆ. ಆದರೆ, ಅಭಿವೃದ್ಧಿಶೀಲ ದೇಶಗಳಲ್ಲಿ ಇವು ಇನ್ನೂ ಬಳಕೆಯಲ್ಲಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕಳವಳ ವ್ಯಕ್ತಪಡಿಸಿದೆ.

ಕೀಟಗಳ ಹಾವಳಿಯಿಂದ ಫಸಲು ರಕ್ಷಿಸುವಲ್ಲಿ ಕೀಟನಾಶಕಗಳು ಮಹತ್ವದ ಪಾತ್ರ ವಹಿಸುತ್ತವೆ. ಬೆಳೆ ನಷ್ಟ ತಪ್ಪಿ, ಇಳುವರಿ ಹೆಚ್ಚುತ್ತದೆ. ಆಹಾರ ಕೊರತೆಯನ್ನು ಎದುರಿಸುತ್ತಿರುವ ಹಲವು ದೇಶಗಳ ಸಮಸ್ಯೆ ಪರಿಹರಿಸುವಲ್ಲಿ ಕೀಟನಾಶಕಗಳು ಮಹತ್ವದ ಪಾತ್ರ ವಹಿಸುತ್ತವೆ. ಆದರೆ, ಈ ಆಹಾರವನ್ನು ಬಳಕೆ ಮಾಡುವ ಗ್ರಾಹಕರನ್ನು ಕೀಟನಾಶಕಗಳ ಅಪಾಯದಿಂದ ರಕ್ಷಿಸುವುದೂ ಅಷ್ಟೇ ಮುಖ್ಯ ಎನ್ನುತ್ತದೆ ಡಬ್ಲ್ಯುಎಚ್‌ಒ.

ಆಹಾರದಲ್ಲಿ ರಾಸಾಯನಿಕ ಅಂಶದ ನಿರ್ವಹಣೆ

ಅಹಾರ ಪದಾರ್ಥವೊಂದರಲ್ಲಿ ಗರಿಷ್ಠ ಎಷ್ಟು ಪ್ರಮಾಣದ ರಾಸಾಯನಿಕ ಉಳಿದಿದ್ದರೆ ಅದು ಬಳಕೆಗೆ ಯೋಗ್ಯ ಎಂಬುದನ್ನು ಸ್ವತಂತ್ರ, ಅಂತರರಾಷ್ಟ್ರೀಯ ತಜ್ಞರ ತಂಡವಾದ ಜೆಎಂಪಿಆರ್ ಮೌಲ್ಯಮಾಪನ ಮಾಡಿದೆ. ಸರ್ಕಾರಗಳು ಹಾಗೂ ಅಂತರರಾಷ್ಟ್ರೀಯ ಆಹಾರ ಗುಣಮಟ್ಟವನ್ನು ನಿಗದಿಪಡಿಸುವ 'ಕೊಡೆಕ್ಸ್ ಅಲಿಮೆಂಟರಿಯಸ್ ಕಮಿಷನ್' ಇದನ್ನು ಒಪ್ಪಿಕೊಂಡಿವೆ. ಕೊಡೆಕ್ಸ್ ಮಾನದಂಡವನ್ನು ಅಂತರರಾಷ್ಟ್ರೀಯ ಮಟ್ಟದ ಆಹಾರ ಪದಾರ್ಥಗಳ ವ್ಯಾಪಾರದ ಸಂದರ್ಭದಲ್ಲಿ ಪಾಲಿಸಲಾಗುತ್ತದೆ. ಕೊಡೆಕ್ಸ್ ಗುಣಮಟ್ಟ ಪಾಲಿಸಿ ಉತ್ಪಾದಿಸಿದ ಪದಾರ್ಥಗಳು ಸುರಕ್ಷಿತ ಎಂಬ ನಂಬಿಕೆಯಿದೆ. ನೂರಕ್ಕೂ ಹೆಚ್ಚು ಕೀಟನಾಶಕ ಹಾಗೂ ಬೆಳೆನಾಶಕಗಳು ಕೊಡೆಕ್ಸ್ ಮಾನದಂಡದ ಪರಿಧಿಯಲ್ಲಿದ್ದು, ಅವುಗಳ ಸೇವನೆ ಹಾನಿಕರವಲ್ಲ ಎಂದು ಪರಿಗಣಿಸಲಾಗಿದೆ. ಕೀಟನಾಶಕ ನಿರ್ವಹಣೆಯ ಅಂತರರಾಷ್ಟ್ರೀಯ ನಿಯಮಗಳ ಪರಿಷ್ಕೃತ ಆವೃತ್ತಿ ಪ್ರಕಟವಾಗಿದ್ದು, ಆಹಾರ ಉತ್ಪಾದನೆಯಿಂದ ಬಳಕೆಯವರೆಗೆ ಕೃಷಿಕರು, ಜನರು, ಸರ್ಕಾರಗಳು, ಖಾಸಗಿ ವಲಯದವರು ಪಾಲಿಸಬೇಕಾದ ಕೀಟನಾಶಕ ನಿರ್ವಹಣಾ ನಿಯಮಗಳನ್ನು ವಿವರಿಸಲಾಗಿದೆ.

ಕೀಟಗಳಿಗೆ ಮಾರಕವಾಗಿರುವ ಕೀಟನಾಶಕಗಳು ಮನುಷ್ಯನ ಆರೋಗ್ಯದ ಮೇಲೂ ತೀವ್ರ ಹಾಗೂ ದೀರ್ಘ ಕಾಲೀನ ಪರಿಣಾಮ ಉಂಟು ಮಾಡಬಹುದು. ಜಮೀನುಗಳಲ್ಲಿ ರಾಸಾಯನಿಕ ಔಷಧಗಳನ್ನು ಬೆಳೆಗಳಿಗೆ ಸಿಂಪಡಿಸುವ ಕೃಷಿಕರು ಹಾಗೂ ಕಾರ್ಮಿಕರು ನೇರ ಸಂತ್ರಸ್ತರು. ಇವರ ಮೇಲೆ ರಾಸಾಯನಿಕಗಳು ಹೆಚ್ಚು ಪರಿಣಾಮ ಬೀರುತ್ತವೆ. ಬೆಳೆಗಳಿಗೆ ಸಿಂಪಡಣೆಯಾದ ಔಷಧವು ಫಸಲಿನಲ್ಲೂ ಸೇರುತ್ತದೆ. ಇಂತಹ ಔಷಧ ಸಿಂಪಡಿಸಿದ ಆಹಾರ ಪದಾರ್ಥಗಳನ್ನು ಬಳಸುವ ಗ್ರಾಹಕರಿಗೂ ಅದು ತೊಂದರೆ ನೀಡುತ್ತದೆ.

ಆಹಾರ ಪದಾರ್ಥಗಳನ್ನು ಬಳಸುವ ಗ್ರಾಹಕರ ಮೇಲೆ ಕೀಟನಾಶಕಗಳು ವ್ಯತಿರಿಕ್ತ ಪರಿಣಾಮ ಉಂಟು ಮಾಡುವುದನ್ನು ತಡೆಯುವುದು ಅತಿಮುಖ್ಯ. ಆಹಾರ ಪದಾರ್ಥವೊಂದರಲ್ಲಿ ರಾಸಾಯನಿಕ ಅಂಶದ ಉಳಿಕೆಯ ಗರಿಷ್ಠ ಮಿತಿ ಎಷ್ಟಿದ್ದರೆ ಅದು ಸುರಕ್ಷಿತ ಎಂಬುದನ್ನು ಮೌಲ್ಯಮಾಪನ ಮಾಡಲಾಗಿದೆ. ಅಂತರರಾಷ್ಟ್ರೀಯ ಒಪ್ಪಿತ ನಿಯಮಗಳನ್ನು ಅನುಷ್ಠಾನ ಮಾಡಿ ಪಾಲಿಸಬೇಕು ಎಂಬುದಕ್ಕೆ ಡಬ್ಲ್ಯುಎಚ್‌ಒ ಒತ್ತು ಚೆಲ್ಲಿದೆ.

ರಾಸಾಯನಿಕಗಳು ಎಲ್ಲಿ ಬಳಕೆಯಾಗುತ್ತವೆ ಎಂಬುದರ ಮೇಲೆ ಅವುಗಳಲ್ಲಿನ ವಿಷಕಾರಿ ಅಂಶ ನಿರ್ಧಾರವಾಗುತ್ತದೆ. ಕಳೆನಾಶಕಗಳಿಗೆ ಹೋಲಿಸಿದರೆ, ಕೀಟನಾಶಕಗಳು ಮನುಷ್ಯರ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ರಾಸಾಯನಿಕದ ಅಂಶ ಎಷ್ಟಿದೆ ಎಂಬುದರ ಮೇಲೆ ಅದು ಮನುಷ್ಯರ ಮೇಲೆ ಬೀರುವ ಪರಿಣಾಮದ ತೀವ್ರತೆ ನಿರ್ಧಾರವಾಗುತ್ತದೆ. ಅದು ಯಾವ ಸ್ವರೂಪದಲ್ಲಿ ಮನುಷ್ಯದ ದೇಹವನ್ನು ಸೇರುತ್ತದೆ ಎಂಬುದರ ಮೇಲೂ ಪರಿಣಾಮದ ತೀವ್ರತೆಯ ಮಟ್ಟ ಅವಲಂಬಿಸಿರುತ್ತದೆ.

ನಿರಂತರ ನಿಗಾ ಮುಖ್ಯ: ಡಿಎನ್‌ಎಗೆ ಹಾನಿ ಮಾಡಬಲ್ಲ ಮತ್ತು ಕ್ಯಾನ್ಸರ್‌ಗೆ ಕಾರಣವಾಗಬಲ್ಲ ಅಂಶಗಳನ್ನು ಹೊಂದಿರುವ ರಾಸಾಯನಿಕಗಳನ್ನು ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರದ ಆಹಾರ ಪದಾರ್ಥಗಳಿಗೆ ಬಳಸುವಂತಿಲ್ಲ. ಒಂದು ಹಂತದವರೆಗೆ ಇವು ಸುರಕ್ಷಿತವಾಗಿದ್ದು, ರಾಸಾಯನಿಕ ಪ್ರಮಾಣ ಹೆಚ್ಚಾದಂತೆಲ್ಲಾ, ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಇಂತಹ ಕೀಟನಾಶಕಗಳು ಸಾವಿಗೂ ಕಾರಣವಾಗುತ್ತವೆ. ದೀರ್ಘಕಾಲದವರೆಗೆ ಪರಿಸರದಲ್ಲಿ ಉಳಿದುಬಿಡುವ ಇಂತಹ ರಾಸಾಯನಿಕಗಳ ಉತ್ಪಾದನೆ, ವಿತರಣೆ ಹಾಗೂ ಬಳಕೆಗೆ ಕಠಿಣ ನಿರ್ಬಂಧ ಇಂದಿನ ಅಗತ್ಯ. ಆಹಾರ ಪದಾರ್ಥವೊಂದರಲ್ಲಿ ಉಳಿದುಕೊಂಡಿರುವ ರಾಸಾಯನಿಕದ ಅಂಶಗಳ ಮೇಲೆ ನಿರಂತರವಾಗಿ ನಿಗಾ ಇಡಬೇಕಾದುದು ಅಗತ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕೀಟನಾಶಕ: ಇಳಿಯುತ್ತಿದೆ ತೂಕ, ಏರುತ್ತಿದೆ ಬಳಕೆ

ಬಿಕರಿಯಾದ ಕೀಟನಾಶಕ (ಟನ್‌ಗಳಲ್ಲಿ)

ವರ್ಷ	ಟನ್‌ಗಳು
2017-18	50,186
2018-19	48,004
2019-20	43,962
2020-21	50,109
2021-22	46,363

ತೂಕದ ಲೆಕ್ಕಾಚಾರದಲ್ಲಿ ನೋಡಿದರೆ ಭಾರತದಲ್ಲಿ ಕೀಟನಾಶಕಗಳ ಬಳಕೆ ಇಳಿಕೆಯತ್ತ ಸಾಗುತ್ತಿದೆ ಎಂದು ಭಾಸವಾಗುತ್ತದೆ. ಆದರೆ, ವಾಸ್ತವಾಂಶ ಇದಕ್ಕಿಂತ ಭಿನ್ನವಾಗಿದೆ. ತೂಕದ ಲೆಕ್ಕಾಚಾರದಲ್ಲಷ್ಟೇ ಕೀಟನಾಶಕಗಳ ಬಳಕೆ ಕಡಿಮೆಯಾಗಿದೆ. ಆದರೆ, ಕೀಟನಾಶಕಗಳನ್ನು ಬಳಸುತ್ತಿರುವ ಕೃಷಿ ಜಮೀನಿನ ವಿಸ್ತೀರ್ಣ ಮತ್ತು ಕೀಟನಾಶಕಗಳ ವಹಿವಾಟು ಏರಿಕೆಯತ್ತ ಸಾಗಿದೆ.

2017-18ಕ್ಕೆ ಹೋಲಿಸಿದರೆ 2021-22ರ ವೇಳೆಗೆ ಕೀಟನಾಶಕಗಳ ಬಳಕೆ ಕ್ರಮೇಣ ಕಡಿಮೆಯಾಗಿದೆ. ಇದಕ್ಕೆ ಹಲವು ಕಾರಣಗಳನ್ನು ಗುರುತಿಸಲಾಗಿದೆ. ಕೀಟನಾಶಕಗಳ ರಚನೆಯ ಸ್ವರೂಪದಲ್ಲಿ ಹಲವು ವಿಧಗಳಿವೆ. ಘನ ಸ್ವರೂಪ ಮತ್ತು ದ್ರವ ಸ್ವರೂಪದಲ್ಲಿ ಇವು ದೊರೆಯುತ್ತವೆ. ಕೆಲವು ಕೀಟನಾಶಕಗಳು ನ್ಯಾನೊ ಸ್ವರೂಪದಲ್ಲೂ ದೊರೆಯುತ್ತವೆ. ಈ ಮೊದಲು ದೇಶದಲ್ಲಿ ಘನ ಸ್ವರೂಪದ ಕೀಟನಾಶಕಗಳ ಬಳಕೆ ವ್ಯಾಪಕವಾಗಿತ್ತು. ಹೀಗಾಗಿ ಕೀಟನಾಶಗಳ ಬಳಕೆ ಪ್ರಮಾಣ ಹೆಚ್ಚು ಇತ್ತು. ನಂತರದ ವರ್ಷಗಳಲ್ಲಿ ದ್ರವ ಸ್ವರೂಪದ ಮತ್ತು ನ್ಯಾನೊ ತಂತ್ರಜ್ಞಾನದ ಕೀಟನಾಶಕಗಳ ಬಳಕೆ ಹೆಚ್ಚಾಗಿದೆ.

ಒಂದು ನಿಗದಿತ ವಿಸ್ತೀರ್ಣದ ಜಮೀನಿಗೆ ಘನ ಸ್ವರೂಪದ ಕೀಟನಾಶಕ ಬಳಸುವುದಾದರೆ, ಅಗತ್ಯವಿರುವ ಕೀಟನಾಶಕದ ತೂಕ ಪರಿಮಾಣ ಹೆಚ್ಚು. ಆದರೆ, ಅಷ್ಟೇ ವಿಸ್ತೀರ್ಣದ ಜಮೀನಿಗೆ ದ್ರವ ಸ್ವರೂಪದ ಮತ್ತು ನ್ಯಾನೊ ತಂತ್ರಜ್ಞಾನದ ಕೀಟನಾಶಕಗಳನ್ನು ಬಳಸುವುದಾದರೆ ಅದಕ್ಕೆ ಬೇಕಾಗುವ ಕೀಟನಾಶಕಗಳ ಪರಿಮಾಣ ಕಡಿಮೆ. ಈಚಿನ ವರ್ಷಗಳಲ್ಲಿ ದ್ರವ ಮತ್ತು ನ್ಯಾನೊ ತಂತ್ರಜ್ಞಾನದ ಕೀಟನಾಶಕಗಳ ಬಳಕೆ ಹೆಚ್ಚುತ್ತಿದೆ. ಒಂದು ಕೆ.ಜಿ. ತೂಕದಷ್ಟು ಘನ ಕೀಟನಾಶಕವು ಕೊಲ್ಲುವಷ್ಟು ಕೀಟಗಳನ್ನು, 10 ಮಿಲಿ ಲೀಟರ್‌ನಷ್ಟು ನ್ಯಾನೊ ಕೀಟನಾಶಕ ಕೊಲ್ಲುತ್ತದೆ. ಇವುಗಳ ಸಾಗಾಟ ಮತ್ತು ಬಳಕೆ ಸುಲಭ. ಜತೆಗೆ ಇವುಗಳ ಬಳಕೆಗೆ ತಗಲುವ ವೆಚ್ಚವೂ ಕಡಿಮೆ. ಹೀಗಾಗಿ ರೈತರು ಇಂತಹ ಕೀಟನಾಶಕಗಳ ಬಳಕೆಯತ್ತ ವಾಲುತ್ತಿದ್ದಾರೆ. ನಾಲ್ಕಾರು ಲೀಟರ್ ಅಥವಾ ಹತ್ತಾರು ಕೆ.ಜಿ. ಕೀಟನಾಶಕ ಕೊಳ್ಳುವ ಬದಲಿಗೆ 10 ಮಿಲಿಲೀಟರ್‌ನ ಒಂದೆರಡು ಪೊಟ್ಟಣಗಳು ಸಾಕಾಗುತ್ತವೆ. ಹೀಗಾಗಿಯೇ ದೇಶದಲ್ಲಿ ಮಾರಾಟವಾಗುತ್ತಿರುವ ಕೀಟನಾಶಕಗಳ ಒಟ್ಟು ತೂಕ ಕಡಿಮೆಯಾಗಿದೆ. ಆದರೆ, ಭೂಮಿ ಸೇರುತ್ತಿರುವ ಕೀಟನಾಶಕಗಳ ಪ್ರಮಾಣ ಹೆಚ್ಚುತ್ತಲೇ ಇದೆ.

ನ್ಯಾನೊ ತಂತ್ರಜ್ಞಾನದ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಕೀಟನಾಶಕಗಳ ಪ್ರತಿ ಅಣುವೂ ಅತ್ಯಂತ ಸಾಂದ್ರತೆಯಿಂದ ಕೂಡಿರುತ್ತದೆ. ನೀರು ಮತ್ತು ವಾತಾವರಣದ ಸಂಪರ್ಕಕ್ಕೆ ಬಂದಾಗ ಆ ಅಣುಗಳು ವಿದಳನ ಕ್ರಿಯೆಗೆ ಒಳಗಾಗುತ್ತವೆ. ಒಂದು ಅಣುವೇ ಹಲವು ಅಣುಗಳಾಗಿ ವಿದಳನವಾಗುತ್ತವೆ. ಆ ಎಲ್ಲಾ ಅಣುಗಳು ಮತ್ತಷ್ಟು ಅಣುಗಳಾಗುತ್ತವೆ. ಆ ಮತ್ತಷ್ಟು ಅಣುಗಳಿಂದ ಇನ್ನೂ ಹಲವು ಅಣುಗಳು ಸೃಷ್ಟಿಯಾಗುತ್ತವೆ. ಹೀಗೆ ಹಲವು ಹಂತಗಳವರೆಗೆ ವಿದಳನ ಕ್ರಿಯೆ ನಡೆಯುತ್ತದೆ. ನಿರ್ದಿಷ್ಟ ಸಮಯದೊಳಗೆ ವಿದಳನ ಕ್ರಿಯೆಯು ಗರಿಷ್ಠಮಟ್ಟ ಮುಟ್ಟುತ್ತದೆ. ಹೀಗಾಗಿ 100 ಎಂ.ಎಲ್.ನಷ್ಟು ನ್ಯಾನೊ ಕೀಟನಾಶಕವನ್ನು ಬಳಸಿಕೊಂಡು, ಸಾವಿರಾರು ಲೀಟರ್‌ನಷ್ಟು ಕೀಟನಾಶಕ ಸಿದ್ಧಪಡಿಸಲು ಸಾಧ್ಯ. ಈ ಸ್ವರೂಪದ ಕೀಟನಾಶಕಗಳ ಬಳಕೆ ತೀವ್ರಮಟ್ಟದಲ್ಲಿ ಏರಿಕೆಯಾಗಿರುವುದರಿಂದಲೇ ದೇಶದಲ್ಲಿ ಮಾರಾಟವಾಗುತ್ತಿರುವ ಕೀಟನಾಶಕಗಳ ಒಟ್ಟು ಪ್ರಮಾಣ ಕಡಿಮೆಯಾಗಿದೆ. ಆದರೆ, ಭೂಮಿ ಸೇರುತ್ತಿರುವ ಕೀಟನಾಶಕಗಳ ಪ್ರಮಾಣ ಏರಿಕೆಯಾಗಿದೆ.

ಕೀಟಗಳು ಸಾಯುವುದು ಹೀಗೆ...

ಈಗ ಭಾರತದಲ್ಲಿ ನ್ಯಾನೊ ಕೀಟನಾಶಕಗಳ ಬಳಕೆಯೇ ವ್ಯಾಪಕವಾಗಿದೆ. ನ್ಯಾನೊ ಕೀಟನಾಶಕಗಳಲ್ಲೂ ಹಲವು ವಿಧಗಳಿವೆ. ಮುಖ್ಯವಾಗಿ ಅವುಗಳನ್ನು ದ್ರವರೂಪದ ಕೀಟನಾಶಕ ಮತ್ತು ಘನ ರೂಪದ ಕೀಟನಾಶಕ ಎಂದು ವರ್ಗೀಕರಿಸಲಾಗುತ್ತದೆ. ಇವುಗಳಲ್ಲಿ ದ್ರವರೂಪದ ಕೀಟನಾಶಕಗಳ ಬಳಕೆಯೇ ಹೆಚ್ಚು.

ದ್ರವ ರೂಪದ ನ್ಯಾನೊ ಕೀಟನಾಶಕಗಳು ವಿಷವೇ ಆಗಿರುತ್ತದೆ. ನೀರು ಮತ್ತು ವಾತಾವರಣದ ಸಂಪರ್ಕಕ್ಕೆ ಬಂದ ನಂತರ ಇವು ಸಸಿಗಳ ಮೇಲೆ ಮತ್ತು ಮಣ್ಣಿನಲ್ಲಿಯೇ ಉಳಿಯುತ್ತವೆ. ಸಸಿ ಮತ್ತು ಮಣ್ಣಿನ ಸಂಪರ್ಕಕ್ಕೆ ಬಂದ ಕೀಟಗಳಿಗೆ ವಿಷ ಅಂಟುತ್ತದೆ. ವಿಷ ಸೇವಿಸಿದ ತಕ್ಷಣ ಅಥವಾ ಕೆಲವೇ ನಿಮಿಷಗಳಲ್ಲಿ ಕೀಟಗಳು ಸಾಯುತ್ತವೆ.



ಘನರೂಪದ ನ್ಯಾನೊ ಕೀಟನಾಶಕಗಳ ಕೆಲಸ ಮಾಡುವ ಸ್ವರೂಪ ಭಿನ್ನವಾದುದು. ಇಂತಹ ಕೀಟನಾಶಕಗಳ ತಯಾರಿಕೆಯಲ್ಲಿ ಭಾರಲೋಹಗಳನ್ನು ಮತ್ತು ಕೆಲವು ವಿಷಗಳ ಮಿಶ್ರಣವನ್ನು ಬಳಸಲಾಗುತ್ತದೆ. ಆದರೆ, ಜಮೀನಿನಲ್ಲಿ ಬಳಕೆ ವೇಳೆ ಇವು ವಿಷದಂತೆ ಕೆಲಸ ಮಾಡುವುದಿಲ್ಲ. ಇವುಗಳನ್ನು ನೀರಿನೊಂದಿಗೆ ಮಿಶ್ರಣ ಮಾಡಿ ಸಿಂಪಡಿಸಿದ ನಂತರ, ಸಸಿಗಳು ಮತ್ತು ಮಣ್ಣಿನ ಮೇಲ್ಮೈನಲ್ಲಿ ಇವು ಉಳಿಯುತ್ತವೆ. ಕೀಟಗಳು ಇವುಗಳ ಸಂಪರ್ಕಕ್ಕೆ ಬಂದಾಗ, ಕೀಟಗಳ ಉಸಿರಾಟದ ನಳಿಕೆ, ಬಾಯಿ, ಕಣ್ಣುಗಳಿಗೆ ಇವು ಅಂಟಿಕೊಳ್ಳುತ್ತವೆ. ಏನನ್ನೂ ತಿನ್ನಲಾಗದೆ ಅಥವಾ ಉಸಿರಾಡಲು ಸಾಧ್ಯವಾಗದೆ ಕೀಟಗಳು ಸಾಯುತ್ತವೆ.

ದೀರ್ಘಾವಧಿ ಪರಿಣಾಮ ತಿಳಿದಿಲ್ಲ: ನ್ಯಾನೊ ಕೀಟನಾಶಕಗಳ ಬಳಕೆ ಹೆಚ್ಚುತ್ತಿದ್ದರೂ, ದೀರ್ಘಾವಧಿಯಲ್ಲಿ ಅವುಗಳಿಂದಾಗುವ ದುಷ್ಪರಿಣಾಮಗಳು ಏನು ಎಂಬುದರ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಸಾಂಪ್ರದಾಯಿಕ ಕೀಟನಾಶಕಗಳು ಹೇಗೆ ದುಷ್ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ಜನರಲ್ಲಿ ಮಾಹಿತಿ ಇದೆ. ಹೀಗಾಗಿ ಆ ಪರಿಣಾಮಗಳನ್ನು ಕಡಿಮೆ ಮಾಡುವ ಪದ್ಧತಿಗಳು ರೂಢಿಯಲ್ಲಿವೆ.

ಆದರೆ, 'ನ್ಯಾನೊ ಕೀಟನಾಶಕಗಳು ದೀರ್ಘಾವಧಿಯಲ್ಲಿ ಮಣ್ಣಿನ ಮೇಲ್ಮೈನಲ್ಲಿ ಉಳಿಯುತ್ತವೆಯೇ ಅಥವಾ ಮಣ್ಣಿನಾಳ ಸೇರುತ್ತವೆಯೇ ಎಂಬುದು ತಿಳಿದಿಲ್ಲ. ಜತೆಗೆ, ಸಮೀಪದ ಜಲಮೂಲಗಳನ್ನು ಸೇರುತ್ತವೆಯೇ ಎಂಬುದರ ಬಗ್ಗೆಯೂ ಮಾಹಿತಿ ಇಲ್ಲ. ಅಲ್ಲದೆ, ಸಸ್ಯ ಪ್ರಬೇಧಗಳ ಮೇಲೆ ಇವು ದೀರ್ಘಾವಧಿಯಲ್ಲಿ ಬೀರುವ ಪರಿಣಾಮಗಳೇನು ಎಂಬುದೂ ತಿಳಿದಿಲ್ಲ' ಎನ್ನುತ್ತದೆ ನ್ಯಾನೊ ಕೀಟನಾಶಕಗಳ ಮೇಲೆ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು ನಡೆಸಿದ ಅಧ್ಯಯನ ವರದಿ.

ಆಧಾರ: ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ 'ನ್ಯಾನೊ ಕೀಟನಾಶಕಗಳ ಅಧ್ಯಯನ ವರದಿ-2019', ಭಾರತೀಯ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಸಸಿ ಸಂರಕ್ಷಣೆ ಮತ್ತು ಸಂಗ್ರಹ ನಿರ್ದೇಶನಾಲಯದ ವಾರ್ಷಿಕ ವರದಿಗಳು, ಡಬ್ಲ್ಯುಎಚ್‌ಒ ಜಾಲತಾಣ

ಸಿನಿ ಬಿಟ್ಸ್

ಮಧುರ ಗಾನದ ಪ್ರೇಮ 'ಡ್ರಾಮಾ'



ಸುಪ್ರೀತಾ ಸತ್ಯನಾರಾಯಣ

ಪ್ರೀತಿ ಒಂದು ಸುಂದರ ಅನುಭವ. ನಂಬಿಕೆಯೇ ಆಧಾರ. ಇವೆರಡರ ನಡುವಿನ ಪಯಣದಲ್ಲಿ ಭಾವ–ಭಾವನೆಗಳ ತೊಳಲಾಟವನ್ನು ಹೇಳಿದೆ 'ಮೆಲೊಡಿ ಡ್ರಾಮಾ'. 'ನಿನ್ನ ಕಥೆ– ನನ್ನ ಜೊತೆ' ಶೀರ್ಷಿಕೆಯ ಅಡಿಬರಹ.

ಮೆಲೊಡಿ... ಹೆಸರಿಗೆ ತಕ್ಕಂತೆ ಮಧುರ ಹಾಡುಗಳೇ ಈ ಚಿತ್ರದ ಜೀವಾಳ. ಸೋನು ನಿಗಮ್, ಕೈಲಾಶ್ ಖೇರ್ ಹಾಗೂ ಪಲಕ್ ಮುಚ್ಚಲ್ ಕಂಠದಲ್ಲಿ ಈ ಚಿತ್ರದ ಹಾಡುಗಳು ಮೂಡಿಬಂದಿವೆ.

ಸತ್ಯ ಈ ಚಿತ್ರದ ನಾಯಕ. ಸುಪ್ರೀತಾ ಸತ್ಯನಾರಾಯಣ ನಾಯಕಿ. ಖ್ಯಾತ ನಟ ಚೇತನ್ ಚಂದ್ರ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರಂಗಾಯಣ ರಘು, ಅನು ಪ್ರಭಾಕರ್, ರಾಜೇಶ್ ನಟರಂಗ, ಬಲ ರಾಜವಾಡಿ, ಲಕ್ಷ್ಮಿ ಸಿದ್ದಯ್ಯ, ಅಶ್ವಿನ್ ರಾವ್ ಪಲ್ಲಕ್ಕಿ, ಅಶ್ವಿನ್ ಹಾಸನ್, ರಂಜನ್ ಸನತ್, ಬಿಗ್ ಬಾಸ್ ವಿನೋದ್ ತಾರಾ ಬಳಗದಲ್ಲಿದ್ದಾರೆ.

ಮಂಜು ಕಾರ್ತಿಕ್ ಜಿ. ಈ ಚಿತ್ರದ ನಿರ್ದೇಶಕರು. ಬೆಂಗಳೂರು, ಮಂಡ್ಯ, ಮೈಸೂರು, ಕುಶಾಲನಗರ, ಮಡಿಕೇರಿ, ಶಿವಮೊಗ್ಗ, ಮಂಗಳೂರು, ಕುಂದಾಪುರ ಹಾಗೂ ವಿಜಯಪುರಗಳಲ್ಲಿ 45 ದಿನ ಚಿತ್ರೀಕರಣ ನಡೆದಿದೆ. ಪ್ರೈಮ್ ಸ್ಟಾರ್ ಸ್ಟುಡಿಯೊ ಈ ಚಿತ್ರ ನಿರ್ಮಿಸಿದೆ.

ಕಿರಣ್ ರವೀಂದ್ರನಾಥ್ ಅವರ ಸಂಗೀತ ನಿರ್ದೇಶನವಿದೆ. ಜಯಂತ್ ಕಾಯ್ಕಿಣಿ, ವಿ.ನಾಗೇಂದ್ರ ಪ್ರಸಾದ್, ಹೃದಯ ಶಿವ, ಧನಂಜಯ್ ರಂಜನ್ ಗೀತರಚನೆ ಮಾಡಿದ್ದಾರೆ. ಮನು ಡಿ.ಬಿ. ಹಳ್ಳಿ ಛಾಯಾಗ್ರಹಣ ಹಾಗೂ ಮುನಿರಾಜ್ ಅವರ ಸಂಕಲನವಿದೆ. ನಂಜುಂಡ ರೆಡ್ಡಿ ಚಿತ್ರದ ನಿರ್ಮಾಪಕರು.

ಮರದ ಬೇರುಗಳೇ ಶೀರ್ಷಿಕೆ

ಕಾಡಿನ ಮರಗಳ ಬೇರುಗಳು ಚಿತ್ರದ ಶೀರ್ಷಿಕೆಯಾಗುತ್ತವೆಯಾ? ಹೌದೆನ್ನುತ್ತದೆ 'ಒಂದಂಕೆ ಕಾಡು' ಚಿತ್ರತಂಡ.

ಉತ್ತರ ಕನ್ನಡದ ಕಾಡುಗಳಲ್ಲಿ ಎಲ್ಲಾ ಮರಗಳ ಬೇರುಗಳು ಕನ್ನಡದ ಒಂದಂಕೆಯ ಹಾಗೆ ಇರುತ್ತವೆ. ಅದಕ್ಕೆ 'ಒಂದಂಕೆ ಕಾಡು' ಎಂಬ ಹೆಸರು ಇಡಲಾಗಿದೆಯಂತೆ. ಕಾರವಾರ, ದಾಂಡೇಲಿ, ಶಿರಸಿ, ಯಲ್ಲಾಪುರ, ಗೋವಾ ಗಡಿ ಭಾಗದಲ್ಲಿ ಸುಮಾರು 35 ದಿನ ಚಿತ್ರೀಕರಣ ನಡೆದಿದೆ. ಈ ಚಿತ್ರ ಮಾರ್ಚ್ 3ರಂದು ಬಿಡುಗಡೆಯಾಗಲಿದೆ. ಇದೇ ಚಿತ್ರ ತೆಲುಗಿನಲ್ಲಿ 'ಅನಗನಗಾ ಒಕ ಅಡವಿ' ಹೆಸರಿನಲ್ಲಿ ಬಿಡುಗಡೆಯಾಗಲಿದೆ.



ಸೋನಿ, ರಥರ್ವ

ಸಸ್ಪೆನ್ಸ್, ಥ್ರಿಲ್ಲರ್ ಕಥೆಯಿದು. ರಾಮಚಂದ್ರ ವೈದ್ಯ ನಿರ್ದೇಶನದಲ್ಲಿ ಮೂಡಿಬಂದಿದೆ. ರಥರ್ವ, ಸೋನಿ, ಮಧು ಹೆಗ್ಡೆ, ಸುಮಂತ್ ಭಟ್, ಪ್ರೇರಣಾ ಕಂಬಂ ಮುಖ್ಯ ಭೂಮಿಕೆಯಲ್ಲಿದ್ದಾರೆ.

ನಾಯಕ ನಟ ರಥರ್ವ ಪ್ರಕಾರ, 'ಚಿತ್ರದಲ್ಲಿ ರಿಷಿ ಪಾತ್ರದಲ್ಲಿ ನಾನು ನಟಿಸಿದ್ದೇನೆ. ರಿಷಿ ಬೆಂಗಳೂರು ಹುಡುಗ. ಕೆಲಸ ಹಾಗೂ ಹೆಂಡತಿ ಇಷ್ಟೇ ಅವನಿಗೆ ಜೀವನ. ಇಬ್ಬರೂ ಒಂದಂಕೆ ಕಾಡಿಗೆ ಹೋದಾಗ ಏನೇನಾಯಿತು ಅನ್ನುವುದೇ ಚಿತ್ರದ ಒಂದು ಸಾಲಿನ ಕಥೆ' ಎಂದಿದ್ದಾರೆ.

ಸೋನಿ ಈ ಚಿತ್ರದ ನಾಯಕಿ. ಅವರು ಮೈಸೂರಿನವರು. ರಂಗಭೂಮಿ ಕಲಾವಿದೆ. ನಂದಿನಿ ಹೆಸರಿನ ಪಾತ್ರ ಮಾಡಿದ್ದಾರೆ.

ಗಣೇಶ್ ಹೆಗ್ಡೆ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ, ಟಿ.ಜಿ. ನಂದೀಶ್ ಸಂಭಾಷಣೆ, ಮಧು ಹೆಗ್ಡೆ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಹೃದಯಶಿವ, ಡಾ.ಉಮೇಶ್ ಸಾಹಿತ್ಯವಿದೆ. ಅನುರಾಧಾ ಭಟ್, ಕಪಿಲ್ ನಾಯರ್, ಕೀರ್ತನ್ ಹೊಳ್ಳ ಹಿನ್ನೆಲೆ ಗಾಯನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ನಿಗಿನಿಗಿ ಉರಿಯುವ ಸೂರ್ಯನ ಒಂದು ಭಾಗ ತುಂಡಾಗಿದ್ದು, ಉತ್ತರ ಧ್ರುವ ಭಾಗದಲ್ಲಿ ಅದು ಸೂರ್ಯನಿಂದ ಬೇರ್ಪಟ್ಟಿದೆ' ಎಂಬ ಸುದ್ದಿ ಕೆಲವು ದಿನಗಳ ಹಿಂದೆ ಕೆಲವು ಪ್ರಮುಖ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿ ಅಚ್ಚರಿ ಮೂಡಿಸಿತ್ತು. ಭಾರಿ ಪ್ರಮಾಣದ ಸೌರಜ್ವಾಲೆಗಳ ಕಾರಣ, ಭೂಮಿಯ ಸಂವಹನ ಉಪಗ್ರಹಗಳ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದೆ ಎಂದೂ ವರದಿ ಮಾಡಿದ್ದವು. ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾದ ಜೇಮ್ಸ್ ವೆಬ್ ಟೆಲಿಸ್ಕೋಪ್ ಈ ಚಿತ್ರವನ್ನು ಸೆರೆಹಿಡಿದಿದೆ ಎಂದೂ ಬರೆಯಲಾಗಿತ್ತು. ಸೂರ್ಯನ ಭಾಗವೊಂದು ಬೇರ್ಪಡಲು ಸಾಧ್ಯವೇ ಎಂದು ಸಾಮಾಜಿಕ ಜಾಲತಾಣಗಳ ಬಳಕೆದಾರರು ಅಚ್ಚರಿಪಟ್ಟಿದ್ದರು. ಆದರೆ ಈ ಸುದ್ದಿ ಸುಳ್ಳು.

ಹವಾಮಾನ ತಜ್ಞೆ ತಮಿತಾ ಸ್ಕೊವ್ ಎಂಬವರ ಟ್ವೀಟ್ ಆಧರಿಸಿ ಮಾಧ್ಯಮಗಳು ಪ್ರಕಟಿಸಿದ್ದ ಈ ಸುದ್ದಿ ಆಧಾರರಹಿತ. ನಾಸಾ ಅಥವಾ ಜೇಮ್ಸ್ ವೆಬ್ ಟೆಲಿಸ್ಕೋಪ್ ಜಾಲತಾಣಗಳಲ್ಲಿ ಈ ಕುರಿತ ಯಾವುದೇ ಸುದ್ದಿ ಇಲ್ಲ. ಪಿಟಿಐ, ರಾಯಿಟರ್ಸ್ ಸೇರಿದಂತೆ ಯಾವ ಸುದ್ದಿ ಸಂಸ್ಥೆಯೂ ಈ ಸುದ್ದಿಯನ್ನು ಪ್ರಕಟಿಸಿಲ್ಲ. ತಮಿತಾ ಸ್ಕೊವ್ ಅವರ ಟ್ವೀಟ್ ಪರಿಶೀಲಿಸಿದಾಗ, ಪೆಟ್ರಾನ್ ಎಂಬ ಜಾಲತಾಣದಲ್ಲಿ ಅವರು ನೀಡಿರುವ ಸ್ಪಷ್ಟನೆಯ ಲಿಂಕ್ ಸಿಕ್ಕಿತು. ತಮ್ಮ ಟ್ವೀಟ್ ಅನ್ನು ಸುದ್ದಿಮಾಧ್ಯಮಗಳು ತಿರುಚಿ ಅತಿರಂಜಿತವಾಗಿ ಬರೆದಿವೆ ಎಂದು ಅವರು ಹೇಳಿದ್ದಾರೆ. ಇದೊಂದು ಸಹಜ ಸೌರವಿದ್ಯಮಾನ ಎಂದು ಅವರು ವಿವರಿಸಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 20, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಮಾವಾಸ್ಯೆ ಗಂ. 22-36, ನಕ್ಷತ್ರ: ಧನಿಷ್ಠಾ ಗಂ. 11-46 ಯೋಗ: ಪರಿಘ ಗಂ. 11-03, ಕರಣ: ನಾಗವಾನ್ ಗಂ. 12-36, ಕುಂಭ ಮಾಸದ 07 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30-09-00
ಸೂರ್ಯೋದಯ: 06-55 ಸೂರ್ಯಾಸ್ತ: 06-34
ಮುಸ್ಲಿಂ ದಿನಾಂಕ: 28 ರಜಬ್
ಅದೃಷ್ಟ ಸಂಖ್ಯೆ: 7, 12

ಮೇಷ: ಪರಿಶ್ರಮ, ಬುದ್ಧಿವಂತಿಕೆಯ ಜತೆ ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ. ಆಲಸ್ಯತನವನ್ನು ದೂರಮಾಡಿ. ಅಶ್ವತ್ಥ ವೃಕ್ಷದ ಪ್ರದಕ್ಷಿಣೆಯು ಪುಣ್ಯ ಸಂಪಾದನೆಗೆ ದಾರಿಯಾಗುವುದು ಮತ್ತು ಶುಭ ತರಲಿದೆ.

ವೃಷಭ: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಆರ್ಥಿಕವಾಗಿ ಮುಂದುವರಿಯಲು ಸಹಾಯವಾಗುತ್ತದೆ. ಹಂತ ಹಂತವಾಗಿ ಸುಧಾರಿಸಲಿರುವ ಪರಿಸ್ಥಿತಿಯು ಹೆಚ್ಚಿನ ನಿರಾಶೆ ತರದು.

ಮಿಥುನ: ಪೋಲಿಸ್ ವೃತ್ತಿಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ. ಧೈರ್ಯದಿಂದ ಮತ್ತು ಅಧಿಕ ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗಿ. ಆಂಜನೇಯನ ಸೇವೆಯಿಂದ ಶುಭ.

ಕರ್ಕಾಟಕ: ಖಾಸಗಿ ಗುಮಾಸ್ತ ಕೆಲಸದಲ್ಲಿದ್ದವರಿಗೆ ಬೇಜವಾಬ್ದಾರಿತನದಿಂದ ಪೂರ್ಣ ವಿರಾಮ ಸಿಗುವಂತಾಗಲಿದೆ. ಪುಸ್ತಕ ಮುದ್ರಣಾಲಯದವರಿಗೆ ಅಥವಾ ಪುಸ್ತಕ ವ್ಯಾಪಾರಿಗಳಿಗೆ ಒಳ್ಳೆಯ ಲಾಭವಾಗುವ ಸಂಭವವಿದೆ.

ಸಿಂಹ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ಜೀವನದ ದಿನಗಳು ನೆಮ್ಮದಿದಾಯಕವಾಗಲಿದೆ. ಪುಟ್ಟದೊಂದು ಪ್ರಯಾಣ ಮತ್ತಷ್ಟು ಹುರುಪು ತುಂಬಲಿದೆ.

ಕನ್ಯಾ: ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವ ಸಂಭವವಿದೆ. ಬಂಧು ಮಿತ್ರರೊಂದಿಗೆ ಸಂತೋಷ ವಿಷಯಗಳನ್ನು ಹಂಚಿಕೊಳ್ಳುವುದು ಈ ದಿನ ಸರಿಯಲ್ಲ. ನೂತನ ಮನೆ ಕೊಳ್ಳುವ ವಿಷಯ ಇತ್ಯರ್ಥವಾಗುವುದು.

ತುಲಾ: ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ಬಂದಿದೆ. ಆದರೂ ಮುನ್ನೆಚ್ಚರಿಕೆ ಅಗತ್ಯ. ಆಡಿಟಿಂಗ್ ಕೆಲಸಗಳಿಂದ ಹೆಚ್ಚಿನ ವರಮಾನಗಳಿಸುವಿರಿ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಹಳದಿ ವರ್ಣ ಶುಭದಾಯಕ.

ವೃಶ್ಚಿಕ: ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಗೊಳ್ಳುವ ಸಂಭವವಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಲಭಿಸುವುದು.

ಧನು: ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವುದು ಉತ್ತಮ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿಬರುತ್ತದೆ. ದಿನಸಿ ವ್ಯಾಪಾರಸ್ಥರಿಗೆ ಶುಭದಿನ.

ಮಕರ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ಎಲ್ಲಾ ಸಮಸ್ಯೆಗಳಿಗೂ ಸೂಕ್ತವಾದ ಪರಿಹಾರ ಸಿಗಲಿದೆ.ಸೋಲನ್ನು ಬಯಸುವವರ ಸಂಖ್ಯೆಯು ಇಳಿಮುಖವನ್ನು ಹೊಂದುವುದು, ಎಲ್ಲರೂ ಹಿತೈಷಿಗಳಾಗುವರು.

ಕುಂಭ: ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಣಿಕೆಯಲ್ಲಿ ತೊಂದರೆಗಳಾಗಬಹುದು. ಈ ದಿನ ನೀವು ಲಾಭ ನಷ್ಟದ ಮಿಶ್ರ ಫಲ ಕಾಣುವಿರಿ.

ಮೀನ: ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮತ್ತು ಮಾರಾಟ ಲಾಭದಾಯಕವೆನಿಸುವುದು. ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಉನ್ನತ ಶ್ರೇಣಿ ಲಭಿಸುವುದು. ಗಂಟಲು ಬೇನೆ ಎದುರಾದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಮ ಕಲೆ

ಕಲೆಗಳಲಿ ಪರಮಕಲೆ ಜೀವನದ ಲಲಿತಕಲೆ |
ಕಲಿಸಲದನಳವಲ್ಲ ಬಾಹ್ಯಬೋಧನೆಯಿಂ ||
ಒಲಿದೊಲಿಸಿಕೊಳುವ ತೌಕಿಕನಯದ ಸೊಗಸ ನೀಂ |
ತಿಳಿವುದೊಳಹದದಿಂದ – ಮಂಕುತಿಮ್ಮ || 825 ||

ಪದ-ಅರ್ಥ: ಕಲಿಸದನಳವಲ್ಲ = ಕಲಿಸಲು + ಅದನು + ಅಳವಲ್ಲ(ಸಾಧ್ಯವಿಲ್ಲ), ಒಲಿದೊಲಿಸಿಕೊಳುವ = ಒಲಿದು + ಒಲಿಸಿಕೊಳುವ, ತಿಳಿವುದೊಳಹದದಿಂದ = ತಿಳಿವುದು + ಒಳಹದದಿಂದ.

ವಾಚ್ಯಾರ್ಥ: ಎಲ್ಲ ಕಲೆಗಳಲ್ಲಿ ಅತ್ಯಂತ ಮುಖ್ಯವಾದದ್ದು ಜೀವನದ ಲಲಿತ ಕಥೆ. ಹೊರಗಡೆಯಿಂದ ಬೋಧನೆಮಾಡಿ ಅದನ್ನು ಕಲಿಸಲು ಸಾಧ್ಯವಿಲ್ಲ. ಒಲಿಸುವ, ಒಲಿಸಿಕೊಳ್ಳುವ ಬದುಕಿನ ನಯವನ್ನು, ಸೊಗಸನ್ನು ನೀನು ಆಂತರ್ಯದ ಅನುಭವದಿಂದಲೇ ತಿಳಿದುಕೊಳ್ಳಬೇಕು.


ವಿವರಣೆ: ಬದುಕು ಎಂದರೇನು ಎಂಬ ಪ್ರಶ್ನೆಗೆ ನೂರು ಉತ್ತರಗಳು ದೊರೆತಾವು. ಕೆಲವರು ಅದನ್ನು ನೀರಮೇಲಿನ ಗುಳ್ಳೆ ಎಂದು ಕರೆದರೆ ಮತ್ತೊಬ್ಬರು ಅದನ್ನು ಸಾಧನೆಗೆ ಭಗವಂತ ನೀಡಿದ ಬಹುದೊಡ್ಡ ಅವಕಾಶ ಎಂದಾರು.ಬದುಕೊಂದು ಸುಂದರ ಅನುಭವಗಳ ಸರಮಾಲೆ. ಪ್ರತಿಕ್ಷಣ, ಪ್ರತಿದಿನ ಅತ್ಯಮೂಲ್ಯವಾದದ್ದು. ಕಳೆದು ಹೋದ ಗಳಿಗೆ-ಮತ್ತೊಮ್ಮೆ ದೊರೆಯಲಾರದು. ಅದಕ್ಕೇ ಬದುಕು ನವನವೀನವಾದದ್ದು. ಅಷ್ಟೇ ಅನಿಶ್ಚಿತವಾದದ್ದು ಹೌದು. ಈಅನಿಶ್ಚಿತತೆಯೇ ಬದುಕಿನ ಸೊಗಸು. ಅದೆಷ್ಟು ಶತಶತಮಾಗಳ ಪ್ರಯೋಗಗಳಿಂದ ಸೃಷ್ಟಿ ಈ ಮಾನವ ದೇಹವನ್ನು ನಿರ್ಮಿಸಿದೆ! ಇದೊಂದು ಅದ್ಭುತ ಯಂತ್ರ. ಅದು ಹೇಗೆ ಕೆಲಸಮಾಡುತ್ತದೆ ಎಂಬುದನ್ನು ಕೊಂಚವಾಗಿ ಅರಿಯಲೂ ವೈದ್ಯರು ಇನ್ನೂ ಹೆಣಗುತ್ತಿದ್ದಾರೆ. ಆದ್ದರಿಂದ ಈಬದುಕನ್ನು ಪ್ರತಿಕ್ಷಣ ಸಂಪೂರ್ಣವಾಗಿ ಅನುಭವಿಸುವುದೇ ಒಂದುಅತ್ಯಂತ ಶ್ರೇಷ್ಠವಾದ ಕಲೆ. ಕಷ್ಟವಿದೆ, ನೋವಿದೆ, ನಿರಾಸೆ, ದುಃಖ, ಸಾವು ಇವೆಲ್ಲ ಇವೆ. ಆದರೆ ಅವುಗಳ ಮಧ್ಯೆ ಸಂತೋಷದಿಂದ, ತೃಪ್ತಿಯಿಂದ ಬದುಕುವ ಕಲೆಯನ್ನು ಕಗ್ಗ ಪರಮಕಲೆ ಎನ್ನುತ್ತದೆ.ಈ ಪರಮಕಲೆಯನ್ನು ಕಲಿಸುವವರು ಯಾರು? ಎಲ್ಲಿಸಿಕ್ಕೀತು ಈ ಕಲೆಯನ್ನು ಸಿದ್ಧಿಸಿಕೊಳ್ಳುವ ಜಾಗ? ಕಗ್ಗವೇ ಉತ್ತರಿಸುತ್ತದೆ. ಹೊರಗಿನ ಬೋಧನೆಯಿಂದ, ಪಾಠದಿಂದ ಇದನ್ನು ಕಲಿಸುವುದು ಅಸಾಧ್ಯ. ಜಗತ್ತನ್ನು ಒಲಿದು, ಜಗತ್ತಿನಿಂದ ಒಲಿಸಿಕೊಳ್ಳುವ ಸೊಗಸನ್ನು ನಾವು ನಮ್ಮ ಆತ್ಮಸಂಸ್ಕಾರದಲ್ಲಿಯೇ ಕಂಡುಕೊಳ್ಳಬೇಕು. ಇದಕ್ಕೆ ಸಂಸಾರ ತಾಪ, ಸಾಹಿತ್ಯ, ಸಂಗೀತ, ಕಲೆ, ಧರ್ಮಶ್ರದ್ಧೆ, ದೇಶಪ್ರೇಮ, ಇವೆಲ್ಲ ಕಾರಣವಾಗಬಹುದು. ಇವುಗಳೆಲ್ಲದರ ಸರಿಯಾದಪರಿಪಾಕದಿಂದ ಮನಸ್ಸಿನ ಹದ ನಿರ್ಮಾಣವಾಗುತ್ತದೆ. ಆ ಹದ ಬದುಕನ್ನು ನೋಡುವ, ಅನುಭವಿಸುವ ಕಲೆಯನ್ನುತಿಳಿಸುತ್ತದೆ. ಇತ್ತೀಚೆಗೆ ನಮ್ಮನ್ನು ಭೌತಿಕವಾಗಿ ಅಗಲಿದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಮ್ಮ "ಅಂತಿಮ ಅಭಿವಂದನ ಪತ್ರ" ದಲ್ಲಿ ಬರೆದು ಮಾತು ಈ ಕಗ್ಗಕ್ಕೆ ಹೊಸ ಧ್ವನಿಯನ್ನು ನೀಡುತ್ತದೆ."ಬದುಕು ಅನುಭವಗಳ ಪ್ರವಾಹ. ಅದರ ಸಿರಿವಂತಿಕೆಯು ವಿಶ್ವಚಿಂತನೆ ಮತ್ತು ಸತ್ಯ ಶೋಧನೆಗಳಿಂದ. ಅದರ ಸೌಂದರ್ಯವು ರಾಗದ್ವೇಷರಹಿತವಾದ ಹಾಗೂ ಅಸೀಮಿತವಾದ ಸದ್ಭಾವದಿಂದ, ಅದನ್ನು ಸುಭಗ ಹಾಗೂ ಸಮೃದ್ಧಗೊಳಿಸುವುದೇ ಸಾಧನೆ". ಇಂಥ ಅದ್ಭುತ ಜೀವನವನ್ನು ನಡೆಸುವ ಕಲೆಯನ್ನು ಒಳಹದದಿಂದ ತಿಳಿಯಬೇಕು.

ಪದಬಂಧ 5236

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶದ ಒಂದು ವಿಭಾಗ (3)
4.ದೈನ್ಯಕ್ಕೆ ಒಳಗಾಗಿರುವೆನೆಂಬಭಾವ (4)
6.ಗೌರವ ಸೂಚಕವಾಗಿ ಕೈಮುಗಿದು ತಲೆಬಾಗುವುದು (4)
7.ರಜದಲ್ಲಿ ಖರೀದಿಸಿರುವ ಬೆಳ್ಳಿ (3)
10.ಬಿಡದಿ ಹತ್ತಿರವಿರುವ ಹೆಂಡತಿ (3)
12.ಇದಿನ್ನೂ ಎಳೆ ಮಗು (4)
15.ಲಯ ನಡುವಿದ್ದಾಗ ಕಾಣಿಸಿದ ಶ್ರೀಗಂಧ (4)
16.ಪಿತ್ತಕೋಶ ಇಲ್ಲದ (3)

ಮೇಲಿಂದ ಕೆಳಕ್ಕೆ
1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಹೊಳೆಯ ದಡವಿದು (4)
3.ವನದ ಕೊನೆಗಿರುವ ಮನೆ (3)
5.ಪುರ ಪ್ರವೇಶಿಸಿರುವಾಗ ಸಿಕ್ಕಿರುವ ಬಿಡುವು (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಮರದೊಳಗೆ ಚಲುವಾದುದು ಕಂಡಿದೆ (4)
11.ಎಲ್ಲದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
13.ಒಳ್ಳೆಯ ಬುದ್ಧಿ (3)
14.ಪ್ರಾಮಾಣಿಕತೆ ಇಲ್ಲಿ ಕಾಣುತ್ತಿದೆ (3)



5235ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಭೃಥಸ್ನಾನ
4.ಗುರಿಕಾರ 5.ಸನದು
7.ಬುದ್ಧುದ 10.ರಿವಾಜು
11.ಕರುಳು 13.ನಕ್ಷಂಚರ
15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ
1.ಅಗಸ 2.ನಗು
3.ಪರದೇಶಿ 6.ದುರಾಚಾರಿ
7.ಬುರುಜು 8.ದಣಾಯಕ
9.ಬಡನಡು 12.ಳುರಕೆ
14.ರವಿ

ಸುಡೊಕು 5622

			3		8	7		2
							8	
9					2			6
							6	
	2	6	9		7			
	4		6		1		7	5
			1					7
8		7					9	1
1	9		8		6	4		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5621 ಸುಡೊಕು


1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

2022ರ ಡಿಸೆಂಬರ್ ತ್ರೈಮಾಸಿಕ ಅವಧಿ

ಬ್ಯಾಂಕ್‌ಗಳ ಬಡ್ಡಿ ವರಮಾನ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್‌ಗಳ ನಿವ್ವಳ ಬಡ್ಡಿ ವರಮಾನವು (ಎನ್‌ಐಐ) 2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 25.5ರಷ್ಟು ದಾಖಲೆಯ ಹೆಚ್ಚಳ ಕಂಡಿದ್ದು ₹ 1.78 ಲಕ್ಷ ಕೋಟಿಗೆ ತಲುಪಿದೆ ಎಂದು ಕೇರ್ ರೇಟಿಂಗ್ಸ್ ಸಂಸ್ಥೆ ಹೇಳಿದೆ.

ನಿವ್ವಳ ಬಡ್ಡಿ ಲಾಭವು (ಎನ್‌ಐಎಂ) ಶೇ 0.17ರಷ್ಟು ಹೆಚ್ಚಾಗಿ ಶೇ 3.28ಕ್ಕೆ ತಲುಪಿದೆ. ಇದರಿಂದಾಗಿ ಬ್ಯಾಂಕ್‌ಗಳಿಗೆ ಮುಂಗಡದಿಂದ ಹೆಚ್ಚಿನ ಗಳಿಕೆ ಬಂದಿದೆ. ಬ್ಯಾಂಕ್‌ಗಳು ಹಾಲಿ ಇರುವ ಸಾಲಗಳ ಮೇಲಿನ ಬಡ್ಡಿದರವನ್ನು ತ್ವರಿತ ಪ್ರಮಾಣದಲ್ಲಿ ಹೆಚ್ಚಳ ಮಾಡುವ ಜೊತೆಗೆ ಹೊಸ ಸಾಲಗಳ ಬಡ್ಡಿದ-ರವನ್ನೂ ಏರಿಕೆ ಮಾಡಿವೆ. ಆದರೆ, ಠೇವಣಿಗಳ ಮೇಲಿನ ಬಡ್ಡಿದರದಲ್ಲಿ



ಹೆಚ್ಚಿನ ಬದಲಾವಣೆ ಮಾಡಿಲ್ಲ. ಹೀಗಾಗಿ ಡಿಸೆಂಬರ್ ತ್ರೈಮಾಸಿಕದಲ್ಲಿ ಎನ್‌ಐಎಂ ಹೆಚ್ಚಾಗಿದೆ ಎಂದು ಕೇರ್ ರೇಟಿಂಗ್ಸ್‌ನ ಹಿರಿಯ ನಿರ್ದೇಶಕ ಸಂಜಯ್ ಅಗರ್ವಾಲ್ ತಿಳಿಸಿದ್ದಾರೆ.

ಖಾಸಗಿ ವಲಯದ ಬ್ಯಾಂಕ್‌ಗಳ ಕಾರ್ಯಾಚರಣೆ ಸಾಮರ್ಥ್ಯ ಉತ್ತಮ ಆಗಿರುವುದರಿಂದ ಬ್ಯಾಂಕಿಂಗ್ ವಲಯದ ಒಟ್ಟು ಎನ್‌ಐಎಂನಲ್ಲಿ ಅವುಗಳ ಪಾಲು ಹೆಚ್ಚಿನದ್ದಾಗಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಬ್ಯಾಂಕ್‌ಗಳ ಎನ್‌ಐಎಂ ಶೇ 0.15ರಷ್ಟು ಹೆಚ್ಚಾಗಿ ಶೇ 4.03ಕ್ಕೆ ತಲುಪಿದೆ. ಇದೇ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಎನ್‌ಐಎಂ ಶೇ 0.17ರಷ್ಟು ಹೆಚ್ಚಾಗಿ ಶೇ 2.85ಕ್ಕೆ ಏರಿಕೆ ಆಗಿದೆ ಎಂದು ಅವರು ಹೇಳಿದ್ದಾರೆ.

ನಿವ್ವಳ ಬಡ್ಡಿ ವರಮಾನ ಅಥವಾ ಎನ್‌ಐಐ ಬ್ಯಾಂಕ್‌ಗಳ ವರಮಾನದ ಪ್ರಮುಖ ಮೂಲವಾಗಿದೆ. ಮುಂಗಡಗಳ ಮೇಲೆ ಗಳಿಸಿರುವ ಬಡ್ಡಿ ಮತ್ತು ಠೇವಣಿದಾರರು ಅಥವಾ ನಿಧಿಗಳಿಗೆ ಪಾವತಿಸುವ ಬಡ್ಡಿಯ ನಡುವಿನ ವ್ಯತ್ಯಾಸವೇ ಎನ್‌ಐಐ.

ಎಫ್‌ಪಿಐ: ₹7,666 ಕೋಟಿ ಮೌಲ್ಯದ ಷೇರು ಖರೀದಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಫೆಬ್ರುವರಿ 17ಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ₹ 7,666 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಈ ಮೂಲಕ ಅವರು ಮತ್ತೆ ಭಾರತದ ಷೇರುಪೇಟೆಗಳತ್ತ ಮುಖಮಾಡಿರುವಂತೆ ಕಾಣುತ್ತಿದೆ.

ಫೆಬ್ರುವರಿ 6ರಿಂದ 10ರವರೆಗಿನ ವಹಿವಾಟಿನಲ್ಲಿ ₹ 3,920 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು.

ದೇಶದ ಷೇರುಪೇಟೆಗಳು 'ಅದಾನಿ' ಷೇರುಗಳ ಮೌಲ್ಯ ಕುಸಿತದಿಂದ ಚೇತರಿಕೆ ಕಂಡುಕೊಳ್ಳಲು ಆರಂಭಿಸಿವೆ. ಇದರಿಂದಾಗಿ ಎಫ್‌ಪಿಐ ಹೂಡಿಕೆಯಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಜನವರಿ ಆರಂಭದಿಂದ ಕಂಡುಬಂದ ಷೇರುಗಳ ಮಾರಾಟ ಪ್ರಕ್ರಿಯೆಯು ಕೊನೆಗೊಂಡಂತೆ ಕಾಣುತ್ತಿದೆ. ಆದರೆ, ಮತ್ತೊಮ್ಮೆ ಹೆಚ್ಚಿನ ಮಟ್ಟದಲ್ಲಿ ಮಾರಾಟಕ್ಕೆ ಮುಂದಾಗುವ ಸಾಧ್ಯತೆ ಇದೆ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷದಲ್ಲಿ ಈವರೆಗೆ ನಿಫ್ಟಿ–50 ಸೂಚ್ಯಂಕವು ಶೇ 1.4ರಷ್ಟು ಇಳಿಕೆ ಕಂಡಿದೆ. ಇನ್ನೊಂದೆಡೆ ತೈವಾನ್ ಇಂಡೆಕ್ಸ್ ಶೇ 8.3ರಷ್ಟು ಮತ್ತು ಶಾಂಘೈ ಕಂಪೋಸಿಟ್ ಶೇ 3.4ರಷ್ಟು ಏರಿಕೆ ಆಗಿದೆ ಎಂದು ವಿಜಯಕುಮಾರ್ ಮಾಹಿತಿ ನೀಡಿದ್ದಾರೆ.

ವಿದೇಶಿ ಹೂಡಿಕೆದಾರರು ವಾಹನ ಮತ್ತು ವಾಹನ ಬಿಡಿಭಾಗಗಳು ಹಾಗೂ ನಿರ್ಮಾಣ ವಲಯದ ಷೇರುಗಳನ್ನು ಖರೀದಿಸುತ್ತಿದ್ದು, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಿಗೆ ಸಂಬಂಧಿಸಿದ ವಲಯಗಳ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಎಫ್‌ಐಐ ಹೂಡಿಕೆ ವಿವರ (ಕೋಟಿಗಳಲ್ಲಿ)



₹30,858
ಷೇರುಪೇಟೆಯಿಂದ ಬಂಡವಾಳ ಹಿಂತೆಗೆತ

₹5,944
ಸಾಲಪತ್ರ ಮಾರುಕಟ್ಟೆಯಲ್ಲಿ ಹೂಡಿಕೆ (2023ರಲ್ಲಿ ಫೆಬ್ರುವರಿ 10ರವರೆಗೆ)

'ಶೇ 80 ಶೋಷಿತರಿಗೆ ಸಿಗದ ಸವಲತ್ತು'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದರೂ ದೇಶದ ಶೇ 80ರಷ್ಟು ಶೋಷಿತ ಸಮುದಾಯಗಳಿಗೆ ಅವಶ್ಯಕ ಸವಲತ್ತುಗಳು ತಲುಪಿಲ್ಲ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಬೇಸರ ವ್ಯಕ್ತಪ-ಡಿಸಿದರು.

ನಗರದಲ್ಲಿ ಭಾನುವಾರ ಆದಿ ಜಾಂಬವ ಕಲ್ಯಾಣ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಮುದಾಯ ಭವನ ಹಾಗೂ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಉದ್ಘಾಟಿಸಿ ಮಾತನಾಡಿದ ಅವರು, 'ಮಾದಿಗ ಸಮಾಜದ ಶೇ 85ರಷ್ಟು ಜನರಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಡಲು ಆಗುತ್ತಿಲ್ಲ. ಸಾಕಷ್ಟು ಬಜೆಟ್‌ಗಳು ಮಂಡನೆ ಆಗಿದ್ದರೂ ಅವರ ಅವಶ್ಯಕತೆಗಳನ್ನು ಪೂರೈಸಲು ಆಗಲಿಲ್ಲ' ಎಂದು ವಿಷಾದ ವ್ಯಕ್ತಪಡಿ-ಸಿದರು.

'ಇವತ್ತಿನ ರಾಜಕಾರಣದ ಒತ್ತಡದಲ್ಲಿ ನಾನು, ಗೋವಿಂದ ಕಾರಜೋಳ, ಎಚ್.ಆಂಜನೇಯ ಸೇರಿ ಎಡಗೈ ಸಮುದಾಯದವರು ರಾಜಕೀಯದಲ್ಲಿ ಇರಬೇಕೋ ಬೇಡವೋ ಎನ್ನುವಂತೆ ಆಗಿದೆ' ಎಂದು ಹೇಳಿದರು.

'ನಮ್ಮ ಶಕ್ತಿ, ಮಾನಸಿಕತೆಯ ವಿರುದ್ಧವಾಗಿ ಹೋಗುವ ರಾಜಕಾರಣ, ರಾಜಕೀಯ ಪಕ್ಷ, ಗುಂಪನ್ನು ಎದುರಿಸಲು ಒಗ್ಗಟ್ಟಿನ ತೀರ್ಮಾನ ಮಾಡಬೇಕು. ಸಮಾಜದ ವಿರುದ್ಧ ತೀರ್ಮಾನ ತೆಗೆದುಕೊಳ್ಳುವ ಯಾವುದೇ ರಾಜಕೀಯ ಪಕ್ಷದ ಮಂತ್ರಿಯಾದರೂ ಸರಿ, ಅವರನ್ನು ಸಮಾಜದಿಂದ ದೂರ ಇಡುತ್ತೇವೆ ಎನ್ನುವಂತಹ ಮನೋಭಾವ ಬೆಳೆಯಬೇಕು' ಎಂದರು.

ವಿಶೇಷ ಎಫ್.ಡಿ: ಪರಿಗಣಿಸಬೇಕೇ?



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ರೆಪೊ ದರ ಹೆಚ್ಚಳಕ್ಕೆ ಅನುಗುಣವಾಗಿ ಬ್ಯಾಂಕ್‌ಗಳು ನಿಶ್ಚಿತ ಠೇವಣಿ (ಎಫ್.ಡಿ) ದರ ಹೆಚ್ಚಳ ಮಾಡುತ್ತಿವೆ. ಕೆಲವು ಬ್ಯಾಂಕ್‌ಗಳು ಗ್ರಾಹಕರನ್ನು ಸೆಳೆಯಲು ವಿಶೇಷ ನಿಶ್ಚಿತ ಠೇವಣಿ ಯೋಜನೆಗಳನ್ನು ರೂಪಿಸಿ ಅವುಗಳಿಗೆ ಹೆಚ್ಚಿನ ಬಡ್ಡಿ ನೀಡುತ್ತಿವೆ. ಸಣ್ಣ ಪ್ರಮಾಣದ ಬ್ಯಾಂಕ್‌ಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮುಂಚೂಣಿ ಬ್ಯಾಂಕ್‌ಗಳಿಗಿಂತ ಹೆಚ್ಚಿನ ಬಡ್ಡಿ ಒದಗಿಸುತ್ತಿವೆ. ಈ ಹೊತ್ತಿನಲ್ಲಿ ನಿಶ್ಚಿತ ಠೇವಣಿಯಲ್ಲಿ ಹಣ ತೊಡಗಿಸುವ ಮುನ್ನ ಗಮನಿಸಬೇಕಾದ ಕೆಲವು ಅಂಶಗಳ ಬಗ್ಗೆ ವಿವರವಾದ ಮಾಹಿತಿ ಇಲ್ಲಿದೆ.

1. ವಿಶೇಷ ಎಫ್.ಡಿ ಬಡ್ಡಿ ಲಾಭ ಅರಿಯಿರಿ: 'ಸ್ವಲ್ಪ ರಿಸ್ಕ್ ಇದ್ದರೂ ತೊಂದರೆ ಇಲ್ಲ, ಹೆಚ್ಚಿನ ಲಾಭಾಂಶ ಬೇಕು' ಎಂದಾದಲ್ಲಿ ಷೇರು ಮಾರುಕಟ್ಟೆ ಅಥವಾ ಮ್ಯೂಚುವಲ್ ಫಂಡ್ ಹೂಡಿಕೆ ಉತ್ತಮ. ಆದರೆ ಹೆಚ್ಚು ರಿಸ್ಕ್ ಇಲ್ಲದ ಹೂಡಿಕೆ ಬೇಕು ಎನ್ನುವವರಿಗೆ ನಿಶ್ಚಿತ ಠೇವಣಿ ಒಳ್ಳೆಯ ಆಯ್ಕೆ. ಒಂದು ವರ್ಷ, ಎರಡು ವರ್ಷ, ಮೂರು ವರ್ಷಗಳ ಎಫ್.ಡಿ ಮೊರೆ ಹೋಗುವ ಬದಲು ಗ್ರಾಹಕರು ಬ್ಯಾಂಕ್‌ಗಳು ರೂಪಿಸುವ ವಿಶೇಷ ರೀತಿಯ ನಿಶ್ಚಿತ ಠೇವಣಿ ಹೂಡಿಕೆಗಳನ್ನು ಖಂಡಿತವಾಗಿಯೂ ಪರಿಗಣಿಸಬಹುದು. ಏಕೆಂದರೆ ಇಂತಹ ಎಫ್.ಡಿ ಹೂಡಿಕೆಗಳಲ್ಲಿ ಬಡ್ಡಿ ಜಾಸ್ತಿ ಇರುತ್ತದೆ.

ಉದಾಹರಣೆಗೆ ಡಿಬಿಎಸ್ ಬ್ಯಾಂಕ್ 600 ದಿನಗಳ (1 ವರ್ಷ 7 ತಿಂಗಳು) ಎಫ್.ಡಿ ಹೂಡಿಕೆಗೆ ಶೇ 7.25ರಷ್ಟು ಬಡ್ಡಿ ನೀಡುತ್ತಿದೆ. ಇದೇ ಬ್ಯಾಂಕ್ 601ರಿಂದ 730 ದಿನಗಳ (2 ವರ್ಷದೊಳಗಿನ) ಒಳಗಿನ ಎಫ್.ಡಿ.ಗೆ ಶೇ 6.5ರಷ್ಟು ಬಡ್ಡಿ ಕೊಡುತ್ತಿದೆ. ನಿಮ್ಮ ಎಫ್.ಡಿ ಹೂಡಿಕೆ ಅವಧಿಯಲ್ಲಿ ಇಂತಹ ಸಣ್ಣ ಮಾರ್ಪಾಡುಗಳಿಂದ ಹೆಚ್ಚು ಲಾಭವಾಗುತ್ತದೆ ಎಂದರೆ ಅನುಕೂಲವಲ್ಲವೇ?

2. ಅವಧಿಗೂ ಮುನ್ನ ನಗದೀಕರಣ ಇಲ್ಲ: ಸಾಮಾನ್ಯ ಎಫ್.ಡಿ ಹೂಡಿಕೆಗಳಲ್ಲಿ ಅವಧಿಗೂ ಮುನ್ನ ಹಣ ಹಿಂಪಡೆಯುವ ಅವಕಾಶವಿರುತ್ತದೆ. ಆದರೆ ವಿಶೇಷ ರೀತಿಯ ನಿಶ್ಚಿತ ಠೇವಣಿಗಳಲ್ಲಿ ಅವಧಿಗೂ ಮುನ್ನ ಹೂಡಿಕೆ ಹಣ ಹಿಂಪಡೆಯಲು ಸಾಧ್ಯವಾಗುವುದಿಲ್ಲ. ಒಂದೊಮ್ಮೆ ನಿಗದಿತ ಸಮಯಕ್ಕೂ ಮೊದಲೇ ಹೂಡಿಕೆ ವಾಪಸ್ ತೆಗೆದುಕೊಳ್ಳಬೇಕಾದರೆ ದಂಡ ಪಾವತಿಸಬೇಕಾಗುತ್ತದೆ. ಹಾಗಾಗಿ ನಿಮ್ಮ ಹೂಡಿಕೆಯನ್ನು ವಿಶೇಷ ಎಫ್.ಡಿ ಮತ್ತು ಸಾಮಾನ್ಯ ಎಫ್.ಡಿ ಗಳ ನಡುವೆ ಹಂಚಿಕೆ ಮಾಡಿಕೊಳ್ಳಿ. ಸಾಮಾನ್ಯ ಎಫ್.ಡಿ.ಯಲ್ಲಿರುವ ಹಣ ತುರ್ತು ಅಗತ್ಯಗಳಿಗೆ ಬೇಕಾದಲ್ಲಿ ನೆರವಿಗೆ ಬರುತ್ತದೆ. ವಿಶೇಷ ಎಫ್.ಡಿ ಹೆಚ್ಚಿನ ಬಡ್ಡಿ ಲಾಭವನ್ನು ನಿಮಗೆ ತಂದುಕೊಡುತ್ತದೆ.

3. ಒಂದೇ ಬ್ಯಾಂಕ್‌ನಲ್ಲಿ ₹ 5 ಲಕ್ಷಕ್ಕಿಂತ ಹೆಚ್ಚಿನ ಎಫ್.ಡಿ ಬೇಡ: ಡೆಪಾಸಿಟ್ ಇನ್ಶೂರೆನ್ಸ್ ಆ್ಯಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (ಡಿಐಸಿಜಿಸಿ) ಪ್ರಕಾರ ಯಾವುದೇ ಬ್ಯಾಂಕ್‌ನಲ್ಲಿ ಗ್ರಾಹಕನ ಖಾತೆಯಲ್ಲಿರುವ ₹ 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ವಿಮೆಯ ರಕ್ಷಣೆ ಇರುವುದಿಲ್ಲ. ಒಂದೊಮ್ಮೆ ಬ್ಯಾಂಕ್ ದಿವಾಳಿಯಾದರೆ ಹೂಡಿಕೆದಾರನಿಗೆ ₹ 5 ಲಕ್ಷದವರೆಗಿನ ಮೊತ್ತ ಮಾತ್ರ ವಿಮೆಯ ರೂಪದಲ್ಲಿ ವಾಪಸ್ ಸಿಗುತ್ತದೆ. ಹಾಗಾಗಿ, ಬಡ್ಡಿ ಹೆಚ್ಚು ಸಿಗುತ್ತದೆ ಎಂದಿದ್ದರೂ ಒಂದೇ ಬ್ಯಾಂಕ್‌ನಲ್ಲಿ ₹ 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತ ಎಫ್.ಡಿ ಇಡುವುದನ್ನು ಸಾಧ್ಯವಾದಷ್ಟು ತಪ್ಪಿಸಿ. ₹ 5 ಲಕ್ಷಕ್ಕಿಂದ ಹೆಚ್ಚಿನ ಮೊತ್ತ ಎಫ್.ಡಿ ಇಡಬೇಕಾದರೆ ಬೇರೆ ಬೇರೆ ಬ್ಯಾಂಕ್ ಖಾತೆಗಳಲ್ಲಿ ಇಡಿ. ಇದರಿಂದ ನಿಮ್ಮ ಹೂಡಿಕೆ ಮೊತ್ತಕ್ಕೆ ಸುರಕ್ಷತೆ ಸಿಗುತ್ತದೆ.

4. ಎಫ್.ಡಿ ದರ ಜಾಸ್ತಿ ಆಗುವ ಸಾಧ್ಯತೆ ಪರಿಗಣಿಸಿ: ಹಣದುಬ್ಬರ, ಅಂದರೆ ಬೆಲೆ ಏರಿಕೆ ನಿಯಂತ್ರಣಕ್ಕೆ ತರುವ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮೇಲಿಂದ ಮೇಲೆ ಬಡ್ಡಿ ದರವನ್ನು ಹೆಚ್ಚಳ ಮಾಡುತ್ತಾ ಬಂದಿದೆ. ಮುಂದಿನ ದಿನಗಳಲ್ಲಿಯೂ ಬಡ್ಡಿ ದರ ಮತ್ತಷ್ಟು ಹೆಚ್ಚಳ ಆಗುವ ಸಾಧ್ಯತೆಯಿದೆ. ಹಾಗಾಗಿ ಒಂದೇ ಬಾರಿಗೆ ದೊಡ್ಡ ಮೊತ್ತದ ನಿಶ್ಚಿತ ಠೇವಣಿಯ ಮೊರೆ ಹೋಗಬೇಡಿ. ಹಂತ ಹಂತವಾಗಿ ಎಫ್.ಡಿ ಮಾಡುತ್ತಾ ಹೋಗುವ ಬಗ್ಗೆ ಪರಿಶೀಲಿಸಿ.

5. ತಂದೆ–ತಾಯಿ ಹೆಸರಿನಲ್ಲಿ ಎಫ್.ಡಿ ಇಡಿ: ಹಿರಿಯ ನಾಗರಿಕರ ಹೆಸರಿನಲ್ಲಿ ಎಫ್.ಡಿ ಇಟ್ಟರೆ ಹೆಚ್ಚಿನ ಬಡ್ಡಿ ಲಾಭ ಸಿಗುವ ಜೊತೆಗೆ ತೆರಿಗೆ ಅನುಕೂಲವೂ ಸಿಗುತ್ತದೆ. ಹಿರಿಯ ನಾಗರಿಕರಿಗೆ ಆದಾಯ ತೆರಿಗೆಯ ಸೆಕ್ಷನ್ 80 ಟಿಟಿಬಿ ಅಡಿಯಲ್ಲಿ ಹೆಚ್ಚಿನ ಬಡ್ಡಿ ವಿನಾಯಿತಿ ಸಿಗುವ ಜೊತೆಗೆ ಟಿಡಿಎಸ್ ವಿನಾಯಿತಿ ಮಿತಿ ₹ 50 ಸಾವಿರದವರೆಗೆ ಸಿಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಬ್ಯಾಂಕ್ ಎಫ್.ಡಿ ಬಡ್ಡಿ ದರ (ಫೆಬ್ರವರಿ 2023)

ಬ್ಯಾಂಕ್	ಅವಧಿ (ದಿನಗಳು)	ಬಡ್ಡಿ ದರ (%)
ಬ್ಯಾಂಕ್ ಆಫ್ ಬರೋಡ	399	7.3
ಸೆಂಟ್ರಲ್ ಬ್ಯಾಂಕ್	444	7.6
ಕೆನರಾ ಬ್ಯಾಂಕ್	400	7.25
ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್	501	8.50
ಕರ್ಣಾಟಕ ಬ್ಯಾಂಕ್	555	7.30
ಡಿಸಿಬಿ ಬ್ಯಾಂಕ್	800	8

(ಸೂಚನೆ: ಬ್ಯಾಂಕ್‌ಗಳ ಜಾಲತಾಣದಿಂದ ಈ ಮಾಹಿತಿ ಪಡೆಯಲಾಗಿದೆ. ಬಡ್ಡಿ ದರಗಳಲ್ಲಿ ಕೆಲ ವ್ಯತ್ಯಾಸ ಇರಬಹುದು.)

ವಿದೇಶಿ ಹೂಡಿಕೆ: ಜಿಗಿದ ಷೇರುಪೇಟೆ

ಫೆಬ್ರುವರಿ 17ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಚೇತರಿಸಿಕೊಂಡಿವೆ. 61,002 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.52ರಷ್ಟು ಗಳಿಸಿಕೊಂಡಿದೆ. 17,944 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.49ರಷ್ಟು ಜಿಗಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರು 10 ವಾರಗಳ ಬಳಿಕ ಷೇರುಪೇಟೆಗೆ ಮರಳಿ ಖರೀದಿ ಉತ್ಸಾಹ ತೋರಿರುವುದು ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,005.85 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 2,735.1 ಕೋಟಿ ಮೌಲ್ಯದ ಷೇರುಗಳನ್ನು ಪಡೆದುಕೊಂಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಪವರ್ ಸೂಚ್ಯಂಕ ಶೇ 3ರಷ್ಟು ಕುಸಿದಿದೆ. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2.8ರಷ್ಟು ಇಳಿಕೆಯಾಗಿದೆ. ಬ್ಯಾಂಕ್ ಸೂಚ್ಯಂಕ ಶೇ 1ರಷ್ಟು ತಗ್ಗಿದೆ. ಆದರೆ ಬಿಎಸ್‌ಇ ಲೋಹ ವಲಯ ಮತ್ತು ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕಗಳು ಕ್ರಮವಾಗಿ ಶೇ 2 ಮತ್ತು ಶೇ 1ರಷ್ಟು ಗಳಿಸಿಕೊಂಡಿವೆ.



ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಟೆಕ್ ಮಹೀಂದ್ರ, ಶ್ರೀ ಸಿಮೆಂಟ್ಸ್, ಒಎನ್‌ಜಿಸಿ, ಯುಪಿಎಲ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಗಳಿಸಿಕೊಂಡಿವೆ. ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್, ಅದಾನಿ ಗ್ರೀನ್ ಎನರ್ಜಿ ಮತ್ತು ನೈಕಾ ಕುಸಿದಿವೆ.

ಮುನ್ನೋಟ: ಈ ವಾರ ಸ್ಪೈಸ್‌ಜೆಟ್, ಕುಬೇರ್ ಉದ್ಯೋಗ್ ಲಿಮಿಟೆಡ್, ಪಾರ್ಶ್ವನಾಥ್ ಡೆವಲಪರ್ಸ್ ಲಿ., ಶರದ್ ಫೈಬರ್ಸ್ ಆ್ಯಂಡ್ ಯಾರ್ನ್ ಪ್ರೊಸೆಸರ್ಸ್ ಲಿ., ಎಲೆಂಟಾಸ್ ಬೆಕ್ ಇಂಡಿಯಾ ಲಿ., ನ್ಯೂ ಟೈಂ ಇನ್ಫ್ರಾಸ್ಟ್ರಕ್ಚರ್ ಲಿ., ಕೆಎಸ್‌ಬಿ ಲಿ., ಸ್ಯಾನೋಫಿ ಇಂಡಿಯಾ ಲಿ., ಸೇರಿದಂತೆ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು, ವಿದೇಶಿ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಸೇರಿದಂತೆ ಪ್ರಮುಖ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

'ಬಲಾಢ್ಯವಾಗದಿದ್ದರೆ ಜಗತ್ತು ಗಂಭೀರವಾಗಿ ಪರಿಗಣಿಸದು'

ಮಂಗಳೂರು: 'ಬಲಿಷ್ಠ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮದಿದ್ದರೆ, ಜನರನ್ನು ಉಪವಾಸ ಕೆಡವಿದರೆ, ಅವರನ್ನು ನಿರುದ್ಯೋಗಿಗಳನ್ನಾಗಿ-ಯೇ ಇರಿಸಿದರೆ ಜಗತ್ತು ಭಾರತವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ' ಎಂದು ಬಿಜೆಪಿ ಮುಖಂಡ ರಾಮ್ ಮಾಧವ್ ಅಭಿಪ್ರಾಯಪಟ್ಟರು.

'ಮಂಗಳೂರು ಸಾಹಿತ್ಯ ಉತ್ಸವ' ದಲ್ಲಿ 'ಭಾರತದ ಕುರಿತು ಜಗತ್ತಿನ ದೃಷ್ಟಿಕೋನ ಬದಲಾಯಿಸುವ ಅಗತ್ಯ' ಗೋಷ್ಠಿಯಲ್ಲಿ ಮಾತನಾಡಿದರು. ಐಟಿವಿ ನೆಟ್‌ವರ್ಕ್ ಡಾಟ್ ಕಾಮ್‌ನ ಸಂಪಾದಕೀಯ ನಿರ್ದೇಶಕ ಎಂ.ಡಿ. ನಲಪಾಡ್, 'ಮೊದಲ ಶೀತಲಸಮರದ ಲಾಭ ಪಡೆದು ಚೀನಾ ಬೆಳೆಯಿತು. ಈಗ ಶೀತಲ ಸಮರ 2.0 ನಡೆಯುತ್ತಿದ್ದು, ಭಾರತ ಇದರ ಲಾಭ ಪಡೆಯಬೇಕು' ಎಂದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	100 ಮೊಟ್ಟೆಗೆ	₹450
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹453

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹435-655
ದ್ವಿತಳಿ (ಬಿ.ವಿ)	₹300-736

ಮುಂಬೈ ವಿ.ವಿ. ಕನ್ನಡ ವಿಭಾಗದ ವಿದ್ಯಾರ್ಥಿಗಳ ಬರವಣಿಗೆಗೆ ಮೆಚ್ಚುಗೆ

ಇನ್ನು ಮುಂದೆ ಬರೆಯಲಾಗದು: ಭೈರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜ್ಞಾಪಕ ಶಕ್ತಿ ಕಡಿಮೆ-ಯಾಗುತ್ತಿದೆ. ಇನ್ನು ಮುಂದೆ ಬರೆಯೋಕೆ ಸಾಧ್ಯ ಇಲ್ಲ' ಎಂದು ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿದರು.

ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನದ ವತಿಯಿಂದ ಸಾಹಿತ್ಯ ವಿಮರ್ಶಕಿ ಹಾಗೂ ಲೇಖಕಿ ಎಲ್.ವಿ. ಶಾಂತಕುಮಾರಿ ಅವರಿಗೆ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಭಾನುವಾರ ಮಾತನಾಡಿದರು.

'ಶಾಂತಕುಮಾರಿ ವಯಸ್ಸಾದರೂ ಚೈತನ್ಯದಿಂದ ಚೆನ್ನಾಗಿ ಬರೆಯುತ್ತಿದ್ದಾರೆ. ಇನ್ನೂ ಬರೆಯಲಿ. ನಾನು ಅವರಿಗಿಂತ ಏಳು ವರ್ಷ ದೊಡ್ಡವನು. ಜ್ಞಾಪಕ ಶಕ್ತಿ ಕಡಿಮೆಯಾಗುತ್ತಿದೆ. ಕೆಲವು ಬಾರಿ ಲೇಖಕರ ಹೆಸರು ಜ್ಞಾಪಕಕ್ಕೆ ಬರುತ್ತದೆ, ಪುಸ್ತಕದ ಹೆಸರು ನೆನಪಾಗೊಲ್ಲ. ಸಂಜೆಯವರೆಗೆ ಯೋಚಿಸಿ ನನ್ನ ಕಾರ್ಯದರ್ಶಿ ಲಕ್ಷ್ಮಿ ಅವರಿಗೆ ಹೇಳಿ ಕಂಪ್ಯೂಟರ್‌ನಲ್ಲಿ ಹುಡುಕಿಸುತ್ತೇನೆ. ಎಷ್ಟೋ ಸಲ ಅತ್ಯಂತ ಗಣ್ಯ ವ್ಯಕ್ತಿ ನನ್ನ ಪಕ್ಕದಲ್ಲಿದ್ದರೂ ಅವರ ಹೆಸರನ್ನು ಮಾಧ್ಯಮಗೋಷ್ಠಿಯಲ್ಲೇ ಮರೆತುಹೋಗಿದ್ದೇನೆ. ಹೀಗಾಗಿ ಇನ್ನು ಮುಂದೆ ಬರೆಯೋಕೆ ಸಾಧ್ಯ ಇಲ್ಲ' ಎಂದು ಭೈರಪ್ಪ ಸ್ಪಷ್ಟವಾಗಿ ಹೇಳಿದರು.

'ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಎಂ.ಎ. ಅಧ್ಯಯನ ಮಾಡುತ್ತಿ-ರುವವರಿಗೆ ಪ್ರಬಂಧ, ವಿಮರ್ಶೆಗಳನ್ನು ಬರೆಯಲು ಬರುವುದಿಲ್ಲ' ಎಂದು ಭೈರಪ್ಪ ಅಭಿಪ್ರಾಯಪಟ್ಟರು.

'ಈ ಹಿಂದೆ ಕನ್ನಡ ಎಂ.ಎ. ಮಾಡು-ತ್ತಿರುವಾಗಲೇ ಚೆನ್ನಾಗಿ ಬರೆಯಲು ಬರುವ ಹಲವರಿದ್ದರು. ಇದೀಗ ಆ ಕಾಲ ಇಲ್ಲ. ಆದರೆ, ಮುಂಬೈ ವಿಶ್ವವಿದ್ಯಾ-ಲಯ ಕನ್ನಡ ವಿಭಾಗದ ವಿದ್ಯಾರ್ಥಿಗಳು ಚೆನ್ನಾಗಿ ಬರೆಯುತ್ತಿದ್ದಾರೆ' ಎಂದರು.

'ಬನಾರಸ್, ದೆಹಲಿ– ಜೆಎನ್‌ಯು, ಮದ್ರಾಸ್, ಮಧುರೈ ವಿಶ್ವವಿದ್ಯಾಲ-ಯಗಳಲ್ಲಿದ್ದ ಕನ್ನಡ ವಿಭಾಗವನ್ನು ಮುಚ್ಚಲಾಗಿದೆ. ಉಳಿದಿರುವುದು ಮುಂಬೈ ವಿಶ್ವವಿದ್ಯಾಲಯದಲ್ಲಿ ಮಾತ್ರ. ಅಲ್ಲಿ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿ-ದ್ದಾರೆ. ಅದರಲ್ಲೂ ದಕ್ಷಿಣ ಕನ್ನಡದವರು ಹೆಚ್ಚಿದ್ದಾರೆ. ದಕ್ಷಿಣ ಕನ್ನಡದವರಲ್ಲಿ-ರುವ ಕ್ರಿಯಾಶೀಲತೆ ನಮ್ಮ ಮೈಸೂರು ಭಾಗದವರಿಗೆ ಇಲ್ಲ. ಹೀಗಾಗಿ ಅಲ್ಲಿರುವ ದಕ್ಷಿಣ ಕನ್ನಡದವರು ಹಿಡಿದ ಕೆಲಸ ಮಾಡುತ್ತಾರೆ. ಅಲ್ಲಿ ಕನ್ನಡ ವಿಭಾಗ ಮುಂದುವರಿಯಲು ಶ್ರಮಿಸುತ್ತಿದ್ದಾರೆ' ಎಂದರು.

'ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತು ಹಲವು ವರ್ಷಗಳಾದರೂ ಅದಕ್ಕೆ ಪೂರಕವಾದ ಕೆಲಸಗಳಾಗಿ-ಲ್ಲ' ಎಂದು ಶಾಂತಕುಮಾರಿ ವಿಷಾದ ವ್ಯಕ್ತಪಡಿಸಿದರು. ಲೇಖಕ ಎಸ್.ಆರ್. ರಾಮಸ್ವಾಮಿ, ಶತವಧಾನಿ ಆರ್. ಗಣೇಶ್, ಕಾದಂಬರಿಕಾರ್ತಿ ಸಹನಾ ವಿಜಯಕುಮಾರ್, 'ಪ್ರೇಕ್ಷಾ' ಸಹ ಸಂಪಾದಕ ಬಿ.ಎನ್. ಶಶಿಕಿರಣ್ ಇದ್ದರು.



ಬೆಂಗಳೂರಿನಲ್ಲಿ ಭಾನುವಾರ ಲೇಖಕಿ ಎಲ್.ವಿ. ಶಾಂತಕುಮಾರಿ ಅವರಿಗೆ ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಸ್.ಆರ್. ರಾಮಸ್ವಾಮಿ, ಎಸ್.ಎಲ್. ಭೈರಪ್ಪ, ಶತಾವಧಾನಿ ಆರ್. ಗಣೇಶ್ ಇದ್ದರು

'ಅನುಮೋದನೆ ಇಲ್ಲದ ಕಾಮಗಾರಿಗೆ ಅನುದಾನವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಇಲಾಖೆಯ ಅನುಮೋದನೆ ಪಡೆಯದೇ ಹೊಸ ಕಾಮಗಾರಿಗಳನ್ನು ಮಂಜೂರು ಮಾಡಲು ಅವಕಾಶವಿಲ್ಲ. ಒಂದು ವೇಳೆ ಹೆಚ್ಚುವರಿ ಕಾಮಗಾರಿಗ-ಳನ್ನು ಕೆಳಹಂತದಲ್ಲಿ ಮಂಜೂರು ಮಾಡಿದರೆ ಅಂತಹ ಕಾಮಗಾರಿಗಳಿಗೆ ಅನುದಾನ ಒದಗಿಸುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಜೆಡಿಎಸ್‌ನ ಸುರೇಶ್ ಗೌಡ ಅವರ ಗಮನ ಸೆಳೆಯುವ ಸೂಚನೆಗೆ ಲಿಖಿತ ಉತ್ತರದಲ್ಲಿ ಈ ವಿಷಯ ತಿಳಿಸಿದ್ದಾರೆ.

ಆರ್ಥಿಕ ಇಲಾಖೆಯಿಂದ ಯಾವುದೇ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆ-ಗೊಳಿಸುತ್ತಿಲ್ಲ. ಆಯವ್ಯಯದಲ್ಲಿ ಅನುಮೋದನೆಯಾದ ಅನುದಾನವನ್ನೇ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಆದೇಶದಂತೆ ಆಡಳಿತ ಇಲಾಖೆಯವರೇ ಬಿಡುಗಡೆ-ಗೊಳಿಸುತ್ತಿದ್ದಾರೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಆಯವ್ಯಯದಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿ-ಗಳನ್ನು ಜಾರಿಗೊಳಿಸಲು ಕ್ರಮವ-ಹಿಸಬಹುದು ಎಂದು ಬೊಮ್ಮಾಯಿ ತಿಳಿಸಿದ್ದಾರೆ.

'ದಿಶಾಂಕ್ ಆ್ಯಪ್ ಮಾಹಿತಿ ವೀಕ್ಷಣೆಗೆ ಮಾತ್ರ'

ದಿಶಾಂಕ್ ಆ್ಯಪ್‌ನಲ್ಲಿರುವ ಮಾಹಿತಿಯು ಕೇವಲ ವೀಕ್ಷಣೆಗಾಗಿ ಇದ್ದು ಸರ್ವೆ ನಂಬರ್‌ಗಳ ಗಡಿ ಮತ್ತು ಇತರೆ ಮಾಹಿತಿಯನ್ನು ಯಾವುದೇ ಕಾನೂನಾತ್ಮಕ ಕಾರ್ಯಕ್ಕೆ ಬಳಕೆ ಮಾಡುವಂತಿಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಸುಬ್ಬಾರೆಡ್ಡಿ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅಶೋಕ, ಪ್ರಸ್ತುತ ಭೂಮಾಪನ ಇಲಾಖೆಯಲ್ಲಿ ಹಿಸ್ಸಾ ಡಿಜಿಟೈಸೇಷನ್ ಕಾರ್ಯ ಪ್ರಗತಿಯಲ್ಲಿದ್ದು, ಪ್ರಾಯೋಗಿಕವಾಗಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕುಗಳ ಎಲ್ಲಾ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿನ ಹಿಸ್ಸಾ ಡಿಜಿಟೈಸೇಷನ್ ಕಾರ್ಯಪೂರ್ಣಗೊಂಡಿದೆ. ಅವುಗಳನ್ನು ದಿಶಾಂಕ್ ಆ್ಯಪ್‌ನಲ್ಲಿ ಅಳವಡಿಸಲಾಗಿದೆ ಎಂದು ಹೇಳಿದ್ದಾರೆ.

ಉಳಿದ ತಾಲ್ಲೂಕುಗಳ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿನ ಹಿಸ್ಸಾ ಡಿಜಿಟೈಸೇಷನ್ ಕಾರ್ಯ-ಪ್ರಗತಿಯಲ್ಲಿದ್ದು ಹಂತ ಹಂತವಾಗಿ ಪೂರ್ಣಗೊಳಿಸಿ ದಿಶಾಂಕ್ ಆ್ಯಪ್‌ನಲ್ಲಿ ಅಳವಡಿಸಲಾಗುವುದು. ರಾಜ್ಯದಲ್ಲಿ ಡ್ರೋನ್ ಫ್ಲೈಯಿಂಗ್ ಆಧರಿಸಿದ ರೀ–ಸರ್ವೇ ಕಾರ್ಯ ಪ್ರಾರಂಭವಾಗಿದೆ. ಹಂತ–ಹಂತವಾಗಿ ಎಲ್ಲ ಗ್ರಾಮಗಳ ರೀ ಸರ್ವೇ ಕಾರ್ಯ ಕೈಗೊಂಡು, ಗ್ರಾಮ ನಕಾಶೆಗಳನ್ನು ಜಿಯೋ ರೆಫರೆನ್ಸಿಂಗ್ ಮಾಡಿ, ಹೆಚ್ಚಿನ ನಿಖರತೆಯೊಂದಿಗೆ ದಿಶಾಂಕ್ ಆ್ಯಪ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ.

'ಸಿಂಧೂರಿ ಭ್ರಷ್ಟಾಚಾರಕ್ಕೆ ಸರ್ಕಾರದ ರಕ್ಷಣೆ'

ಒಂದನೇ ಪುಟದಿಂದ

'ಇವರ ಪತಿ ಮತ್ತು ಮಾವ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, ಅದಕ್ಕೆ ಪೂರಕವಾಗಿ ಐಎಎಸ್ ಅಧಿಕಾರಿ ಹುದ್ದೆಯನ್ನು ದುರ್ಬಳಕೆ ಮಾಡಿಕೊಂಡು ಕಂದಾಯ ಇಲಾಖೆಯಿಂದ ಮಾಹಿತಿ ಪಡೆದುಕೊಂಡಿರುವ ಪ್ರಕರಣಗಳ ಸಾಕ್ಷ್ಯ ನನ್ನ ಬಳಿ ಇದೆ. ಪತಿಯ ಹೆಸರಿನಲ್ಲಿ ಜಾಲಹಳ್ಳಿ ಬಳಿ ದೊಡ್ಡ ಮನೆ ನಿರ್ಮಿಸುತ್ತಿದ್ದಾರೆ. ಅದಕ್ಕೆ ವಿದೇಶಗಳಿಂದ ವಸ್ತುಗಳನ್ನು ಆಮದು ಮಾಡಿಕೊಂಡಿರುವ ಮಾಹಿತಿಯೂ ಇದೆ. ಈ ವಿವರವನ್ನೇ ಸಿಂಧೂರಿ ಸರ್ಕಾರಕ್ಕೆ ಬಹಿರಂಗಪಡಿಸಿಲ್ಲ' ಎಂದು ಆರೋಪ ಮಾಡಿದ್ದಾರೆ.

'ಸಿಂಧೂರಿ ಅವರಿಂದಾಗಿ ಹಲವು ಮಂದಿ ಪುರುಷ ಐಎಎಸ್, ಐಪಿಎಸ್ ಅಧಿಕಾರಿಗಳು ತೊಂದರೆ ಅನುಭವಿಸಿ-ದ್ದಾರೆ. ಯೋಗ್ಯವಲ್ಲದ ಫೋಟೊಗಳನ್ನು ಪುರುಷ ಅಧಿಕಾರಿಗಳಿಗೆ ಕಳುಹಿಸಿ ಪ್ರಚೋದನೆ ನೀಡಿರುವುದಕ್ಕೂ ತಮ್ಮ ಬಳಿ ಸಾಕ್ಷ್ಯಗಳಿವೆ' ಎಂದು ರೂಪಾ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ'

ಒಂದನೇ ಪುಟದಿಂದ

'ಸಾಮಾಜಿಕ ಮಾಧ್ಯಮಗಳಲ್ಲಿ ನಾನು ಹಾಕಿದ್ದ ನನ್ನ ಫೋಟೊಗಳನ್ನು ಸಂಗ್ರಹಿಸಿ ತೇಜೋವಧೆಗೆ ಬಳಸುತ್ತಿದ್ದಾರೆ. ನಾನು ಐಎಎಸ್ ಅಧಿಕಾರಿಗಳಿಗೆ ಫೋಟೊಗಳನ್ನು ಕಳುಹಿಸಿದ್ದೇನೆ ಎಂಬ ಸುಳ್ಳು ಆರೋಪ ಮಾಡಿದ್ದಾರೆ. ಅಂತಹ ಅಧಿಕಾರಿಗಳ ಹೆಸರುಗಳನ್ನು ಬಹಿರಂಗಪಡಿಸಬೇಕು' ಎಂದು ಆಗ್ರಹಿಸಿದ್ದಾರೆ. ಸೇವಾ ನಡತೆ ನಿಯಮಗಳ ಉಲ್ಲಂಘನೆಗಾಗಿ ರೂಪಾ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ದೂರು ನೀಡುತ್ತೇನೆ. ಐಪಿಸಿ ಅಡಿಯಲ್ಲೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ ಎಂದು ಸಿಂಧೂರಿ ತಿಳಿಸಿದ್ದಾರೆ.

ಕುಸುಮಾ ಟ್ವೀಟ್

ರೂಪಾ ಮತ್ತು ರೋಹಿಣಿ ಸಿಂಧೂರಿ ಜಗಳ ನಡೆಯುತ್ತಿರು-ವಾಗಲೇ ಟ್ವೀಟ್ ಮಾಡಿರುವ ಐಎಎಸ್ ಅಧಿಕಾರಿಯಾಗಿದ್ದ ದಿವಂಗತ ಡಿ.ಕೆ. ರವಿ ಅವರ ಪತ್ನಿ ಎಚ್. ಕುಸುಮಾ, 'ಕರ್ಮ ಯಾರನ್ನೂ ಬಿಡುವುದಿಲ್ಲ... ಎಂದಿದ್ದಾರೆ. ರೂಪಾ ತಮ್ಮ ಪೋಸ್ಟ್‌ನಲ್ಲಿ ಡಿ.ಕೆ. ರವಿ ಕುರಿತು ಉಲ್ಲೇಖಿಸಿದ್ದರು. ಆ ಬಳಿಕ ಕುಸುಮಾ ಟ್ವೀಟ್ ಮಾಡಿದ್ದಾರೆ. ಅದನ್ನು ಟ್ಯಾಗ್ ಮಾಡಿ ಪ್ರತಿಕ್ರಿಯಿಸಿರುವ ರೂಪಾ, ಮತ್ತಷ್ಟು ಆರೋಪಗಳನ್ನು ಮಾಡಿದ್ದಾರೆ.

ದಾದಾಪೀರ್ ಸೇರಿ 10 ಮಂದಿಗೆ 'ಟೊಟೋ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೊಟೊ ಫಂಡ್ಸ್ ದಿ ಆರ್ಟ್ಸ್' (ಟಿ.ಎಫ್.ಎ) ಸಂಸ್ಥೆ ನೀಡುವ 2023ನೇ ಸಾಲಿನ 'ಟೊಟೋ ಪ್ರಶಸ್ತಿ'ಗೆ ಕನ್ನಡದ ಯುವ ಬರಹಗಾರ ದಾದಾಪೀರ್ ಜೈಮನ್ ಸೇರಿ 10 ಮಂದಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯು ಸಾಹಿತ್ಯ, ಕಲಾ ಕ್ಷೇತ್ರದ 30 ವರ್ಷದೊಳಗಿನ ಸಾಧಕರನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿದೆ. ಸೃಜನಶೀಲ ಕನ್ನಡ ಬರವಣಿಗೆಯ-ಲ್ಲಿ ದಾದಾಪೀರ್ ಜೈಮನ್ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಯು ₹50 ಸಾವಿರ ನಗದು ಒಳಗೊಂಡಿದೆ. ಸಂಗೀತ ವಿಭಾಗದಲ್ಲಿ ಕೋಲ್ಕತ್ತಾದ ದಿಂಡುನ್, ಬೆಂಗಳೂರಿನ ರೂಡಿ ಮಕ್ತಾ ಆಯ್ಕೆಯಾಗಿದ್ದು, ಪ್ರಶಸ್ತಿಯು ತಲಾ ₹60 ಸಾವಿರ ನಗದು ಒಳಗೊಂಡಿದೆ.



ದಾದಾಪೀರ್ ಜೈಮನ್

ಡಿಜಿಟಲ್ ಆರ್ಟ್ ವಿಭಾಗದ-ಲ್ಲಿ ಗುವಾಹಟಿಯ ಸಂಕಲ್ಪ ರಾಯ್ ಚೌಧರಿ, ಇಂಗ್ಲಿಷ್ ಸೃಜನಶೀಲ ಸಾಹಿತ್ಯ ವಿಭಾಗದಲ್ಲಿ ಕೊಹಿಮಾದ ಮೊಚಿಬಾ ಜಮೀರ್, ಬೆಂಗಳೂರಿನ ಅಪರ್ಣಾ ಚಿವುಕುಲ, ಛಾಯಾಗ್ರಹಣ ವಿಭಾಗದಲ್ಲಿ ನವದೆಹಲಿಯ ಅಶ್ವಿನ್ ಶರ್ಮಾ, ಲೇಹ್‌ನ ಅನುಜಾ ದಾಸ್‌ಗುಪ್ತಾ, ಕಿರುಚಿತ್ರ ವಿಭಾಗದಲ್ಲಿ ಯವತ್ಮಾಲ್‌ನ ಪ್ರತೀಕ್ ಗಿರೀಶ್ ಭೋಯರ್ ಹಾಗೂ ಮುರುಡೇಶ್ವರದ ನಿಖಿಲ್ ವಿನಯ್ ಆಯ್ಕೆ ಆಗಿದ್ದಾರೆ.

ಈ ಪ್ರಶಸ್ತಿಗಳು ತಲಾ 50 ಸಾವಿರ ನಗದು ಒಳಗೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.

‘ಸೆಬಿ, ಇ.ಡಿ ತನಿಖೆಗೆ ವಿನೋದ್ ಅದಾನಿ ಯೋಗ್ಯರಲ್ಲವೇ?’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸೆಬಿ ಅಥವಾ ಜಾರಿ ನಿರ್ದೇಶನಾಲಯ (ಇ.ಡಿ) ನಡೆಸುವ ತನಿಖೆಗೆ ಒಳಪಡಲು, ಉದ್ಯಮಿ ಗೌತಮ್ ಅದಾನಿ ಅವರ ಅಣ್ಣ ವಿನೋದ್ ಅದಾನಿ ಯೋಗ್ಯರಲ್ಲವೇ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಪಕ್ಷ ಭಾನುವಾರ ಪ್ರಶ್ನಿಸಿದೆ.

ಪ್ರತಿದಿನ ಪ್ರಧಾನಿ ಮೋದಿ ಅವರಿಗೆ ಪಕ್ಷವು ಮೂರು ಪ್ರಶ್ನೆಗಳನ್ನು ಕೇಳುತ್ತದೆ. ‘ಹಮ್ ಅದಾನಿ ಕೆ ಹೈ ಕೌನ್’ ಎಂಬ ಈ ಸರಣಿಯ 14ನೇ ಆವೃತ್ತಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ಪ್ರಶ್ನೆಯನ್ನು ಟ್ವೀಟ್ ಮಾಡಿದ್ದಾರೆ.

‘ಅದಾನಿ ಸಮೂಹದ ಒಂದು ಕಂಪನಿ ತೆಗೆದುಕೊಂಡ ಸಾಲದ ಹಣವನ್ನು ಸಮೂಹದ ಮತ್ತೊಂದು ಕಂಪನಿಗೆ ತಲುಪಿಸುವಲ್ಲಿ ವಿನೋದ್ ಅದಾನಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ವಿಷಯದಲ್ಲಿ ಅದಾನಿ ಸಮೂಹವು ಸತ್ಯ ಮುಚ್ಚಿಡುವ ಕಾರ್ಯ ಮಾಡುತ್ತಿದೆ’


ಜೈರಾಮ್ ರಮೇಶ್

ಎಂದು ಅವರು ಆರೋಪಿಸಿದ್ದಾರೆ.

‘ಚೀನಾ ಅತಿಕ್ರಮಣ ವಿಷಯದಲ್ಲಿ ಪ್ರಧಾನಿ ಮೌನ ವಹಿಸಿದ್ದಾರೆ ಎಂದ ಮಾತ್ರಕ್ಕೆ ಅದಾನಿಗೆ ಸಂಬಂಧಿಸಿ ನಾವು ಪ್ರಶ್ನೆ ಕೇಳುವುದನ್ನು ನಿಲ್ಲಿಸುತ್ತೇವೆ ಎಂದರ್ಥವಲ್ಲ’ ಎಂದಿದ್ದಾರೆ.

‘ಹೂಡಿಕೆದಾರರು ಹಾಗೂ ಸಾರ್ವಜನಿಕರಿಗೆ ನಿಮ್ಮ ಆಪ್ತ ಸ್ನೇಹಿತ ಯಾಕೆ ಸುಳ್ಳು ಹೇಳುತ್ತಿದ್ದಾರೆ. ವಿವಿಧ ರಾಜಕೀಯ ಪಕ್ಷಗಳು, ಮಾಧ್ಯಮ ಸಂಸ್ಥೆಗಳು, ನಿಮಗೆ ವಿಧೇಯರಾಗಿರದ ಉದ್ಯಮಿಗಳ ವಿರುದ್ಧ ಹಲವು ಸಂಸ್ಥೆಗಳಿಂದ ತನಿಖೆ ನಡೆಸುತ್ತಿದ್ದೀರಿ. ಆದರೆ, ನಿಮ್ಮ ಆಪ್ತಮಿತ್ರರು ಭ್ರಷ್ಟಾಚಾರ ನಡೆಸಿರುವುದು ಬಹಿರಂಗಗೊಂಡಿರುವಾಗ ಅವರ ವಿರುದ್ಧ ತನಿಖೆಗೆ ಈ ಸಂಸ್ಥೆಗಳನ್ನು ನಿಯೋಜಿಸುವಿರಾ’ ಎಂದೂ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

24ರಿಂದ ಕಾಂಗ್ರೆಸ್ ಮಹಾಧಿವೇಶನ: ಭಾರತ್ ಜೋಡೊ ಯಾತ್ರೆ ಯಶಸ್ಸಿನಿಂದ ಹೆಚ್ಚಿದ ಉತ್ಸಾಹ

ಮೈತ್ರಿಕೂಟ ನಾಯಕತ್ವ: ಚರ್ಚೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳ ಏಕತೆ ಸಾಧಿಸುವುದು ಹೇಗೆ ಹಾಗೂ ಮೈತ್ರಿಕೂಟ ರಚನೆಗೆ ಸಂಬಂಧಿಸಿ ಪ್ರಾದೇಶಿಕ ಪಕ್ಷಗಳ ನಿಲುವುಗಳ ಕುರಿತು ಛತ್ತೀಸಗಢದ ನವ ರಾಯಪುರದಲ್ಲಿ ಇದೇ ಶುಕ್ರವಾರದಿಂದ (ಫೆ.24) ಮೂರು ದಿನಗಳ ಕಾಲ ನಡೆಯಲಿರುವ ಕಾಂಗ್ರೆಸ್ ಪಕ್ಷದ ಮಹಾಧಿವೇಶನದಲ್ಲಿ ವಿಸ್ತೃತ ಚರ್ಚೆ ನಡೆಯುವ ಸಾಧ್ಯತೆ ಇದೆ.

ವಿರೋಧ ಪಕ್ಷಗಳು ರಚಿಸುವ ಯಾವುದೇ ಮೈತ್ರಿಕೂಟದಲ್ಲಿ ಕಾಂಗ್ರೆಸ್‌ಗೆ ಪ್ರಮುಖ ಪಾತ್ರ ಇರಲೇಬೇಕು ಎಂಬುದು ಪಕ್ಷದ ಸ್ಪಷ್ಟ ನಿಲುವಾಗಿದೆ. ಕಾಂಗ್ರೆಸ್ ಅನ್ನು ಹೊರಗಿಟ್ಟು ವಿರೋಧ ಪಕ್ಷಗಳ ಏಕತೆ ಸಾಧಿಸುವ ಯಾವುದೇ ಪ್ರಯತ್ನಗಳು ಯಶಸ್ವಿ ಆಗುವುದಿಲ್ಲ ಎಂಬ ಮಾತನ್ನು ಹಲವು ಬಾರಿ ಹೇಳಿರುವ ಪಕ್ಷದ ನಾಯಕರು, ಮಹಾಧಿವೇಶನದ ವೇದಿಕೆಯಲ್ಲೂ ಇದೇ ಮಾತನ್ನು ಪುನರುಚ್ಚರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

‘ಯಾರ ಪ್ರಮಾಣಪತ್ರವೂ ಬೇಡ’: ‘ಭಾರತ್ ಜೋಡೊ ಯಾತ್ರೆಯ ಯಶಸ್ಸಿನಿಂದ ಬೀಗುತ್ತಿರುವ ಕಾಂಗ್ರೆಸ್, ವಿರೋಧ ಪಕ್ಷಗಳ ಏಕತೆ ಸಾಧಿಸುವ ಪ್ರಯತ್ನದ ಮುಂದಾಳತ್ವ ವಹಿಸಿಕೊಳ್ಳಬೇಕು’ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಇತ್ತೀಚೆಗೆ ಹೇಳಿದ್ದರು. ನಿತೀಶ್ ಕುಮಾರ್ ಅವರ ಈ ಹೇಳಿಕೆಯನ್ನು ಕಾಂಗ್ರೆಸ್‌ನ ಕೆಲ ನಾಯಕರು ಸ್ವಾಗತಿಸಿದ್ದರೂ, ಮುಂದಾಳತ್ವ ವಹಿಸುವ ಸಲಹೆ ಬಗ್ಗೆ ಪಕ್ಷದಿಂದ ಸಕಾರಾತ್ಮಕವಾದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಈ ಕುರಿತು ಪ್ರತಿಕ್ರಿಯಿಸಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಕಾಂಗ್ರೆಸ್ ಪಕ್ಷಕ್ಕೆ ತಾನು ವಹಿಸಬೇಕಾದ ಪಾತ್ರದ ಕುರಿತು ಸ್ಪಷ್ಟ ಅರಿವು ಇದೆ. ನಾವು ಮುಂದಾಳತ್ವ ವಹಿಸಬೇಕು ಎಂದು ಯಾರೂ ನಮಗೆ ಪ್ರಮಾಣಪತ್ರ ನೀಡುವ ಅಗತ್ಯ ಇಲ್ಲ’ ಎಂದು ತಿರುಗೇಟು ನೀಡಿದ್ದಾರೆ.

‘ಬಿಜೆಪಿಯನ್ನು ಎದುರಿಸುವ ವಿಷಯದಲ್ಲಿ ರಾಜಿ ಆಗುವ ಪ್ರಶ್ನೆಯೇ ಇಲ್ಲ. ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯುವುದು ನಮ್ಮ ಗುರಿ. ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಕುರಿತು ಮಹಾಧಿವೇಶನದಲ್ಲಿ ಚರ್ಚಿಸಲಾಗುವುದು’ ಎಂದೂ ಹೇಳಿದ್ದಾರೆ.

‘ವಿರೋಧ ಪಕ್ಷಗಳ ಏಕತೆ ಸಾಧಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಈಗಾಗಲೇ ಕಾರ್ಯಪ್ರವೃತ್ತವಾಗಿದ್ದು, ಹಲವು ರಾಜಕೀಯ ಪಕ್ಷಗಳ ಜೊತೆ ಸಂಪರ್ಕದಲ್ಲಿದೆ. 2024ರ ಲೋಕಸಭಾ ಚುನಾವಣೆ ಹೊತ್ತಿಗೆ ವಿರೋಧ ಪಕ್ಷಗಳ ಏಕತೆ ಸಾಧಿಸುವುದು ಖಚಿತ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷವು ಮೈತ್ರಿಕೂಟದ ವಿರೋಧಿ ಎಂದು ಬಿಂಬಿಸುವುದು ಸರಿಯಲ್ಲ. ಕೇರಳ, ಮಹಾರಾಷ್ಟ್ರ, ಜಾರ್ಖಂಡ, ಬಿಹಾರ, ತ್ರಿಪುರಾ ಹಾಗೂ ತಮಿಳುನಾಡುಗಳಲ್ಲಿ ಪಕ್ಷವು ಮೈತ್ರಿ ಹೊಂದಿದೆ’ ಎಂದು ಮೂಲಗಳು ಹೇಳಿವೆ.

15 ಸಾವಿರ ಪ್ರತಿನಿಧಿಗಳು ಭಾಗಿ

ಮಹಾಧಿವೇಶನದಲ್ಲಿ ಪಕ್ಷದ ವಿವಿಧ ಘಟಕಗಳ 15 ಸಾವಿರದಷ್ಟು ಪ್ರತಿನಿಧಿಗಳು ಈ ಮಹಾಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಪ್ರತಿನಿಧಿಗಳ ಪೈಕಿ, 1,388 ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಎಐಸಿಸಿ ನೇಮಕ ಮಾಡಿರುವ 487, ಪ್ರದೇಶ ಕಾಂಗ್ರೆಸ್ ಸಮಿತಿಯ 9,915 ಪ್ರತಿನಿಧಿಗಳು ಇರುವರು. ಜಿಲ್ಲಾ ಘಟಕಗಳ ಅಧ್ಯಕ್ಷರು, ಮುಂಚೂಣಿ ಘಟಕಗಳ ಪದಾಧಿಕಾರಿಗಳು ಕೂಡ ಪ್ರತಿನಿಧಿಗಳಾಗಿ ಪಾಲ್ಗೊಳ್ಳುವರು.

‘ಒಟ್ಟು ಪ್ರತಿನಿಧಿಗಳ ಪೈಕಿ, 704 ಪ್ರತಿನಿಧಿಗಳು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದು, 228 ಅಲ್ಪಸಂಖ್ಯಾತರಿದ್ದಾರೆ. ಇತರ ಹಿಂದುಳಿದ ವರ್ಗದವರು 381, 192 ಪರಿಶಿಷ್ಟರು ಹಾಗೂ 133 ಬುಡಕಟ್ಟು ಸಮುದಾಯಗಳಿಗೆ ಸೇರಿದವರಿದ್ದಾರೆ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಕ್ತಿ ತುಂಬಿದ ಯಾತ್ರೆ’: ‘ಭಾರತ್ ಜೋಡೊ ಯಾತ್ರೆಯು ಪಕ್ಷಕ್ಕೆ ಭಾರಿ ಶಕ್ತಿ ತುಂಬಿದೆ. ಪ್ರಚಲಿತ ವಿದ್ಯಮಾನಗಳನ್ನು ಸಾರ್ವಜನಿಕರ ಬಳಿ ಹೇಗೆ ತೆಗೆದುಕೊಂಡು ಹೋಗಬೇಕು ಎಂಬ ಬಗ್ಗೆ ಸ್ಪಷ್ಟ ಮಾರ್ಗವನ್ನು ಸಹ ತೋರಿಸಿಕೊಟ್ಟಿದೆ’ ಎಂದು ಅವರು ಹೇಳಿದರು.

‘ಫೆ. 26ರಂದು ಮಧ್ಯಾಹ್ನ 2ಕ್ಕೆ ಮಹಾಧಿವೇಶನ ಮುಕ್ತಾಯಗೊಳ್ಳುವುದು. ಸಂಜೆ ಬಹಿರಂಗ ಸಭೆ ಆಯೋಜಿಸಲಾಗಿದೆ’ ಎಂದು ಪಕ್ಷದ ಖಜಾಂಚಿ ಪವನ್ ಬನ್ಸಲ್ ತಿಳಿಸಿದರು.

‘ಕಳೆದ ವರ್ಷ 15 ಸಾವಿರ ಅಂಗಾಂಗ ಕಸಿ’

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ನಂತರ ದೇಶದಲ್ಲಿ ಅಂಗಾಂಗ ಕಸಿ ಕುರಿತು ಜಾಗೃತಿ ಹೆಚ್ಚಿದೆ. ಇದೇ ಮೊದಲ ಬಾರಿ, ಕಳೆದ ವರ್ಷ ದಾಖಲೆಯ 15 ಸಾವಿರಕ್ಕೂ ಅಧಿಕ ಕಸಿ ಪ್ರಕ್ರಿಯೆಗಳನ್ನು ನೆರವೇರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಕಾರ್ಯದರ್ಶಿ ರಾಜೇಶ ಭೂಷಣ್ ಭಾನುವಾರ ಹೇಳಿದ್ದಾರೆ.

ಸಚಿವಾಲಯ ಆಯೋಜಿಸಿದ್ದ ‘ರಾಷ್ಟ್ರೀಯ ಅಂಗಾಂಗ ಹಾಗೂ ಅಂಗಾಂಶ ಕಸಿ ಸಂಘಟನೆ (ಎನ್‌ಒಟಿಟಿಒ) ವೈಜ್ಞಾನಿಕ ಸಂವಾದ–2023’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಂಗಾಂಗಗಳ ಕಸಿಗೆ ಸಂಬಂಧಿಸಿ ಮೂರು ಆದ್ಯತಾ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಕ್ರಮಬದ್ಧವಾದ ಪುನರ್‌ರಚನೆ, ಸಂವಹನ ಕಾರ್ಯತಂತ್ರ ಹಾಗೂ ವೃತ್ತಿಪರರ ಕೌಶಲ ವೃದ್ಧಿಗೆ ಆದ್ಯತೆ ನೀಡಬೇಕಿದೆ’ ಎಂದು ಹೇಳಿದರು.



ಶಿವರಾತ್ರಿ ಮೆರವಣಿಗೆ ಹಿಮಾಚಲ ಪ್ರದೇಶದ ಮಂಡಿಯಲ್ಲಿ ಮಹಾ ಶಿವರಾತ್ರಿ ಉತ್ಸವದ ಉದ್ಘಾಟನಾ ಮೆರವಣಿಗೆಯಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಭಾನುವಾರ ಸೇರಿದ್ದರು – ಪಿಟಿಐ ಚಿತ್ರ

ಅಸ್ಪೃಶ್ಯತೆ ವಿರುದ್ಧ ಹೋರಾಡಿ: ಭಾಗವತ್

ಬರೇಲಿ (ಉತ್ತರಪ್ರದೇಶ): ಭಾರತೀಯ ಕುಟುಂಬ ವ್ಯವಸ್ಥೆಯನ್ನು ಶ್ಲಾಘಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು, ‘ಪ್ರತಿ ಕುಟುಂಬದಲ್ಲೂ ರಾಷ್ಟ್ರೀಯತೆಯ ಭಾವನೆ ಜಾಗೃತವಾದಾಗ ದೇಶವು ಶಕ್ತಿಯುತವಾಗುತ್ತದೆ. ಅಂತೆಯೇ ಜಾತಿ ತಾರತಮ್ಯ, ಅಸಮಾನತೆ ಮತ್ತು ಅಸ್ಪೃಶ್ಯತೆಯನ್ನು ಕೊನೆಗಾಣಿಸಲು ಸಂಘದ ಸದಸ್ಯರು ಶ್ರಮಿಸಬೇಕು’ ಎಂದು ಭಾನುವಾರ ಕರೆ ನೀಡಿದ್ದಾರೆ.

‘ಕಾರ್ಯಕರ್ತ ಪರಿವಾರ್ ಮಿಲನ್’ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸದಸ್ಯರು ಮತ್ತು ಅವರ ಕುಟುಂಬಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಎಲ್ಲಾ ಅನಿಷ್ಟಗಳಿಂದ ಮುಕ್ತವಾದ ಸಾಮಾಜಿಕ ವಾತಾವರಣವನ್ನು ಸೃಷ್ಟಿಸುವುದು ಸಂಘ ಪ್ರಚಾರಕರ ಜವಾಬ್ದಾರಿಯಾಗಿದೆ’ ಎಂದರು.

‘ಜಾತಿ ತಾರತಮ್ಯ, ಅಸಮಾನತೆ, ಅಸ್ಪೃಶ್ಯತೆಯನ್ನು ಸಮಾಜದಿಂದ ತೊಡೆದುಹಾಕಬೇಕು. ಸಾಮಾಜಿಕ ದುರಹಂಕಾರ, ಕೀಳರಿಮೆ ಎರಡನ್ನೂ ಹೋಗಲಾಡಿಸಬೇಕು. ಅಂತೆಯೇ ಸಮಾಜವನ್ನು ಬೆಸೆಯುವ ಕೆಲಸವನ್ನು ಮಾಡಬೇಕು’ ಎಂದೂ ಹೇಳಿದರು.

ಯುಪಿಎ ಅವಧಿಯಲ್ಲಿ ಭಾರಿ ಭ್ರಷ್ಟಾಚಾರ: ಅಮಿತ್ ಶಾ

ಮಹಾರಾಷ್ಟ್ರ: ಲೋಕಸಭೆ ಚುನಾವಣೆಗೆ ಗೃಹ ಸಚಿವ ಕಹಳೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಲೋಕಸಭೆ ಚುನಾವಣೆಗೆ ಕಹಳೆ ಮೊಳಗಿಸಿರುವ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ಪ್ರತಿಪಕ್ಷ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ‘ಯುಪಿಎ ಆಡಳಿತವು ಭ್ರಷ್ಟಾಚಾರ ಮತ್ತು ಭದ್ರತಾ ಸಮಸ್ಯೆಗಳಿಂದ ದೇಶವನ್ನು ಅವ್ಯವಸ್ಥೆಗೆ ದೂಡಿದೆ’ ಎಂದು ಆರೋಪಿಸಿದರು.

ಕೊಲ್ಹಾಪುರ ಪಟ್ಟಣದಲ್ಲಿ ಭಾನುವಾರ ಬಿಜೆಪಿ ವಿಜಯ ಸಂಕಲ್ಪ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ‘ಬಿಜೆಪಿ ಮತ್ತು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಒಟ್ಟಾಗಿ 2024ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿವೆ. 2019ರ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ನಾವು ಒಟ್ಟು 48 ಸ್ಥಾನಗಳಲ್ಲಿ 42 ಸ್ಥಾನಗಳಲ್ಲಿ ಜಯ ಗಳಿಸಿದ್ದೇವೆ. ಆದರೆ, ಅದು ಸಾಲದು. 2024ರ ಚುನಾವಣೆಯಲ್ಲಿ ನಾವು 48 ಸ್ಥಾನಗಳಲ್ಲೂ ಜಯ ಗಳಿಸಬೇಕು’ ಎಂದು ಕರೆ ನೀಡಿದರು.

2004ರಿಂದ 2014ರ ಅವಧಿಯಲ್ಲಿ ಡಾ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ವಿರುದ್ಧ ತೀವ್ರ ಟೀಕೆ ಮಾಡಿದ ಶಾ, ‘ವಾಜಪೇಯಿ ಅವರು ಪ್ರಧಾನಿ ಹುದ್ದೆಯಿಂದ ನಿರ್ಗಮಿಸುವ ವೇಳೆಗೆ ಭಾರತದ ಆರ್ಥಿಕತೆಯು 11ನೇ ಸ್ಥಾನದಲ್ಲಿತ್ತು. ಆದರೆ, ಅರ್ಥಶಾಸ್ತ್ರಜ್ಞ ಮನಮೋಹನ್ ಸಿಂಗ್ ಅವರು 10 ವರ್ಷಗಳ ಕಾಲ ಸರ್ಕಾರವನ್ನು ನಡೆಸಿ, 2014ರಲ್ಲಿ ನಿರ್ಗಮಿಸಿದಾಗಲೂ ಭಾರತ 11ನೇ ಸ್ಥಾನದಲ್ಲಿಯೇ ಇತ್ತು. ಆದರೆ, ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡ ಬಳಿಕ ಪರಿಸ್ಥಿತಿ ಬದಲಾಗಿ, ದೇಶದ ಆರ್ಥಿಕತೆಯು 5ನೇ ಸ್ಥಾನಕ್ಕೇರಿತು’ ಎಂದರು.

‘ಯುಪಿಎ ಅವಧಿಯಲ್ಲಿ ಎಲ್ಲಾ ಸಚಿವರು ತಾವೇ ಪ್ರಧಾನಿ ಎಂದು ಭಾವಿಸಿದ್ದರು. ಆಗ ಒಟ್ಟು ₹ 12 ಲಕ್ಷ ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರ ನಡೆದಿದೆ’ ಎಂದೂ ಆರೋಪಿಸಿದರು.

‘ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ, ಈಶಾನ್ಯ ಮತ್ತು ಎಡಪಂಥೀಯ ಉಗ್ರವಾದದಿಂದ ಭಾರತವು ನರಳುತ್ತಿತ್ತು’ ಎಂದ ಶಾ, ‘ಇಂದು ನಾವು ಸರ್ಜಿಕಲ್ ಸ್ಟ್ರೈಕ್ ಮತ್ತು ವೈಮಾನಿಕ ದಾಳಿಗಳನ್ನು ನಡೆಸಿದ್ದೇವೆ’ ಎಂದರು.

‘ಶಿವಾಜಿ ಆಡಳಿತ ಸ್ಫೂರ್ತಿದಾಯಕ’

ನವದೆಹಲಿ (ಪಿಟಿಐ): ಛತ್ರಪತಿ ಶಿವಾಜಿ ಅವರ ಧೈರ್ಯ ಮತ್ತು ಉತ್ತಮ ಆಡಳಿತವು ನಮಗೆ ಸ್ಫೂರ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ಶಿವಾಜಿ ಜಯಂತಿ ಹಿನ್ನೆಲೆಯಲ್ಲಿ ನಮನ ಸಲ್ಲಿಸಿ ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ. ಜೊತೆಗೆ ಹಲವು ವರ್ಷಗಳಿಂದ ಶಿವಾಜಿ ಅವರಿಗೆ ನಮನ ಸಲ್ಲಿಸಿದ ತಮ್ಮ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಅಬಕಾರಿ ನೀತಿ ಹಗರಣದ ತನಿಖೆ

ಸಿಸೋಡಿಯಾ ತನಿಖೆ ಮುಂದೂಡಿದ ಸಿಬಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಸಿಬಿಐ ತನಿಖೆಗೆ ಭಾನುವಾರ ಹಾಜರಾಗಲಿಲ್ಲ. ‘ಬಜೆಟ್ ಸಿದ್ಧತೆ ನಡೆಯುತ್ತಿರುವುದರಿಂದ ತನಿಖೆಗೆ ಹಾಜರಾಗಲು ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಹಣಕಾಸು ಸಚಿವರೂ ಆಗಿರುವ ಸಿಸೋಡಿಯಾ ಅವರು ಸಿಬಿಐಗೆ ಮನವಿ ಮಾಡಿದ್ದರು.

‘ಬಜೆಟ್ ಕೆಲಸಗಳು ಅಂತ್ಯಗೊಂಡ ಬಳಿಕ, ಫೆಬ್ರುವರಿ ಕೊನೆ ವಾರದಲ್ಲಿ ತನಿಖೆಗೆ ಹಾಜರಾಗಲು ಅನುಮತಿ ನೀಡಬೇಕು ಎಂದು ಸಿಬಿಐ ಅನ್ನು ಕೋರಿದ್ದೇನೆ’ ಎಂದು ಸಿಸೋಡಿಯಾ ಅವರು ಪತ್ರಕರ್ತರಿಗೆ ತಿಳಿಸಿದರು. ‘ಸಿಸೋಡಿಯಾ ಮನವಿಯನ್ನು ಮಾನ್ಯ ಮಾಡಿರುವ ತನಿಖಾ ಸಂಸ್ಥೆಯು ಮುಂದಿನ ದಿನಗಳಲ್ಲಿ ತನಿಖೆಗೆ ಹಾಜರಾಗುವಂತೆ ತಿಳಿಸಿದೆ’ ಎಂದು ಸಿಬಿಐ ಮೂಲಗಳು ತಿಳಿಸಿವೆ.

‘ಸಿಬಿಐ ತನಿಖೆಗೆ ನಾನು ಯಾವಾಗಲೂ ಸಹಕಾರ ನೀಡಿದ್ದೇನೆ.



ಬಿಜೆಪಿಯು ಚುನಾವಣೆಯಲ್ಲಿ ಸೋತಿತು. ಶುಕ್ರವಾರ ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಮ್ಮೆ ಸೋತಿತು. ಆದ್ದರಿಂದ ಸೇಡು ತೀರಿಸಿಕೊಳ್ಳುತ್ತಿದೆ

ಮನೀಷ್ ಸಿಸೋಡಿಯಾ
ದೆಹಲಿ ಉಪ ಮುಖ್ಯಮಂತ್ರಿ

ಮುಂದೆಯೂ ನೀಡುತ್ತೇನೆ. ಆದರೆ, ಬಜೆಟ್ ಸಿದ್ಧತೆ ನಡೆಸುವುದಕ್ಕಾಗಿ ಕಾಲಾವಕಾಶ ಕೋರಿದ್ದೇನೆ ಅಷ್ಟೆ’ ಎಂದರು.

ಸೇಡು ತೀರಿಸಿಕೊಳ್ಳುತ್ತಿದೆ–ಆರೋಪ: ‘ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಯನ್ನು ಬಳಸಿಕೊಂಡು, ನನ್ನ ಮೇಲೆ ‘ಸೇಡು’ ತೀರಿಸಿಕೊಳ್ಳುತ್ತಿದೆ. ಬಹುಶಃ ಸಿಬಿಐ ನನ್ನನ್ನು ಬಂಧಿಸಲೂಬಹುದು’ ಎಂದು ಸಿಸೋಡಿಯಾ ಅವರು ಅನುಮಾನ ವ್ಯಕ್ತಪಡಿಸಿದರು.

ನಾಗರಿಕ ಪರಮಾಣು ಶಕ್ತಿ: ಸಹಕಾರಕ್ಕೆ ಒಲವು

ನವದೆಹಲಿ: ಉಕ್ರೇನ್ ಯುದ್ಧದಿಂದಾಗಿ ಇಂಧನ ಸುರಕ್ಷತೆಯ ಬಗ್ಗೆ ಜಾಗತಿಕ ಮಟ್ಟದಲ್ಲಿ ಕಾಳಜಿ ಹೆಚ್ಚುತ್ತಿರುವ ಕಾರಣ ಭಾರತ ಮತ್ತು ಅಮೆರಿಕವು ನಾಗರಿಕ ಪರಮಾಣು ಶಕ್ತಿ ಕ್ಷೇತ್ರದಲ್ಲಿ ಸಹಕಾರಕ್ಕೆ ಹೊಸ ಪ್ರಯತ್ನಗಳನ್ನು ನಡೆಸುತ್ತಿದೆ.

ಈಚೆಗೆ ದೆಹಲಿಯಲ್ಲಿ ನಡೆದ ಮಾತುಕತೆಯ ವೇಳೆ ಅಮೆರಿಕದ ಇಂಧನ ಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯದರ್ಶಿ ಜೆಫ್ರಿ ಆರ್.ಪ್ಯಾಟ್ ಅವರು 2008ರ ಭಾರತ–ಅಮೆರಿಕ ಪರಮಾಣು ಒಪ್ಪಂದದ ಚೌಕಟ್ಟಿನ ಅಡಿಯಲ್ಲಿ ನಾಗರಿಕ ಪರಮಾಣು ಶಕ್ತಿ ಕ್ಷೇತ್ರಗಳಲ್ಲಿ ಸಹಕಾರಕ್ಕೆ ಒಲವು ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಜಾಗತಿಕ ಇಂಧನ ಭದ್ರತೆ ಖಾತರಿಪಡಿಸುವಲ್ಲಿ ಭಾರತವು ಅಮೆರಿಕಕ್ಕೆ ಅತ್ಯಂತ ನಿರ್ಣಾಯಕ ಪಾಲುದಾರ ರಾಷ್ಟ್ರ’ ಎಂದು ಪ್ಯಾಟ್ ಹೇಳಿದ್ದಾರೆ.

ಪರಮಾಣು ದಾಳಿಯ ಎಚ್ಚರಿಕೆ: ಉತ್ತರ ಕೊರಿಯಾ

ಸೋಲ್ (ಎಪಿ): ಶನಿವಾರ ನಡೆಸಲಾದ ಖಂಡಾಂತರ ಕ್ಷಿಪಣಿ ಪ್ರಯೋಗವನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿರುವ ಉತ್ತರ ಕೊರಿಯಾ, ಅಮೆರಿಕ ಮತ್ತು ದಕ್ಷಿಣ ಕೊರಿಯಾ ಮೇಲೆ ಪರಮಾಣು ದಾಳಿ ನಡೆಸುವ ಅಭ್ಯಾಸದ ಭಾಗವಾಗಿಯೇ ಈ ಪರೀಕ್ಷೆ ನಡೆಸಿದ್ದಾಗಿ ಹೇಳಿಕೊಂಡಿದೆ.

ಅಮೆರಿಕ ಮತ್ತು ದಕ್ಷಿಣ ಕೊರಿಯಾಗಳು ಜಂಟಿ ಸೇನಾ ತಾಲೀಮು ನಡೆಸಲು ತಯಾರಿ ನಡೆಸುತ್ತಿದ್ದಂತೆಯೇ ಉತ್ತರ ಕೊರಿಯಾ ಹಠಾತ್ ರೀತಿಯಲ್ಲಿ ಶನಿವಾರ ತನ್ನ ಖಂಡಾಂತರ ಕ್ಷಿಪಣಿಯ ಪರೀಕ್ಷೆ ನಡೆಸಿತ್ತು.

ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರ ನೇರ ಆದೇಶದ ಮೇರೆಗೆ, ಯಾವುದೇ ಪೂರ್ವತಯಾರಿ ಇಲ್ಲದೆ ಈ ಖಂಡಾಂತರ ಕ್ಷಿಪಣಿಯ (ಹ್ವಾಸಂಗ್–15) ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು ಎಂದು ಉತ್ತರ ಕೊರಿಯಾದ ಅಧಿಕೃತ ಸುದ್ದಿಸಂಸ್ಥೆ ವರದಿ ಮಾಡಿದೆ.

ಬಲೂನ್ ವಿಷಯ ಎಳೆದಾಡಿದರೆ ಪರಿಣಾಮ ನೆಟ್ಟಗಿರಲ್ಲ –ಚೀನಾ

ಬೀಜಿಂಗ್ (ರಾಯಿಟರ್ಸ್/ಪಿಟಿಐ): ಅಮೆರಿಕವು ಇದೇ 4ರಂದು ಹೊಡೆದುರುಳಿಸಿದ ಚೀನಾದ ಬಲೂನ್ ವಿಷಯವನ್ನು ಇನ್ನಷ್ಟು ಎಳೆದಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಚೀನಾವು ಅಮೆರಿಕಕ್ಕೆ ಸ್ಪಷ್ಟ ಎಚ್ಚರಿಕೆ ನೀಡಿದೆ.

ಮ್ಯೂನಿಕ್ ಭದ್ರತಾ ಸಮಾವೇಶದಲ್ಲಿ ಚೀನಾದ ಹಿರಿಯ ರಾಜತಾಂತ್ರಿಕ ವಾಂಗ್ ಯಿ ಅವರೊಂದಿಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಮಾತುಕತೆ ನಡೆಸಿದ ಬಳಿಕ ಚೀನಾದ ವಿದೇಶಾಂಗ ಸಚಿವಾಲಯ ಈ ಬಗ್ಗೆ ಹೇಳಿಕೆ ಹೊರಡಿಸಿದೆ.

‘ಬಲೂನ್ ವಿಷಯವನ್ನು ಅಮೆರಿಕವು ಇನ್ನಷ್ಟು ಎಳೆದಾಡಲು ಪ್ರಯತ್ನಿಸಿದರೆ ಅದರಿಂದ ಎದುರಾಗುವ ದುಷ್ಪರಿಣಾಮವನ್ನು ಅಮೆರಿಕ ಎದುರಿಸಬೇಕಾಗುತ್ತದೆ’ ಎಂದು ಹೇಳಿಕೆ ತಿಳಿಸಿದೆ.

ವಾಷಿಂಗ್ಟನ್ ವರದಿ: ಮ್ಯೂನಿಕ್ ಸಮಾವೇಶದ ಹಿನ್ನೆಲೆಯಲ್ಲಿ ವಾಂಗ್ ಯಿ ಅವರೊಂದಿಗೆ ಮಾತುಕತೆ ನಡೆಸಿದ ವೇಳೆ ಬ್ಲಿಂಕನ್ ಅವರು ಉಕ್ರೇನ್ ವಿಷಯದಲ್ಲಿ ಚೀನಾವು ರಷ್ಯಾಕ್ಕೆ ಬೆಂಬಲ ನೀಡುತ್ತಿರುವ ವಿಷಯ ಪ್ರಸ್ತಾಪವಾಯಿತು, ಜತೆಗೆ ಬಲೂನ್ ಹಾರಾಟದಿಂದಾಗಿ ಅಮೆರಿಕದ ಸಾರ್ವಭೌಮತೆಗೆ ಧಕ್ಕೆಯಾಗಿರುವ ವಿಷಯವನ್ನೂ ಎತ್ತಿ ಹೇಳಿದರು.

ತಮಿಳಿನ ಹಾಸ್ಯ ನಟ ಮೈಲ್‌ಸಾಮಿ ನಿಧನ

ಚೆನ್ನೈ (ಪಿಟಿಐ): ‘ತಮಿಳು ಚಿತ್ರರಂಗದ ಪ್ರಸಿದ್ಧ ಹಾಸ್ಯ ನಟ ಮೈಲ್‌ಸಾಮಿ (57) ಅವರು ಭಾನುವಾರ ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾದರು’ ಎಂದು ದಕ್ಷಿಣ ಭಾರತ ಕಲಾವಿದರ ಸಂಘ ಹೇಳಿದೆ.



ಮೈಲ್‌ಸಾಮಿ ಅವರು ಸುಮಾರು 100 ಸಿನಿಮಾಗಳಲ್ಲಿ ನಟಿಸಿದ್ದಾರೆ.

ಶಿವರಾತ್ರಿ ಅಂಗವಾಗಿ ಶನಿವಾರ ರಾತ್ರಿ ದೇವಸ್ಥಾನವೊಂದರಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೈಲ್‌ಸಾಮಿ ಅವರ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬೆಂಗಳೂರು ಓಪನ್ ಟೆನಿಸ್ ಟೂರ್ನಿ ಇಂದಿನಿಂದ: ಕಣದಲ್ಲಿ ಪ್ರಜ್ವಲ್ ದೇವ್

ಪ್ರಶಸ್ತಿ ನಿರೀಕ್ಷೆಯಲ್ಲಿ ಚುನ್, ನಗಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸುಮಿತ್ ನಗಾಲ್ ಮತ್ತು ಚೀನಾ ತೈಪೆಯ ಸೆಂಗ್ ಚುನ್ ಸಿನ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರರು ಎನಿಸಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಯೋಜಿಸುತ್ತಿರುವ ಐದನೇ ಆವೃತ್ತಿಯ ಎಟಿಪಿ ಚಾಲೆಂಜರ್ ಟೂರ್ನಿಯು ಸೋಮವಾರ ಇಲ್ಲಿ ಆರಂಭವಾಗಲಿದೆ. ಇದೇ 26ರವರೆಗೆ ಟೂರ್ನಿ ನಡೆಯಲಿದೆ.

21 ವರ್ಷದ ಚುನ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 132ನೇ ಸ್ಥಾನದಲ್ಲಿದ್ದಾರೆ. ಸಿಂಗಲ್ಸ್ ವಿಭಾಗದಲ್ಲಿ ಇಲ್ಲಿ ಅವರಿಗೆ ಅಗ್ರಶ್ರೇಯಾಂಕ ಲಭಿಸಿದೆ.

ಚುನ್ ಅವರಿಗೆ ಮೊದಲ ಪಂದ್ಯದಲ್ಲಿ ಪೋರ್ಚುಗಲ್‌ನ ಫೆರೆರಾ ಸಿಲ್ವಾ ಸವಾಲು ಎದುರಾಗಿದೆ. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ, ಸ್ವೀಡನ್‌ನ ದಿಗ್ಗಜ ಬ್ಯೋನ್ ಬೋರ್ಗ್ ಪುತ್ರ ಲಿಯೊ ಬೋರ್ಗ್ ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ಯು ಸಿವು ಸು ಎದುರು ಆಡುವರು.

ಭಾರತದ ಸುಮಿತ್ ನಗಾಲ್ ಮತ್ತು ರಾಜ್ಯದ ಎಸ್.ಡಿ. ಪ್ರಜ್ವಲ್ ದೇವ್ ಅವರಿಗೆ ವೈಲ್ಡ್‌ಕಾರ್ಡ್ ಲಭಿಸಿದೆ. ಸುಮಿತ್ ಮೊದಲ ಪಂದ್ಯದಲ್ಲಿ ವಿಯೆಟ್ನಾಂನ ಲಿ ಹಾಂಗ್ ನ್ಯಾಮ್ ಎದುರು ಕಣಕ್ಕಿಳಿಯುವರು. ಪ್ರಜ್ವಲ್ ಅವರಿಗೆ ಕ್ವಾಲಿಫೈಯರ್‌ನಲ್ಲಿ ಗೆದ್ದ ಆಟಗಾರನ ಸವಾಲು ಎದುರಾಗಲಿದೆ.

2017ರಲ್ಲಿ ಸುಮಿತ್ ಮತ್ತು 2018ರಲ್ಲಿ ಪ್ರಜ್ಞೇಶ್ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು.

ಮುಖ್ಯ ಡ್ರಾ ಪಂದ್ಯಗಳ ಆರಂಭ: ಮಧ್ಯಾಹ್ನ 2ರಿಂದ

ಕ್ವಾಲಿಫೈಯರ್ಸ್: ಮುಕುಂದ್, ಪ್ರಜ್ಞೇಶ್‌ಗೆ ಗೆಲುವು

ಭಾರತದ ಶಶಿಕುಮಾರ್ ಮುಕುಂದ್ ಮತ್ತು ಪ್ರಜ್ಞೇಶ್ ಗುಣೇಶ್ವರನ್ ಅವರು ಭಾನುವಾರ ಕ್ವಾಲಿಫೈಯರ್ಸ್ ಪಂದ್ಯಗಳಲ್ಲಿ ಜಯ ಸಾಧಿಸಿದರು. ಮುಕುಂದ್ 6-1, 6-4ರಿಂದ ಜೆಕ್ ಗಣರಾಜ್ಯದ ಆ್ಯಂಡ್ರ್ಯೂ ಪೌಲ್ಸನ್ ಅವರನ್ನು ಮಣಿಸಿದರು. ಪ್ರಜ್ಞೇಶ್ 7-5, 6-4ರಿಂದ ಜಿಂಬಾಬ್ವೆಯ ಬೆಂಜಮಿನ್ ಲಾಕ್ ಸವಾಲು ಮೀರಿದರು. ವಿಜೇತ ಇಬ್ಬರೂ ಆಟಗಾರರು ಸೋಮವಾರ ಕ್ವಾಲಿಫೈಯರ್ಸ್‌ನ ಕೊನೆಯ ಪಂದ್ಯ ಆಡಲಿದ್ದಾರೆ.

ರಾಮ್‌ಕುಮಾರ್ ರಾಮನಾಥನ್ ಕ್ವಾಲಿಫೈಯರ್ಸ್‌ನ ಮೊದಲ ಪಂದ್ಯದಲ್ಲಿ 6-3, 5-7, 3-6ರಿಂದ ಜಪಾನ್‌ನ ಯಸುಟಕಾ ಯುಚಿಯಾಮಾ ಎದುರು ಸೋತರು.



ಪ್ರಜ್ಞೇಶ್ ಗುಣೇಶ್ವರನ್ ಆಟದ ವೈಖರಿ – ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

₹1.65 ಲಕ್ಷ ಪರಿಹಾರ ನೀಡಿ: ಕೇರಳ ಹೈಕೋರ್ಟ್

ಮಹಿಳೆಯು ಗೃಹಿಣಿಯಾಗಿದ್ದಾರೆ. ಆಕೆಗೆ ಆದಾಯವಿಲ್ಲ. ಆದ್ದರಿಂದ, ಆಕೆಗೆ ಹೆಚ್ಚಿನ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ವಾದಿಸಿದ ಕೇರಳ ರಸ್ತೆ ಸಾರಿಗೆ ನಿಗಮ

‘ಗೃಹಿಣಿ ಎನ್ನುವ ಕಾರಣಕ್ಕೆ ಪರಿಹಾರ ನಿರಾಕರಣೆ ಸಲ್ಲ’

ತಿರುವನಂತಪುರ: ಅಪಘಾತದಿಂದ ಗಾಯಗೊಂಡ ಮಹಿಳೆಯು, ಗೃಹಿಣಿ ಎನ್ನುವ ಕಾರಣಕ್ಕೆ ಪರಿಹಾರ ನೀಡಲು ನಿರಾಕರಿಸಿದ ಕೇರಳ ರಸ್ತೆ ಸಾರಿಗೆ ನಿಗಮದ ವಾದವನ್ನು ಕೇರಳ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಕೇರಳ ರಸ್ತೆ ಸಾರಿಗೆ ನಿಗಮದ ವಾದವನ್ನು ‘ಅತಿರೇಕ’ ಎಂದು ಕರೆದಿರುವ ನ್ಯಾಯಾಲಯವು, ಪರಿಹಾರ ನೀಡುವಲ್ಲಿ ಉದ್ಯೋಗಸ್ಥ ಮಹಿಳೆ, ಗೃಹಿಣಿ ಎಂಬೆಲ್ಲಾ ಮಾನದಂಡಗಳನ್ನು ಇರಿಸಿಕೊಳ್ಳಬಾರದು ಎಂದಿತು. ಮಹಿಳೆಗೆ ₹1.65 ಲಕ್ಷ ಪರಿಹಾರ ನೀಡಬೇಕು ಎಂದೂ ಆದೇಶಿಸಿತು.

‘ಕುಟುಂಬಕ್ಕಾಗಿ ಆಕೆ ತನ್ನೆಲ್ಲಾ ಸಮಯವನ್ನು ಮೀಸಲಿಡುತ್ತಾಳೆ. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುತ್ತಾಳೆ. ಪ್ರತಿಫಲಾಪೇಕ್ಷೆ ಬಯಸದೇ ಮಾಡುವ ಈ ಎಲ್ಲಾ ಕಾರ್ಯಗಳನ್ನು ಕ್ಷುಲ್ಲಕವಾಗಿ ಕಾಣಲು ಸಾಧ್ಯವಿಲ್ಲ’ ಎಂದು ನ್ಯಾಯಮೂರ್ತಿ ದೇವನ್ ರಾಮಚಂದ್ರನ್ ಅವರು ಅಭಿಪ್ರಾಯಪಟ್ಟರು.

ಪ್ರಕರಣವೇನು?: ಕೇರಳದ ಸರ್ಕಾರಿ ಬಸ್ ಚಾಲಕನ ನಿರ್ಲಕ್ಷ್ಯದಿಂದಾಗಿ 2006ರಲ್ಲಿ ಅಪಘಾತ ಸಂಭವಿಸಿತ್ತು. ಅಪಘಾತದಲ್ಲಿ ಮಹಿಳೆಯ ಬೆನ್ನುಮೂಳೆಗೆ ಗಂಭೀರ ಗಾಯಗಳಾಗಿತ್ತು. ಹಲವು ತಿಂಗಳುಗಳ ಕಾಲ ಮಹಿಳೆ ಹಾಸಿಗೆ ಹಿಡಿದಿದ್ದರು. ಆದ್ದರಿಂದ ಮಹಿಳೆಯು ತಮಗೆ ₹2 ಲಕ್ಷ ಪರಿಹಾರ ನೀಡಬೇಕು ಎಂದು ಕೋರಿದ್ದರು. ಆದರೆ, ಮಹಿಳೆಗೆ ₹40 ಸಾವಿರ ಪರಿಹಾರ ನೀಡಬೇಕು ಎಂದು ವಾಹನ ಅಪಘಾತ ಪರಿಹಾರ ನ್ಯಾಯಮಂಡಳಿ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಮಹಿಳೆಯು ಕೇರಳ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಿರಿಯಾ ಮೇಲೆ ಇಸ್ರೇಲ್ ವೈಮಾನಿಕ ದಾಳಿ: 5 ಸಾವು

ಡಮಾಸ್ಕಸ್, ಸಿರಿಯಾ (ಎಪಿ): ಸಿರಿಯಾದ ರಾಜಧಾನಿ ಡಮಾಸ್ಕಸ್‌ನ ವಸತಿ ಪ್ರದೇಶವನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಭಾನುವಾರ ಬೆಳಿಗ್ಗೆ ವೈಮಾನಿಕ ದಾಳಿ ನಡೆಸಿದ್ದು, ಐದು ಮಂದಿ ಮೃತಪಟ್ಟಿದ್ದಾರೆ ಹಾಗೂ 15 ಮಂದಿ ಗಾಯಗೊಂಡಿದ್ದಾರೆ.

ಸತ್ತವರಲ್ಲಿ ಒಬ್ಬ ಯೋಧರೂ ಸೇರಿದ್ದಾರೆ. ಹಲವು ಕಟ್ಟಡಗಳು ಧ್ವಂಸಗೊಂಡಿವೆ ಎಂದು ಸರ್ಕಾರಿ ಸ್ವಾಮ್ಯದ ‘ಸಾನಾ’ ಸುದ್ದಿಸಂಸ್ಥೆ ತಿಳಿಸಿದೆ.

ಶರ್ಮಿಳಾ ವಶಕ್ಕೆ: ಪಾದಯಾತ್ರೆಗೆ ನೀಡಿದ್ದ ಅನುಮತಿ ಹಿಂದಕ್ಕೆ

ಹೈದರಾಬಾದ್ (ಪಿಟಿಐ): ವೈಎಸ್‌ಆರ್ ತೆಲಂಗಾಣ ಪಕ್ಷದ (ವೈಎಸ್‌ಆರ್‌ಟಿಪಿ) ಮುಖ್ಯಸ್ಥೆ ವೈ.ಎಸ್. ಶರ್ಮಿಳಾ ಅವರನ್ನು ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಮೆಹಬೂಬಾಬಾದ್ ಜಿಲ್ಲೆಯಲ್ಲಿ ಭಾನುವಾರ ವಶಕ್ಕೆ ಪಡೆದಿದ್ದಾರೆ.

ಶರ್ಮಿಳಾ ಅವರು ರಾಜ್ಯದಾದ್ಯಂತ ನಡೆಸುತ್ತಿರುವ ‘ಪ್ರಜಾ ಪ್ರಸ್ಥಾನಂ’ ಪಾದಯಾತ್ರೆಯು ಶನಿವಾರ ಮೆಹಬೂಬಾಬಾದ್ ಜಿಲ್ಲೆಯಲ್ಲಿ ಸಾಗುತ್ತಿತ್ತು. ಈ ವೇಳೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಬಿಆರ್‌ಎಸ್ ಶಾಸಕ ಬನೂತ್ ಶಂಕರ್ ನಾಯ್ಕ್ ಅವರ ಕುರಿತು ಶರ್ಮಿಳಾ ಅವರು ಅವಹೇಳನಕಾರಿ ಮಾತನಾಡಿದ್ದರು ಎಂದು ಆರೋಪಿಸಲಾಗಿದೆ. ಈ ಸಂಬಂಧ ಶರ್ಮಿಳಾ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.


ವೈ.ಎಸ್. ಶರ್ಮಿಳಾ

‘ಶರ್ಮಿಳಾ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಆರ್‌ಎಸ್ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಾರೆ. ಶಾಂತಿ, ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಶರ್ಮಿಳಾ ಅವರು ನಡೆಸುತ್ತಿರುವ ಪಾದಯಾತ್ರೆಗೆ ನೀಡಲಾಗಿದ್ದ ಅನುಮತಿಯನ್ನು ರದ್ದು ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಶರ್ಮಿಳಾ ಅವರನ್ನು ಹೈದರಾಬಾದ್‌ಗೆ ಕಳುಹಿಸಲಾಗಿದೆ’ ಎಂದು ತಿಳಿಸಿದರು.

ಸಂತೋಷ್ ಟ್ರೋಫಿ ಫುಟ್‌ಬಾಲ್: ಸೆಮಿಗೆ ಕರ್ನಾಟಕ

ಬೆಂಗಳೂರು: ದಿಟ್ಟ ಆಟವಾಡಿದ ಕರ್ನಾಟಕ ತಂಡದವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಒಡಿಶಾದಲ್ಲಿ ಭಾನುವಾರ ನಡೆದ ಎ ಗುಂಪಿನ ಕೊನೆಯ ಪಂದ್ಯದಲ್ಲಿ ಕರ್ನಾಟಕ 2–2ರಿಂದ ಆತಿಥೇಯ ಒಡಿಶಾ ಎದುರು ಡ್ರಾ ಸಾಧಿಸಿತು. ಇದರೊಂದಿಗೆ ಗುಂಪಿನಲ್ಲಿ 9 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದೊಂದಿಗೆ ನಾಲ್ಕರ ಘಟ್ಟ ಪ್ರವೇಶಿಸಿತು. ಎ ಗುಂಪಿನಲ್ಲಿ ಅಗ್ರಸ್ಥಾನ (11 ಪಾಯಿಂಟ್ಸ್) ಗಳಿಸಿದ ಪಂಜಾಬ್ ಕೂಡ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಒಡಿಶಾ ಎದುರಿನ ಪಂದ್ಯದಲ್ಲಿ ಕರ್ನಾಟಕದ ಪರ ಎಂ. ಸುನೀಲ್ ಕುಮಾರ್ (17ನೇ ನಿಮಿಷ) ಮತ್ತು ಫ್ರಾಂಕ್ಲಿನ್ ಶಾಜನ್ (50ನೇ ನಿ.) ಗೋಲು ದಾಖಲಿಸಿದರು. ಒಡಿಶಾ ತಂಡಕ್ಕಾಗಿ ಪ್ರವೀಣ್ ಟಿಗ್ಗಾ (21ನೇ ನಿ.) ಮತ್ತು ಚಂದ್ರ ಮುದುಲಿ (35ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಕರ್ನಾಟಕ ತಂಡವು ಸತತ ಐದನೇ ಆವೃತ್ತಿಯಲ್ಲಿ ನಾಲ್ಕರ ಘಟ್ಟ ತಲುಪಿದ ಸಾಧನೆ ಮಾಡಿದೆ.

ವಿಶ್ವಕಪ್ ಶೂಟಿಂಗ್: ವರುಣ್‌ಗೆ ಕಂಚು

ನವದೆಹಲಿ (ಪಿಟಿಐ): ವರುಣ್ ತೋಮರ್ ಅವರು ಕೈರೊದಲ್ಲಿ ನಡೆಯುತ್ತಿರುವ ವಿಶ್ವಕಪ್ ಶೂಟಿಂಗ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದು ಭಾರತದ ಪದಕದ ಖಾತೆ ತೆರೆದಿದ್ದಾರೆ.

ಟೂರ್ನಿಯ ಮೊದಲ ದಿನವಾದ ಭಾನುವಾರ 19 ವರ್ಷದ ವರುಣ್, 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಪದಕ ಜಯಿಸಿದರು. ಭಾರತದ ಸರಬ್ಜೋತ್ ಸಿಂಗ್ ಮತ್ತು ವರುಣ್ ಮೂರನೇ ಸ್ಥಾನದ ರ‍್ಯಾಂಕಿಂಗ್ ಸುತ್ತಿನಲ್ಲಿ ಸಮಾನ (250.6) ಅಂಕ ಗಳಿಸಿದ್ದರು. ಆದರೆ ಶೂಟ್‌ಆಫ್‌ನಲ್ಲಿ ವರುಣ್ ಮೇಲುಗೈ ಸಾಧಿಸಿದರು.

ಸ್ಲೋವಾಕಿಯಾದ ಜುರಾಜ್ ತುಜಿನ್‌ಸ್ಕಿ ಫೈನಲ್‌ನಲ್ಲಿ 17–15ರಿಂದ ಇಟಲಿಯ ಪಾಲೊ ಮೊನ್ನಾ ಅವರನ್ನು ಮಣಿಸಿ ಚಿನ್ನ ಗೆದ್ದರು.

ಅಥ್ಲೆಟಿಕ್ಸ್: ಶಿವಾಜಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿ ಪಿ.ಎಂ. ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ಯೂತ್ ಮತ್ತು ಜೂನಿಯರ್ ಅಥ್ಲೆಟಿಕ್ಸ್‌ನ 10 ಸಾವಿರ ಮೀಟರ್ಸ್ ಓಟದಲ್ಲಿ ಕೂಟ ದಾಖಲೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 20 ವರ್ಷದೊಳಗಿನವರ ಸ್ಪರ್ಧೆಯಲ್ಲಿ, ಬೆಂಗಳೂರು ನಗರ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಶಿವಾಜಿ, 31 ನಿಮಿಷ 34.3 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ ಈ ಹಿಂದೆ ನರಸಿಂಗ್ ಪಟೇಲ್ (31 ನಿ. 38 ಸೆ.) ನಿರ್ಮಿಸಿದ್ದ ದಾಖಲೆಯನ್ನು ಮೀರಿದರು.

ಫಲಿತಾಂಶಗಳು (ವಿಜೇತರು ಮಾತ್ರ): ಬಾಲಕರು: 20 ವರ್ಷದೊಳಗಿನವರು: ಜಾವೆಲಿನ್ ಥ್ರೊ: ಶಶಾಂಕ್ ಪಾಟೀಲ್ (ಬೆಳಗಾವಿ, ದೂರ: 61.09 ಮೀ.). 10 ಸಾವಿರ ಮೀ. ರೇಸ್‌ವಾಕ್: ಸಾಧನ್ ಹೆಗಡೆ (ಬೆಳಗಾವಿ, ಕಾಲ: 1 ತಾಸು 11 ನಿ. 22 ಸೆ.). 10 ಸಾವಿರ ಮೀ. ಓಟ: ಶಿವಾಜಿ ಪಿ.ಎಂ. (ಬೆಂಗಳೂರು ನಗರ, ಕೂಟ ದಾಖಲೆ, ಕಾಲ: 31ನಿ. 34.3 ಸೆ). 3000 ಮೀ. ಸ್ಟೀಪಲ್‌ಚೇಸ್: ಗಣಪತಿ ಮಾಲಿಕ್ (ದಕ್ಷಿಣ ಕನ್ನಡ, ಕಾಲ: 10 ನಿ. 10.9 ಸೆ.). ಡೆಕಾಥ್ಲಾನ್: ಲೋಹಿತ್ (ಚಿತ್ರದುರ್ಗ, ಪಾಯಿಂಟ್ಸ್: 4,441). ಹ್ಯಾಮರ್‌ಥ್ರೊ: ಸಚಿನ್ (ಕೊಪ್ಪಳ, ದೂರ: 57.10 ಮೀ.).

ಬಾಲಕಿಯರು: 20 ವರ್ಷದೊಳಗಿನವರು: ಹೆಪ್ಟಾಥ್ಲಾನ್: ದೀಪ್ತಿ ಬಾಲರಾಜ್ (ಬೆಂಗಳೂರು ನಗರ, ಪಾಯಿಂಟ್ಸ್: 2,959). 300 ಮೀ. ಓಟ: ಟೀನಾ ವಾಂಖಡೆ (ಬೆಳಗಾವಿ, ಕಾಲ: 11ನಿ. 33.6 ಸೆ.). 10 ಸಾವಿರ ಮೀ. ರೇಸ್‌ವಾಕ್: ಅಕ್ಷಿತಾ ಕೆ. (ಬೆಂಗಳೂರು ನಗರ, 1 ತಾಸು 13 ನಿ. 13 ಸೆ.). ಜಾವೆಲಿನ್ ಥ್ರೊ: ಸಿಂಚನಾ ಸಿ.ಎಂ. (ದಕ್ಷಿಣ ಕನ್ನಡ, ದೂರ: 36.07 ಮೀ.). ಹ್ಯಾಮರ್ ಥ್ರೊ: ಪಿ.ಕೀರ್ತಿ (ಬಳ್ಳಾರಿ, 38.89 ಮೀ.).


ಶಿವಾಜಿ

ಕರಾಟೆ: ರಾಜ್ಯದ ಚೈತ್ರಶ್ರೀಗೆ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಚೈತ್ರಶ್ರೀ ಎನ್. ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ ಅಖಿಲ ಭಾರತ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದಾರೆ.


ಚೈತ್ರಶ್ರೀ ಎನ್.

ಚಾಂಪಿಯನ್‌ಷಿಪ್‌ನ 21 ವರ್ಷದೊಳಗಿನವರ ವಿಭಾಗದ ಕಟಾ ಸ್ಪರ್ಧೆಯಲ್ಲಿ ಚೈತ್ರಶ್ರೀಗೆ ಪದಕ ಒಲಿದಿದೆ. ಅಖಿಲ ಕರ್ನಾಟಕ ಕರಾಟೆ ಸಂಸ್ಥೆಯ ಅಧ್ಯಕ್ಷ ಅರುಣ್ ಮಾಚಯ್ಯ, ಪ್ರಧಾನ ಕಾರ್ಯದರ್ಶಿ ಭಾರ್ಗವ ರೆಡ್ಡಿ ಹಾಗೂ ಅಂಬೇಡ್ಕರ್ ತಾಂತ್ರಿಕ ಸಂಸ್ಥೆಯ ಸಿಬ್ಬಂದಿ ಚೈತ್ರಶ್ರೀ ಅವರನ್ನು ಅಭಿನಂದಿಸಿದ್ದಾರೆ.

ಬಾರ್ಡರ್–ಗಾವಸ್ಕರ್ ಟ್ರೋಫಿ: 'ಸೆವೆನ್ ಸ್ಟಾರ್' ಜಡೇಜ; 'ತ್ರೀ ಸ್ಟಾರ್' ಅಶ್ವಿನ್; ಮಣಿದ ಆಸ್ಟ್ರೇಲಿಯಾ

ಸ್ಪಿನ್ ಕಣದಲ್ಲಿ ಭಾರತ ಜಯಭೇರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೌರಾಷ್ಟ್ರದ ರವೀಂದ್ರ ಜಡೇಜ ಆಸ್ಟ್ರೇಲಿಯಾ ಕ್ರಿಕೆಟ್ ತಂಡಕ್ಕೆ ಮತ್ತೆ ಸಿಂಹಸ್ವಪ್ನರಾದರು. ಅವರ ಎಡಗೈ ಸ್ಪಿನ್ ಮೋಡಿಗೆ ಪ್ಯಾಟ್ ಕಮಿನ್ಸ್ ಬಳಗ ಶರಣಾಯಿತು.

ಇದರಿಂದಾಗಿ ಭಾರತ ತಂಡವು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಬಾರ್ಡರ್-ಗಾವಸ್ಕರ್ ಟ್ರೋಫಿ ಟೂರ್ನಿಯ 2ನೇ ಟೆಸ್ಟ್ ಪಂದ್ಯದ ಮೂರನೇ ದಿನವೇ ಜಯಭೇರಿ ಬಾರಿಸಿತು. ರೋಹಿತ್ ಬಳಗವು ಭಾನುವಾರ ಚಹಾವಿರಾಮಕ್ಕೂ ಮುನ್ನ 6 ವಿಕೆಟ್‌ಗಳಿಂದ ಗೆದ್ದು ನಾಲ್ಕು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು. ಇದರೊಂದಿಗೆ ಆಸ್ಟ್ರೇಲಿಯಾಕ್ಕೆ ಸರಣಿ ಜಯದ ಅವಕಾಶ ತಪ್ಪಿತು. ಇನ್ನೇನಿದ್ದರೂ ಉಳಿದೆರಡು ಪಂದ್ಯ ಗೆದ್ದು ಸಮ ಮಾಡಿಕೊಳ್ಳಲು ಪ್ರಯತ್ನಿಸಬೇಕು.

ಮೊದಲ ಇನಿಂಗ್ಸ್‌ನಲ್ಲಿ ಕೇವಲ 1 ರನ್ ಮುನ್ನಡೆ ಸಾಧಿಸಿದ್ದ ಪ್ರವಾಸಿ ಬಳಗವು ಆತಿಥೇಯರಿಗೆ ಬೃಹತ್ ಗುರಿಯೊಡ್ಡುವ ಯೋಚನೆಯಲ್ಲಿತ್ತು. ಆದರೆ, ಜಡೇಜ (12.1–1–42–7) ಕೈಯಿಂದ ಬಿಡುಗಡೆಯಾಗುತ್ತಿದ್ದ ಎಸೆತಗಳ ವೇಗ, ತಿರುವು ಮತ್ತು ಪುಟಿತವನ್ನು ಅಂದಾಜಿಸುವಲ್ಲಿ ಎಡವಿದ ಬ್ಯಾಟರ್‌ಗಳು ಕೈಕೈ ಹಿಸುಕಿಕೊಂಡರು. ಶನಿವಾರ ದಿನದಾಟದ ಮುಕ್ತಾಯಕ್ಕೆ ಆಸ್ಟ್ರೇಲಿಯಾ 1 ವಿಕೆಟ್‌ಗೆ 61 ರನ್ ಗಳಿಸಿತ್ತು. ಆದರೆ ಭಾನುವಾರ ಬೆಳಿಗ್ಗೆ ಈ ಮೊತ್ತಕ್ಕೆ 52 ರನ್‌ಗಳನ್ನು ಸೇರಿಸುವಷ್ಟರಲ್ಲಿ 9 ವಿಕೆಟ್ ಪತನವಾದವು. ಪ್ರವಾಸಿ ಬಳಗವು 113 ರನ್ ಗಳಿಸಿ ಆಲೌಟ್ ಆಯಿತು. ಮಾರ್ನಸ್ ಲಾಬುಷೇನ್ ಅವರು ಶ್ರೇಯಸ್ ಅಯ್ಯರ್ ಬಿಟ್ಟ ಕ್ಯಾಚ್‌ನಿಂದ ಸಿಕ್ಕ ಜೀವದಾನವನ್ನು ಬಳಸಿಕೊಳ್ಳುವಲ್ಲಿ ಎಡವಿದರು. ಆಫ್‌ಸ್ಪಿನ್ನರ್ ಅಶ್ವಿನ್ 3 ವಿಕೆಟ್ ತಮ್ಮದಾಗಿಸಿಕೊಂಡರು. 115 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಆಸ್ಟ್ರೇಲಿಯಾದ ಸ್ಪಿನ್ನರ್ ನೇಥನ್ ಲಯನ್ ಮತ್ತು ಟಾಡ್ ಮರ್ಫಿ ತಡೆಯೊಡ್ಡುವ ಪ್ರಯತ್ನ ಮಾಡಿದರು.

ಲಯನ್ ಎಸೆತಕ್ಕೆ ಮೊದಲ ಬಲಿಯಾದವರು ಕೆ.ಎಲ್. ರಾಹುಲ್. 3 ಎಸೆತಗಳನ್ನು ಆಡಿದ ಅವರು 1 ರನ್ ಗಳಿಸಿ ಅಲೆಕ್ಸ್‌ಗೆ ಕ್ಯಾಚಿತ್ತರು. ರೋಹಿತ್ ಮತ್ತು ಪೂಜಾರ 2ನೇ ವಿಕೆಟ್ ಜೊತೆಯಾಟದಲ್ಲಿ 33 ರನ್ ಸೇರಿಸಿದರು. ಅದರಲ್ಲಿ ರೋಹಿತ್ 155ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. 7ನೇ ಓವರ್‌ನಲ್ಲಿ ರೋಹಿತ್ ರನ್ ಔಟ್ ಆದರು.

ನಂತರ ಇನಿಂಗ್ಸ್‌ನಲ್ಲಿ ಪೂಜಾರ ತಮ್ಮ ರಕ್ಷಣಾ ಆಟವನ್ನು ಬಿಟ್ಟು ಕ್ರೀಸ್‌ನಿಂದ ಮುನ್ನುಗ್ಗಿ ಹೊಡೆತಗಳನ್ನು ಪ್ರಯೋಗಿಸಿದರು. ಚೆಂಡು ಅನಿರೀಕ್ಷಿತ ಬೌನ್ಸ್ ಮತ್ತು ತಿರುವು ಪಡೆಯುತ್ತಿದ್ದ ಪಿಚ್‌ನಲ್ಲಿ ಇಂತಹ ಆಟ ಅಗತ್ಯವಿತ್ತು. ಇನ್ನೊಂದೆಡೆ ವಿರಾಟ್ ಕೊಹ್ಲಿ (20), ಶ್ರೇಯಸ್ ಅಯ್ಯರ್ (12) ಕಾಣಿಕೆ ನೀಡಿ ನಿರ್ಗಮಿಸಿದರು. ವಿಕೆಟ್‌ಕೀಪರ್ ಶ್ರೀಕರ್ ಭರತ್ (ಅಜೇಯ 23) ವಿಕೆಟ್ ಪತನಕ್ಕೆ ಅವಕಾಶ ನೀಡಲಿಲ್ಲ. 3 ಬೌಂಡರಿ ಹಾಗೂ 1 ಸಿಕ್ಸರ್ ಸಿಡಿಸಿದರು.

ವಿಜಯಕ್ಕಾಗಿ ಒಂದು ರನ್ ಬೇಕಾಗಿದ್ದ ಸಂದರ್ಭದಲ್ಲಿ ಮರ್ಫಿ ಎಸೆತವನ್ನು ಬೌಂಡರಿಗೆರೆ ದಾಟಿಸಿದ ಪೂಜಾರ ತಮ್ಮ ನೂರನೇ ಟೆಸ್ಟ್ ಪಂದ್ಯದಲ್ಲಿ ವಿಜಯದ ಹೊಡೆತ ಬಾರಿಸಿದ ವಿಶ್ವದ ಎರಡನೇ ಆಟಗಾರನಾದರು. 17 ವರ್ಷಗಳ ಹಿಂದೆ ಸಿಡ್ನಿಯಲ್ಲಿ ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್, ದಕ್ಷಿಣ ಆಫ್ರಿಕಾದ ಎದುರು ಈ ಸಾಧನೆ ಮಾಡಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 78.4 ಓವರ್‌ಗಳಲ್ಲಿ 263. ಭಾರತ: 83.3 ಓವರ್‌ಗಳಲ್ಲಿ 262. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 31.1 ಓವರ್‌ಗಳಲ್ಲಿ 113 (ಟ್ರಾವಿಸ್ ಹೆಡ್ 43, ಮಾರ್ನಸ್ ಲಾಬುಷೇನ್ 35, ಆರ್. ಅಶ್ವಿನ್ 59ಕ್ಕೆ3, ರವೀಂದ್ರ ಜಡೇಜ 42ಕ್ಕೆ7) ಭಾರತ: 26.4 ಓವರ್‌ಗಳಲ್ಲಿ 4 ವಿಕೆಟ್‌ಗೆ 118 (ರೋಹಿತ್ ಶರ್ಮಾ 31, ಚೇತೇಶ್ವರ್ ಪೂಜಾರ ಅಜೇಯ 31, ವಿರಾಟ್ ಕೊಹ್ಲಿ 20, ಶ್ರೀಕರ್ ಭರತ್ ಅಜೇಯ 23, ನೇಥನ್ ಲಯನ್ 49ಕ್ಕೆ2, ಟಾಡ್ ಮರ್ಫಿ 22ಕ್ಕೆ1) ಫಲಿತಾಂಶ: ಭಾರತಕ್ಕೆ 6 ವಿಕೆಟ್ ಜಯ. ಸರಣಿಯಲ್ಲಿ 2–0 ಮುನ್ನಡೆ. ಪಂದ್ಯಶ್ರೇಷ್ಠ: ರವೀಂದ್ರ ಜಡೇಜ. **ಮುಂದಿನ ಪಂದ್ಯ:** ಇಂದೋರ್‌ನಲ್ಲಿ ಮಾರ್ಚ್ 1ರಿಂದ




ಆರ್. ಅಶ್ವಿನ್ ಅವರನ್ನು ಅಭಿನಂದಿಸಿದ ವಿಕೆಟ್‌ಕೀಪರ್ ಶ್ರೀಕರ್ ಭರತ್ ಹಾಗೂ ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

ವೇಗದ 25 ಸಾವಿರ ರನ್ ಗಳಿಕೆ (ಅಂತರರಾಷ್ಟ್ರೀಯ ಕ್ರಿಕೆಟ್)

ಇನಿಂಗ್ಸ್	ಆಟಗಾರ
549	ವಿರಾಟ್ ಕೊಹ್ಲಿ (ಭಾರತ)
577	ಸಚಿನ್ ತೆಂಡೂಲ್ಕರ್ (ಭಾರತ)
588	ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ)
594	ಜ್ಯಾಕ್ ಕ್ಯಾಲಿಸ್ (ದ.ಆಫ್ರಿಕಾ)
608	ಕುಮಾರ ಸಂಗಕ್ಕಾರ (ಶ್ರೀಲಂಕಾ)

ತಂಡದಲ್ಲಿ ಸ್ಥಾನ ಉಳಿಸಿಕೊಂಡ ರಾಹುಲ್

ನವದೆಹಲಿ: ಸತತ ವೈಫಲ್ಯ ಅನುಭವಿಸುತ್ತಿರುವ ಬ್ಯಾಟರ್ ಕೆ.ಎಲ್. ರಾಹುಲ್ ಅವರನ್ನು ಆಸ್ಟ್ರೇಲಿಯಾ ಎದುರಿನ ಸರಣಿಯ ಉಳಿದೆರಡು ಟೆಸ್ಟ್‌ಗಳಿಗೂ ತಂಡದಲ್ಲಿ ಉಳಿಸಿಕೊಳ್ಳಲಾಗಿದೆ. ಭಾನುವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯ್ಕೆ ಸಮಿತಿಯು ಭಾನುವಾರ ಆಸ್ಟ್ರೇಲಿಯಾ ಎದುರಿನ ಎರಡು ಟೆಸ್ಟ್ ಹಾಗೂ ಏಕದಿನ ಸರಣಿಗಾಗಿ ತಂಡವನ್ನು ಪ್ರಕಟಿಸಿದೆ.



ರಾಹುಲ್

ತಂಡಗಳು: ಟೆಸ್ಟ್: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಉಮೇಶ್ ಯಾದವ್, ಜೈದೇವ್ ಉನದ್ಕತ್.

ಏಕದಿನ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಕೆ.ಎಲ್. ರಾಹುಲ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ (ಉಪನಾಯಕ), ರವೀಂದ್ರ ಜಡೇಜ, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್, ಶಾರ್ದೂಲ್ ಠಾಕೂರ್, ಅಕ್ಷರ್ ಪಟೇಲ್, ಜೈದೇವ್ ಉನದ್ಕತ್.

ಟಿ20 ವಿಶ್ವಕಪ್: ಭಾರತಕ್ಕೆ ದೊಡ್ಡ ಗೆಲುವು ಅಗತ್ಯ

ಗೆಬೆರಾ, ದಕ್ಷಿಣ ಆಫ್ರಿಕಾ (ಪಿಟಿಐ): ಸೆಮಿಫೈನಲ್ ಮೇಲೆ ಕಣ್ಣಿಟ್ಟಿರುವ ಭಾರತ ತಂಡವು ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಐರ್ಲೆಂಡ್‌ಗೆ ಮುಖಾಮುಖಿಯಾಗಲಿದ್ದು, ಗೆಲುವಿನ ವಿಶ್ವಾಸದಲ್ಲಿದೆ.

ಶನಿವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ಎದುರು 11 ರನ್‌ಗಳಿಂದ ಸೋತಿದ್ದ ಭಾರತ, ಟೂರ್ನಿಯಲ್ಲಿ ಮೊದಲ ಬಾರಿ ನಿರಾಸೆ ಅನುಭವಿಸಿತ್ತು. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ, ಸದ್ಯ ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಕಲೆಹಾಕಿದ್ದು, ಬಿ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಈ ಗುಂಪಿನಲ್ಲಿ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ತಲುಪಿದೆ.

ಭಾರತ ತಂಡದ ಪರ ಇದುವರೆಗೆ ವಿಕೆಟ್ ಕೀಪರ್ ರಿಚಾ ಘೋಷ್ ಉತ್ತಮವಾಗಿ ಬ್ಯಾಟ್ ಬೀಸಿದ್ದಾರೆ. ಅವರಿಗೆ ಉಳಿದವರ ಬೆಂಬಲ ಸಿಗಬೇಕಿದೆ. ರಾಜೇಶ್ವರಿ ಗಾಯಕವಾಡ, ಪೂಜಾ ವಸ್ತ್ರಕರ್ ಮತ್ತು ರಾಧಾ ಯಾದವ್ ಬೌಲಿಂಗ್‌ನಲ್ಲಿ ಕೊಡುಗೆ ನೀಡಬೇಕಿದೆ. ಬಿ ಗುಂಪಿನಲ್ಲಿರುವ ಪಾಕಿಸ್ತಾನವು ಎರಡು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಕಲೆ ಹಾಕಿದ್ದು, ಉಳಿದೆ ರಡು ಪಂದ್ಯಗಳನ್ನು ಗೆದ್ದರೆ ಆ ತಂಡಕ್ಕೂ ಸೆಮಿಯ ಅವಕಾಶವಿದೆ. ಹೀಗಾಗಿ ಭಾರತ ದೊಡ್ಡ ಅಂತರದ ಜಯ ಸಾಧಿಸಿ ರನ್‌ರೇಟ್ ಉತ್ತಮಪಡಿಸಿಕೊಳ್ಳಬೇಕಿದೆ. ಐರ್ಲೆಂಡ್ ಈಗಾಗಲೇ ನಾಲ್ಕರ ಘಟ್ಟದ ಸ್ಪರ್ಧೆಯಿಂದ ಹೊರಬಿದ್ದಿದ್ದು, ಸಮಾಧಾನದ ಗೆಲುವಿಗಾಗಿ ಪ್ರಯತ್ನಿಸಲಿದೆ.

ಪಂದ್ಯ ಆರಂಭ: ಸಂಜೆ 6.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಗಾಲ್ಫ್: ಅದಿತಿಗೆ ಎರಡನೇ ಸ್ಥಾನ



ಅದಿತಿ ಅಶೋಕ್– ಎಎಫ್‌ಪಿ ಚಿತ್ರ

ಕೇಕ್, ಸೌದಿ ಅರೇಬಿಯಾ (ಪಿಟಿಐ): ಭಾರತದ ಅದಿತಿ ಅಶೋಕ್ ಅವರು ಅಮೋಘ ಲಯ ಮುಂದುವರಿಸಿದ್ದು, ಇಲ್ಲಿ ನಡೆದ ಆರಾಮ್ಕೊ ಸೌದಿ ಮಹಿಳಾ ಇಂಟರ್‌ನ್ಯಾಷನಲ್ ಗಾಲ್ಫ್ ಟೂರ್ನಿಯಲ್ಲಿ ಎರಡನೇ ಸ್ಥಾನ ಗಳಿಸಿದರು.

ಕರ್ನಾಟಕದ ಅದಿತಿ ಇತ್ತೀಚೆಗೆ ಕೆನ್ಯಾ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದರೆ, ಮೊರೊಕ್ಕೊದಲ್ಲಿ ಮೂರನೇ ಸ್ಥಾನ ಗಳಿಸಿದ್ದರು.

ಸೌದಿ ಟೂರ್ನಿಯಲ್ಲಿ ನ್ಯೂಜಿಲೆಂಡ್‌ನ ಲಿಡಿಯಾ ಕೊ ಪ್ರಶಸ್ತಿ ಗೆದ್ದುಕೊಂಡರು. ಅದಿತಿ ಕೇವಲ ಒಂದು ಶಾಟ್‌ನಿಂದ ಹಿಂದುಳಿದರು.

'ಇದು ಅತ್ಯುತ್ತಮ ಆರಂಭ. ಇಲ್ಲಿ ಉತ್ತಮ ಸ್ಕೋರ್ ದಾಖಲಿಸಿದೆ' ಎಂದು ಅದಿತಿ ಪ್ರತಿಕ್ರಿಯಿಸಿದ್ದಾರೆ.

ಸೌರಾಷ್ಟ್ರ ತಂಡದ ಮುಡಿಗೆ ರಣಜಿ ಕಿರೀಟ

ಕೋಲ್ಕತ್ತ (ಪಿಟಿಐ): ಪಂದ್ಯದ ಎಲ್ಲ ಹಂತದಲ್ಲಿಯೂ ಬಿಗಿಹಿಡಿತ ಸಾಧಿಸಿದ ಸೌರಾಷ್ಟ್ರ ತಂಡವು ರಣಜಿ ಕ್ರಿಕೆಟ್ ಟ್ರೋಫಿ ಗೆದ್ದುಕೊಂಡಿತು.

ಭಾನುವಾರ ಮುಗಿದ ಫೈನಲ್‌ನಲ್ಲಿ ಅರ್ಧಡಜನ್ ವಿಕೆಟ್‌ಗಳನ್ನು ಕಬಳಿಸಿದ ನಾಯಕ, ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ದಾಳಿಗೆ ಬಂಗಾಳ ತಂಡವು ತನ್ನ ತವರಿನಂಗಳದಲ್ಲಿಯೇ 9 ವಿಕೆಟ್‌ಗಳಿಂದ ಸೋತಿತು.

ಈಡನ್ ಗಾರ್ಡನ್‌ನಲ್ಲಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬಂಗಾಳ ತಂಡವು ಎರಡನೇ ಇನಿಂಗ್ಸ್‌ನಲ್ಲಿ 70.4 ಓವರ್‌ಗಳಲ್ಲಿ 241 ರನ್ ಗಳಿಸಿ ಆಲೌಟ್ ಆಯಿತು. ಕೇವಲ 12 ರನ್‌ಗಳ ಗೆಲುವಿನ ಗುರಿಯನ್ನು ಸೌರಾಷ್ಟ್ರಕ್ಕೆ ಒಡ್ಡಿತು.

2.4 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡ ಸೌರಾಷ್ಟ್ರವು 14 ರನ್ ಗಳಿಸಿ ಜಯಿಸಿತು. ಉನದ್ಕತ್ ಬಳಗವು ರಣಜಿ ಟ್ರೋಫಿ ಗೆಲುವಿನ ಸಾಧನೆ ಮಾಡುತ್ತಿರುವುದು ಇದು ಎರಡನೇ ಬಾರಿ. 2019-20ರಲ್ಲಿಯೂ ಸೌರಾಷ್ಟ್ರ ತಂಡವು ಬಂಗಾಳ ಎದುರು ಫೈನಲ್‌ನಲ್ಲಿ ಗೆದ್ದಿತ್ತು.



ರಣಜಿ ಟ್ರೋಫಿಯೊಂದಿಗೆ ಸಂಭ್ರಮಿಸಿದ ಸೌರಾಷ್ಟ್ರ ನಾಯಕ ಜೈದೇವ್ ಉನದ್ಕತ್ ಹಾಗೂ ಸಹ ಆಟಗಾರರು –ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ; 54.1 ಓವರ್‌ಗಳಲ್ಲಿ 174. ಸೌರಾಷ್ಟ್ರ: 110 ಓವರ್‌ಗಳಲ್ಲಿ 404. ಎರಡನೇ ಇನಿಂಗ್ಸ್: ಬಂಗಾಳ 70.4 ಓವರ್‌ಗಳಲ್ಲಿ 241 (ಅನುಸ್ಟುಪ್ ಮಜುಂದಾರ್ 61, ಮನೋಜ್ ತಿವಾರಿ 68, ಶಹಬಾಜ್ ಅಹಮದ್ 27, ಇಶಾನ್ ಪೊರೆಲ್ 22, ಜೈದೇವ್ ಉನದ್ಕತ್ 85ಕ್ಕೆ6, ಚೇತನ್ ಸಕಾರಿಯಾ 76ಕ್ಕೆ3) ಸೌರಾಷ್ಟ್ರ: 2.4 ಓವರ್‌ಗಳಲ್ಲಿ 1 ವಿಕೆಟ್‌ಗೆ 14 (ಹರ್ವಿಕ್ ದೇಸಾಯಿ ಔಟಾಗದೆ 4, ವಿಶ್ವರಾಜ್ ಜಡೇಜ ಔಟಾಗದೆ 10, ಆಕಾಶದೀಪ್ 5ಕ್ಕೆ1) ಫಲಿತಾಂಶ: ಸೌರಾಷ್ಟ್ರ ತಂಡಕ್ಕೆ 9 ವಿಕೆಟ್‌ಗಳ ಜಯ.

ಇಂಗ್ಲೆಂಡ್‌ಗೆ ಭರ್ಜರಿ ಜಯ

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಪಿ): ಜೇಮ್ಸ್ ಆ್ಯಂಡರ್ಸನ್ (18ಕ್ಕೆ 4) ಹಾಗೂ ಸ್ಟುವರ್ಟ್ ಬ್ರಾಡ್ (49ಕ್ಕೆ 4) ಅವರ ಬೌಲಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಮೊದಲ ಟೆಸ್ಟ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಭಾನುವಾರ ಕೊನೆಗೊಂಡ ಪಂದ್ಯದಲ್ಲಿ ಇಂಗ್ಲೆಂಡ್ 267 ರನ್‌ಗಳಿಂದ ಆತಿಥೇಯ ನ್ಯೂಜಿಲೆಂಡ್‌ಗೆ ಸೋಲುಣಿಸಿತು. ಇದರೊಂದಿಗೆ ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 9 ವಿಕೆಟ್‌ಗೆ 325 ಡಿಕ್ಲೇರ್ಡ್. ನ್ಯೂಜಿಲೆಂಡ್ 82.5 ಓವರ್‌ಗಳಲ್ಲಿ 306. ಎರಡನೇ ಇನಿಂಗ್ಸ್: ಇಂಗ್ಲೆಂಡ್ 73.5 ಓವರ್‌ಗಳಲ್ಲಿ 374. ನ್ಯೂಜಿಲೆಂಡ್: 45.3 ಓವರ್‌ಗಳಲ್ಲಿ 126 (ಟಾಮ್ ಲಥಾಮ್ 15, ಡೆರಿಲ್ ಮಿಚೆಲ್ ಔಟಾಗದೆ 57, ಮೈಕಲ್ ಬ್ರೇಸ್‌ವೆಲ್ 25; ಜೇಮ್ಸ್ ಆ್ಯಂಡರ್ಸನ್ 18ಕ್ಕೆ 4, ಸ್ಟುವರ್ಟ್ ಬ್ರಾಡ್ 49ಕ್ಕೆ 4). ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 267 ರನ್‌ಗಳ ಗೆಲುವು